# ಪ್ರಸಾದ

ದ್ವೈಮಾಸಿಕ

ಸಂಪುಟ ೩೬ ಸಂಚಿಕೆ ೬ ನವೆಂಬರ್–ಡಿಸೆಂಬರ್ ೨೦೨೧



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಕುಲಾಧಿಪತಿಗಳಾದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ 12ನೇ ಘಟಿಕೋತ್ಸವ. ಡಾ. ಆರ್. ಸುಧೀಂದ್ರ ಭಟ್, ಡಾ. ಹೆಚ್. ಬಸವನಗೌಡಪ್ಪ, ಡಾ. ಸಿ.ಜಿ. ಬೆಟಸೂರಮಠ, ಡಾ. ಸುರೀಂದರ್ ಸಿಂಗ್, ರಾಜರ್ಷಿ ಡಾ. ವೀರೇಂದ್ರ ಹೆಗ್ಗಡೆಯವರು, ಡಾ. ಬಿ. ಸುರೇಶ್, ಶ್ರೀ ಎಸ್. ಸತ್ಯಂ, ಡಾ. ಎಸ್. ಸಚ್ಚಿದಾನಂದ, ಡಾ. ಬಿ. ಮಂಜುನಾಥ್‌ರವರುಗಳ ಜೊತೆ ಚಿನ್ನದ ಪದಕ ವಿಜೇತ ಪದವೀಧರರು (17 ಡಿಸೆಂಬರ್ 2021).



ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ 28ನೇ ಸಂಗೀತ ಸಮ್ಮೇಳನವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಲಾಯಿತು. ವಿದ್ವಾನ್ ಮೈಸೂರು ಎಂ. ಮಂಜುನಾಥ್, ಡಾ. ಆರ್.ಕೆ. ಪದ್ಮನಾಭ, ಪ್ರೊ. ಜಿ. ಹೇಮಂತಕುಮಾರ್, ವಿದ್ವಾನ್ ಮೈಸೂರು ಎಂ. ನಾಗರಾಜರವರುಗಳಿದ್ದಾರೆ (2 ಡಿಸೆಂಬರ್ 2021).

# ಪ್ರಸಾದ

**ಸಂಪುಟ 36 : ಸಂಚಿಕೆ 6** **ನವೆಂಬರ್–ಡಿಸೆಂಬರ್ 2021**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ

ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ

**ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು**

---

ಮುಖಪುಟ ಚಿತ್ರ

ಉಡುಪಿಯ ಶ್ರೀ ಅದಮಾರು ಮಠದ ಪರ್ಯಾಯ ಮಂಗಲೋತ್ಸವದ 'ವಿಶ್ವಾರ್ಪಣಂ' ಸಮಾರಂಭದ 9ನೇ ದಿನದ ಕಾರ್ಯಕ್ರಮಕ್ಕೆ ಪರಮಪೂಜ್ಯ ಜಗದ್ಗುರುಗಳು ದಯಮಾಡಿಸಿದ ಸಂದರ್ಭದಲ್ಲಿ ಶ್ರೀಕೃಷ್ಣ ಮಠಕ್ಕೆ ಭೇಟಿ ನೀಡಿದರು. ಶ್ರೀ ಅದಮಾರು ಮಠದ ಶ್ರೀ ಈಶಪ್ರಿಯತೀರ್ಥ ಶ್ರೀಪಾದಂಗಳಿದ್ದಾರೆ (13 ಡಿಸೆಂಬರ್ 2021)


**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ: 10/-**

## ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಡಾ. ಎಚ್. ತಿಪ್ಪೇರುದ್ರಸ್ವಾಮಿಗಳು ನಿರೂಪಿಸಿರುವ
ಷಟ್ಸ್ಥಲಗಳ ಬಗೆಗಿನ ಕಿರು ತಾತ್ಪರ್ಯ 11
**ಡಾ. ಕೆ.ಎಸ್. ಮಲ್ಲೇಶ್**

ಅಕ್ಕಮಹಾದೇವಿಯ ಒಂದು ವಚನದ ಸಂದರ್ಭದಲ್ಲಿ 21
**ಬಾಲಚಂದ್ರ ಜಯಶೆಟ್ಟಿ**

ಇಷ್ಟಲಿಂಗ : ಸಾಮಾಜಿಕ ಆಯಾಮ 30
**ಪ್ರಕಾಶ ಗಿರಿಮಲ್ಲನವರ**

ವಾರ್ತಾವಿಹಾರ 44
**ಕುಮಾರಸ್ವಾಮಿ ವಿರಕ್ತಮಠ**

ಕೃತಿ–ಸ್ವೀಕೃತಿ 63

## ಮನವಿ

ಜೆಎಸ್ಎಸ್ ಮಹಾವಿದ್ಯಾಪೀಠದಿಂದ ಪ್ರಕಟಗೊಳ್ಳುತ್ತಿರುವ "ಪ್ರಸಾದ" ಸಂಚಿಕೆಯ ಕೆಳಕಂಡ ಪ್ರತಿಗಳು ನಮ್ಮಲ್ಲಿ ಲಭ್ಯವಿಲ್ಲದ ಕಾರಣ ತಮ್ಮ ಬಳಿ ಅಥವಾ ಯಾವುದಾದರೂ ಗ್ರಂಥಾಲಯದಲ್ಲಿ ಲಭ್ಯವಿರುವ ಬಗ್ಗೆ ತಿಳಿಸಿದರೆ, ಜೆರಾಕ್ಸ್ ಮಾಡಿಸಿಕೊಂಡು ತಮಗೆ ಹಿಂತಿರುಗಿಸಲಾಗುವುದು. ದಯಮಾಡಿ ಸಹಕರಿಸಿ.

| ಕ್ರ.ಸಂ. | ಪ್ರಕಟವಾದ ವರ್ಷ | ದೊರಕದೆ ಇರುವ ಪ್ರತಿಗಳು |
|---|---|---|
| 1. | 1966 | ಈ ವರ್ಷದ ಎಲ್ಲ ಸಂಚಿಕೆಗಳು |
| 2. | 1967 | ಮೂರನೇ ಸಂಚಿಕೆ |
| 3. | 1970 | ಒಂದನೇ ಸಂಚಿಕೆ |
| 4. | 1971 | 2, 3, 4ನೇ ಸಂಚಿಕೆಗಳು |
| 5. | 1972 | 1, 3, 4ನೇ ಸಂಚಿಕೆಗಳು |
| 6. | 1975 | ಮೂರನೇ ಸಂಚಿಕೆ |
| 7. | 1976 | ಮೂರನೇ ಸಂಚಿಕೆ |
| 8. | 1984 | ಒಂದನೇ ಸಂಚಿಕೆ |

ಸಂಪರ್ಕದ ಮೊಬೈಲ್ ನಂ. 9986137389, 9964161363

ಸಂಪಾದಕರು

# ಗುರುವಾಣಿ

**ಒಂ**ದು ಕಾರ್ಯಸಿದ್ಧಿಯಾಗುವಲ್ಲಿ ಮನುಷ್ಯಪ್ರಯತ್ನ ಮುಖ್ಯವೋ ಅಥವಾ ದೈವಾನುಗ್ರಹ ಮುಖ್ಯವೋ ಎನ್ನುವ ಚರ್ಚೆ ಹಿಂದಿನಿಂದಲೂ ನಡೆದುಬಂದಿದ್ದೇ ಆಗಿದೆ. ಭೌತಿಕವಾದಿಗಳು ಯಾವಾಗಲೂ ಮನುಷ್ಯಪ್ರಯತ್ನವನ್ನೇ ಎತ್ತಿಹಿಡಿಯುತ್ತಾರೆ. ಮನುಷ್ಯನ ಸಂಕಲ್ಪ, ದೈಹಿಕ ಹಾಗೂ ಬೌದ್ಧಿಕ ಶಕ್ತಿಯಿಂದ ಮಾತ್ರ ಎಲ್ಲವೂ ಸಾಧಿತವಾಗುತ್ತವೆ. ದೈವಾನುಗ್ರಹ ಎನ್ನುವುದು ಕೇವಲ ನಂಬಿಕೆಯ ವಿಷಯವೇ ಹೊರತು, ವಾಸ್ತವವಲ್ಲ. ಇಷ್ಟಕ್ಕೂ ದೈವ ಎಂದರೆ ಏನು? ಅದರ ಸ್ವರೂಪ ಎಂತಹುದು? ಅದರ 'ಪ್ರೇರಣೆ' ಎನ್ನುವುದು ಯಾವ ಸ್ವರೂಪದಲ್ಲಿ ಇರುತ್ತದೆ? ಅದು ನಮ್ಮ ಒಳಗಿನಿಂದಲೇ ಸೂಚನೆ ಕೊಡುತ್ತದೋ ಅಥವಾ ಬಾಹ್ಯದಿಂದಲೋ? ಬಾಹ್ಯದಿಂದ ಪ್ರೇರಣೆ ಕೊಡುವುದಾದರೆ ಅದು ದೃಗ್ಗೋಚರವಾಗಬೇಕಿತ್ತಲ್ಲವೇ? ಇದುವರೆವಿಗೆ ಅದಕ್ಕೆ ಒಂದು ಉದಾಹರಣೆಯೂ ಸಿಕ್ಕುವುದಿಲ್ಲವಲ್ಲ ಏಕೆ? ಇತ್ಯಾದಿ ನೂರೆಂಟು ಪ್ರಶ್ನೆಗಳ ಜಾಲವನ್ನೇ ಹೆಣೆದು ತಮ್ಮನ್ನು ಸಮರ್ಥಿಸಿಕೊಳ್ಳುತ್ತಾರೆ.

ದೈವವಾದಿಗಳು ತಮ್ಮ ಸಮರ್ಥನೆಗೆ ಕಾವ್ಯ ಪುರಾಣ ಐತಿಹ್ಯಗಳಿಂದ ಅನೇಕ ಉದಾಹರಣೆಗಳನ್ನು ಕೊಟ್ಟು ವಿಸ್ತೃತವಾಗಿ ಪ್ರಸ್ತುತಪಡಿಸುತ್ತಾರೆ. ಸಾಮಾನ್ಯ ಜನಸಮೂಹವೂ ಮನದಾಳದಲ್ಲಿ ಈ ಚಿಂತನೆಗಳನ್ನೇ ಪೋಷಿಸಿಕೊಂಡು ಬಂದಿದೆ. ಸಂಸ್ಕೃತ ಸಾಹಿತ್ಯದಲ್ಲಂತೂ ದೈವಾನುಗ್ರಹಕ್ಕೆ ಸಂಬಂಧಪಟ್ಟ ಅಸಂಖ್ಯ ಸುಭಾಷಿತಗಳೇ ಇವೆ. ಮನುಷ್ಯನಿಗೆ ಯಾವಾಗ 'ನಾನು', 'ನನ್ನಿಂದ' ಎನ್ನುವ ಅಹಂ ಪ್ರಜ್ಞೆ ಮೂಡಿ ದೈವಪ್ರಜ್ಞೆ ಮಾಯವಾಗುತ್ತದೋ, ಆ ಕ್ಷಣದಲ್ಲಿಯೇ ಎಂತಹ ಸಾರ್ವಭೌಮನೂ ನಿರ್ನಾಮವಾಗುತ್ತಾನೆ ಎನ್ನುವುದಕ್ಕೆ ಆರ್ಷೇಯ ಸಾಹಿತ್ಯದಲ್ಲಿ ಅನೇಕ ಉದಾಹರಣೆಗಳು ಸಿಕ್ಕುತ್ತವೆ. ಉದಾಹರಣೆಗೆ –

ಮಹಾಭಾರತದ ಯುದ್ಧದಲ್ಲಿ ಪಾಂಡವರ ವಿಜಯಕ್ಕೆ ಕಾರಣನಾದ ಅರ್ಜುನನ ಶೌರ್ಯದ ಮಾತು ಎಲ್ಲರ ನಾಲಗೆಯ ಮೇಲೂ ಹರಿದಾಡುತ್ತದೆ. ಈ ಹೊಗಳಿಕೆಯ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಅರ್ಜುನನ ಒಳಗೆ 'ಅಹಂಕಾರ' ವಿಜೃಂಭಿಸಿತು. ಯುದ್ಧರಂಗದಿಂದ ರಥ ಶಿಬಿರಕ್ಕೆ ಹಿಂತಿರುಗಿದಾಗ ಶಿಷ್ಟಾಚಾರದಂತೆ ಸಾರಥಿ ಮೊದಲು ರಥದಿಂದ ಕೆಳಗಿಳಿದು, ಅನಂತರ ರಥದಲ್ಲಿ ಆಸೀನನಾಗಿರುವ ವೀರನನ್ನು ಕೆಳಕ್ಕೆ ಇಳಿಸಿಕೊಳ್ಳಬೇಕು. ಆದರೆ ಇಲ್ಲಿ ಹಾಗಾಗಲಿಲ್ಲ. ಶ್ರೀಕೃಷ್ಣ ರಥದ ಮೇಲೆ ಕುಳಿತೇ

ಇದ್ದ. ಈಗಾಗಲೇ ಅಹಂಕಾರಮತ್ತನಾಗಿದ್ದ ಅರ್ಜುನನ ಮನಸ್ಸು ಆಲೋಚಿಸಿತು. ಶ್ರೀಕೃಷ್ಣ ದೇವರೇ ಇರಬಹುದು. ಆದರೆ ಈಗ ಅವನು ನನ್ನ ಸಾರಥಿ. ಆದ್ದರಿಂದ ಶಿಷ್ಟಾಚಾರವನ್ನು ಪಾಲಿಸಬೇಕಾದ್ದು ಅವನ ಕರ್ತವ್ಯ ಎಂದುಕೊಂಡ. ಆದರೆ ಅವನಿಗೆ ಅದನ್ನು ಗಟ್ಟಿಯಾಗಿ ಹೇಳುವ ಧೈರ್ಯ ಬರಲಿಲ್ಲ. ರಥದಲ್ಲಿ ಹಾಗೆಯೇ ಬಿಗುಮಾನದಿಂದ ಕುಳಿತಿದ್ದ ಅರ್ಜುನನ್ನು ಕುರಿತು ಶ್ರೀಕೃಷ್ಣ, ರಥದಿಂದ ಕೆಳಕ್ಕೆ ಇಳಿ, ಪತಾಕೆಯಲ್ಲಿ ಇದ್ದ ಆಂಜನೇಯ ಈಗಾಗಲೇ ನಿರ್ಗಮಿಸಿದ್ದಾನೆ ಎಂದು ಹೇಳಿದ.

ಕೃಷ್ಣ 'ಆಜ್ಞಾಪಿಸಿದ' ರೀತಿ ಅರ್ಜುನನಿಗೆ ಇಷ್ಟವಾಗದಿದ್ದರೂ ಎದುರಾಡಲಾರದೆ ಬಿಗುಮಾನದಿಂದಲೇ ರಥದಿಂದ ಕೆಳಕ್ಕೆ ಇಳಿದ. ಅರ್ಜುನನ ನಂತರ ಕೃಷ್ಣ ರಥದಿಂದ ಇಳಿದು ಮುಂದಕ್ಕೆ ಕೆಲವು ಹೆಜ್ಜೆ ಇಟ್ಟ. ತಕ್ಷಣ 'ರಥ' ದಿಗ್ಗನೆ ಹೊತ್ತಿ ಉರಿದು ಬೂದಿಯಾಯಿತು. ಯುದ್ಧರಂಗದಲ್ಲಿ ಶತ್ರುಗಳ ಅನೇಕ ತೆರನ ಅಸ್ತ್ರಗಳ ಶಕ್ತಿಯನ್ನೆಲ್ಲಾ ರಥ ಹೀರಿಕೊಂಡಿತ್ತು. ಅದಕ್ಕೆ ಆ ಶಕ್ತಿ ಬರಲು ಕಾರಣ ಶ್ರೀಕೃಷ್ಣ ರಥದ ಸಾರಥ್ಯ ವಹಿಸಿದ್ದು; ಹಾಗೆಯೇ ಬಾವುಟದಲ್ಲಿ ವಾಯುಪುತ್ರ ಇದ್ದುದು. ಇವರೀರ್ವರ ಕೃಪೆ ಇಲ್ಲದಿದ್ದರೆ ರಥ ಆಗಲೇ ಹೊತ್ತಿ ಉರಿಯಬೇಕಾಗಿತ್ತು. ಈಗ ರಥದಲ್ಲಿ ಆಂಜನೇಯನೂ ಇಲ್ಲ, ಕೃಷ್ಣನೂ ಇಲ್ಲ. ಈಗ ಅದು ಕೇವಲ ಒಂದು ವಾಹನ ಮಾತ್ರವಾಗಿತ್ತು. ಅದಕ್ಕೇ ಅದು ಹೊತ್ತಿ ಉರಿಯಿತು. ಸದ್ಯ, ಅರ್ಜುನ ಬದುಕಿಕೊಂಡ ! ಅಂದರೆ ದೈವಶಕ್ತಿಯ ಅನುಗ್ರಹವಿರುವತನಕ ಈ ದೇಹವೆಂಬ 'ಬಂಡಿ' ನಡೆಯುತ್ತಿರುತ್ತದೆ; ಆ ಅನುಗ್ರಹ ಮುಗಿದ ಮರುಗಳಿಗೆಯಲ್ಲಿಯೇ ಈ ದೇಹವೊಂದು ಕೇವಲ 'ಒಣಕೊರಡು' ಮಾತ್ರ ಆಗುತ್ತದೆ.

> ನೀನೊಲಿದಡೆ ಕೊರಡು ಕೊನರುವುದಯ್ಯಾ,
> ನೀನೊಲಿದಡೆ ಬರಡು ಹಯನಹುದಯ್ಯಾ,
> ನೀನೊಲಿದಡೆ ವಿಷವೆಲ್ಲ ಅಮೃತವಹುದಯ್ಯಾ,
> ನೀನೊಲಿದಡೆ ಸಕಲ ಪಡಿಪದಾರ್ಥ
> ಇದಿರಲ್ಲಿರ್ಪುವು ಕೂಡಲಸಂಗಮದೇವಾ

ಎನ್ನುವ ಬಸವಣ್ಣನವರ ವಚನ ಇದನ್ನೇ ಸಮರ್ಥಿಸುತ್ತದೆ. ಅಂದರೆ 'ನೀನು' ಎನ್ನುವ ಶಕ್ತಿ ಇಲ್ಲದಿದ್ದರೆ 'ನಾನು' ಎನ್ನುವುದರ ಅಸ್ತಿತ್ವ ಇರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮನುಷ್ಯ ಪ್ರಯತ್ನ ಮತ್ತು ದೈವಾನುಗ್ರಹ ಎರಡರ ಸಮನ್ವಯವನ್ನು ಸಾಧಿಸುವುದೇ ಶ್ರೇಯಸ್ಕರವಾದುದು. ಪುರುಷ ಪ್ರಯತ್ನ ಹಾಗೂ ದೈವಾನುಗ್ರಹ ರಥದ ಎರಡು ಚಕ್ರಗಳು ಇದ್ದಂತೆ. ಅವೆರಡೂ ಸಮವಾಗಿದ್ದಾಗ ಬದುಕಿನ ಹಾದಿಯನ್ನು ಸುಸೂತ್ರವಾಗಿ ಕ್ರಮಿಸಬಹುದು. ಆದ್ದರಿಂದ ಈ ಎರಡೂ ಅತಿರೇಕಗಳನ್ನು ತರ್ಕಿಸುವ ಬದಲು ಎರಡರ ಸಮನ್ವಯ ಮಾರ್ಗವೇ ಸರ್ವದಾ ಶ್ರೀ ಶ್ರೇಯಸ್ಕರ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಇದು 2021ನೇ ಇಸವಿಯ ಕೊನೆಯ ಸಂಚಿಕೆ.

ಹೊಸ ವರ್ಷದ ಹೊಸ್ತಿಲೊಳಗೆ ಕಾಲಿಡುತ್ತಾ, ಕಳೆದುದರ ಸಿಹಿ–ಕಹಿ ನೆನಪುಗಳನ್ನು ಮೆಲುಕುಹಾಕುವುದು ಹಾಗೆಯೇ ಹೊಸ ದಿನಗಳ ಬಗ್ಗೆ ಕನಸು ಕಟ್ಟಿಕೊಂಡು ಸಂಭ್ರಮಿಸುವ ದಿನಗಳು ಇವು. ಒಬ್ಬೊಬ್ಬರದೂ ಒಂದೊಂದು ತೆರನ ಕನಸುಗಳು! ಹಾಗೆ ನೋಡಿದರೆ ಇದು ಸದ್ಯಕ್ಕೆ ಪ್ರಪಂಚದಾದ್ಯಂತ ಒಪ್ಪಿಕೊಂಡಿರುವ ವ್ಯಾವಹಾರಿಕವಾದ ಹೊಸ ವರ್ಷ ಅಷ್ಟೆ. ಏಕೆಂದರೆ ಬೇರೆಬೇರೆ ದೇಶಗಳಲ್ಲಿ, ಅನೇಕ ಕಾಲಘಟ್ಟಗಳಲ್ಲಿ 'ಹೊಸ ವರ್ಷ' ಎನ್ನುವುದರ ಪರಿಕಲ್ಪನೆ ಬೇರೆ ಬೇರೆಯಾಗಿಯೇ ಇರುವುದು ಕಂಡುಬರುತ್ತದೆ. ಉದಾಹರಣೆಗೆ ನಮ್ಮಲ್ಲಿಯೇ ವಿಕ್ರಮ ಶಕೆ, ಮಹಾವೀರ ಶಕೆ, ಶಾಲಿವಾಹನ ಶಕೆ ಇತ್ಯಾದಿಗಳು ಇದ್ದುವು. ಇದು ಏನೇ ಇರಲಿ ಹೊಸ ವರ್ಷ ಎನ್ನುವ ಕಲ್ಪನೆಯೇ ಪ್ರತಿಯೊಬ್ಬರ ಮನಸ್ಸಿನಲ್ಲಿ ಹೊಸ ಹೊಸ ನಿರೀಕ್ಷೆಗಳನ್ನು ಭರವಸೆಗಳನ್ನು ತುಂಬಿಕೊಳ್ಳುವ ದಿನಮಾನವಾಗಿದೆ. ಇಂತಹ ಒಂದು ದಿನವನ್ನು ಸ್ವಾಗತಿಸುವುದಕ್ಕೆ ಎಲ್ಲರೂ ಉತ್ಸುಕರಾಗಿರುತ್ತಾರೆ.

ಆದರೆ ಇಡೀ ಜಗತ್ತು ಕಳೆದೆರಡು ವರ್ಷಗಳಿಂದ ಕೋವಿಡ್ ಸಾಂಕ್ರಾಮಿಕದಿಂದ ತತ್ತರಿಸಿಹೋಗಿದ್ದು, ಕೋವಿಡ್ ಎರಡನೇ ಅಲೆಯಿಂದ ದಿಕ್ಕಾಪಾಲಾಗಿದ್ದ ಬದುಕು, ಇನ್ನೇನು ಶುಭ ದಿನಗಳು ಆರಂಭವಾಗುತ್ತವೆ, ಕೋವಿಡ್‌ನ ಮೂರನೇ ಅಲೆ ಬರುವುದಿಲ್ಲ ಎನ್ನುವ ಸಂಶೋಧಕರ ಮಾತಿನ ಭರವಸೆಯ ಮೇಲೆ ಹೊಸ ಬದುಕು ಕಟ್ಟಿಕೊಳ್ಳಲು ಸಿದ್ಧವಾಗುತ್ತಿದ್ದ ಸಂದರ್ಭದಲ್ಲಿಯೇ, 'ಓಮಿಕ್ರೋನ್' ರೂಪಾಂತರಿ ವೈರಸ್ ದಾಳಿ ನಡೆಸಿದೆ. ಭಾರತದಲ್ಲಿ ಕೆಲವು ತಿಂಗಳುಗಳ ಹಿಂದೆ ನಿತ್ಯವೂ ಸುಮಾರು 6000ದಷ್ಟು ಪತ್ತೆಯಾಗುತ್ತಿದ್ದ ಕೋವಿಡ್ ಸೋಂಕು ಈಗ ಕೆಲವೇ ದಿನಗಳಿಂದ 16 ಸಾವಿರಕ್ಕೆ ಏರಿಕೆಯಾಗಿದೆ ಎನ್ನುವ ವರದಿಗಳು ಬರುತ್ತಿವೆ.

ಇಂತಹ ಆತಂಕದ ಸನ್ನಿವೇಶದಲ್ಲಿ ಹೊಸ ವರ್ಷವನ್ನು ಸ್ವಾಗತಿಸುವ ಬಗೆ ಹೇಗೆ? ಇದರ ಜೊತೆಗೆ 'ಭವಿಷ್ಯಕಾರರ' ಮಾತುಗಳು ಮತ್ತಷ್ಟು ಭಯಾನಕವಾಗಿದ್ದು, ನಮ್ಮನ್ನು ದಿಗ್ಭ್ರಮೆ ಹುಟ್ಟಿಸುವಂತಿವೆ.

ಉದಾಹರಣೆಗೆ ಬಲ್ಗೇರಿಯಾದವನಾದ ಬಾಬಾ ವಂಗಾ ಹೇಳಿರುವ ಭವಿಷ್ಯವಾಣಿ ಬಹಳ ವರ್ಷಗಳಿಂದ ನಿಜವಾಗುತ್ತಾ ಬಂದಿದೆಯಂತೆ? ಆತ ಈಗ ಬದುಕಿಲ್ಲ; ಆತ

ಬಹಳ ವರ್ಷಗಳ ಹಿಂದೆಯೇ ಹೇಳಿದ್ದ 2022ರ ಭವಿಷ್ಯ ಹೀಗಿದೆ.

ಭಾರತಕ್ಕೆ ಭಾರೀ ಅಪಾಯ: ಭಾರತದ ಹಲವೆಡೆ ಉಷ್ಣಾಂಶ 50 ಡಿ. ಸೆ. ದಾಟಲಿದೆ. ಪರಿಣಾಮ ಮಿಡತೆಗಳು ಭಾರೀ ಪ್ರಮಾಣದಲ್ಲಿ ಕೃಷಿ ಜಮೀನಿನ ಮೇಲೆ ದಾಳಿ ನಡೆಸಲಿವೆ. ಇದು ಭಾರೀ ಬರಗಾಲಕ್ಕೆ ಕಾರಣವಾಗಲಿದೆ.

ಮತ್ತೊಂದು ಸಾಂಕ್ರಾಮಿಕ : ಸಂಶೋಧಕರ ತಂಡವೊಂದು ಸೈಬೀರಿಯಾದಲ್ಲಿ ಭೀಕರವಾದ ವೈರಸ್ ಪತ್ತೆ ಮಾಡಲಿದ್ದಾರೆ. ಇದುವರೆಗೂ ಘನೀಕೃತ ಸ್ಥಿತಿಯಲ್ಲಿದ್ದ ಈ ವೈರಸ್ ವಿಶ್ವಕ್ಕೆ ಮತ್ತೊಮ್ಮೆ ಸಾಂಕ್ರಾಮಿಕ ಪಿಡುಗು ತರಲಿದೆ.

ಕುಡಿಯುವ ನೀರಿನ ಕೊರತೆ : ವಿಶ್ವದ ಹಲವು ನಗರಗಳು ಕುಡಿವ ನೀರಿನ ತೀವ್ರ ಕೊರತೆ ಎದುರಿಸಲಿವೆ. ಇದು ರಾಜಕೀಯದ ಮೇಲೂ ಗಂಭೀರ ಪರಿಣಾಮ ಬೀರಲಿದೆ. ಹೀಗಾಗಿ ಹಲವು ರಾಜ್ಯಗಳು ಪರ್ಯಾಯ ಮೂಲಕ್ಕೆ ಹುಡುಕಾಟ ನಡೆಸಲಿವೆ.

ಭೂಕಂಪ ಸುನಾಮಿ : ಈ ವರ್ಷ ವಿಶ್ವದಾದ್ಯಂತ ಭಾರೀ ಪ್ರಮಾಣದಲ್ಲಿ ಭೂಕಂಪ ಮತ್ತು ಸುನಾಮಿ ಅಪಾಯ ಇದೆ. ಅದರಲ್ಲೂ ಏಷ್ಯಾದ ಹಲವು ದೇಶಗಳು ಮತ್ತು ಆಸ್ಟ್ರೇಲಿಯಾದಲ್ಲಿ ಈ ದುರ್ಘಟನೆಗಳ ಸಾಧ್ಯತೆ ಇದೆ.

ಈ ಭವಿಷ್ಯವಾಣಿಯ ಜೊತೆಗೆ ವಿಶ್ವದಾದ್ಯಂತ ಹೆಚ್ಚು ಜನರು ನಂಬುವ ಭವಿಷ್ಯವಾಣಿ ನಾಸ್ಟ್ರೊಡೋಮಸ್‌ನದು. 5–6 ಶತಮಾನಗಳ ಹಿಂದೆ ಬಾಳಿದ್ದ ಈತನ ಹಲವು ಭವಿಷ್ಯವಾಣಿಗಳು ಅತ್ಯಂತ ನಿಖರವಾಗಿವೆ. 2022ರ ಕುರಿತು ಈತನ ಹಲವು ಭವಿಷ್ಯವಾಣಿ ಹೀಗಿದೆ.

ಉಲ್ಕಾಪಾತ, ಕ್ಷುದ್ರಗ್ರಹಗಳ ದಾಳಿ : 2022ರಲ್ಲಿ ಭಾರೀ ಪ್ರಮಾಣದಲ್ಲಿ ಉಲ್ಕಾಪಾತ ಮತ್ತು ಕ್ಷುದ್ರಗ್ರಹಗಳು ಪತನಗೊಂಡು ಭಾರೀ ಪ್ರಮಾಣದ ಹಾನಿಗೆ ಕಾರಣವಾಗಲಿದೆ. ಜೊತೆಗೆ ಭಾರೀ ಭೂಕಂಪ ಮತ್ತು ಸುನಾಮಿಯ ಎಚ್ಚರಿಕೆಯನ್ನೂ ನೀಡಿದ್ದಾನೆ.

ಡಾಲರ್ ಪತನ : ಹಣದುಬ್ಬರ ಮಿತಿಮೀರಲಿದ್ದು ಅಮೆರಿಕದ ಡಾಲರ್ ಪತನಗೊಳ್ಳಲಿದೆ. ಚಿನ್ನ, ಬೆಳ್ಳಿ ಮತ್ತು ಬಿಟ್‌ಕಾಯಿನ್ ಅನ್ನು ಜನರು ಆಸ್ತಿ ಎಂದು ಪರಿಗಣಿಸಲಿದ್ದು, ಅವುಗಳ ಮೇಲೆ ಹೂಡಿಕೆ ಹೆಚ್ಚಳ ಮಾಡಲಿದ್ದಾರೆ.

ಕೃತಕ ಬುದ್ಧಿಮತ್ತೆ ಪಾರಮ್ಯ : ಈಗಾಗಲೇ ಹಲವು ಕ್ಷೇತ್ರಗಳಲ್ಲಿ ಬಳಕೆಯಾಗು ತ್ತಿರುವ ಕೃತಕ ಬುದ್ಧಿಮತ್ತೆಯು, ಹೂಮನ್ ಇಂಟರ್‌ಫೇಸ್ ಜೊತೆಗೂಡಿ ಕಂಪ್ಯೂಟರ್ ವಲಯವನ್ನು ಆಳಲಿವೆ.

ಪರಮಾಣು ಬಾಂಬ್ ಸ್ಫೋಟ : ಈ ವರ್ಷ ಪರಮಾಣು ಬಾಂಬ್ ಸ್ಫೋಟ ವಾಗಲಿದ್ದು, ಹವಾಮಾನ ಬದಲಾವಣೆಗೆ ಕಾರಣವಾಗಲಿದೆ ಮತ್ತು ಭೂಮಿಯ ಸ್ಥಾನ ಬದಲಾವಣೆಗೆ ಕಾರಣವಾಗಲಿದೆ. ಇದು ಭೂಕಂಪ, ಪ್ರವಾಹಕ್ಕೂ ಕಾರಣವಾಗಲಿದೆ ಎಂದು ನಾಸ್ಟ್ರೊಡೋಮಸ್ ಹೇಳಿದ್ದಾನೆ.

ಇಂತಹ ಭಯಾನಕ ಅಂಶಗಳ ಜೊತೆಗೆ ಮಾರುಕಟ್ಟೆಯಲ್ಲಿನ ಬೆಲೆಯ ಬಿಸಿ 'ಅಟ್ಟದಿಂದ ಬಿದ್ದವಳಿಗೆ ಒನಕೆಯಲ್ಲಿ ಜಜ್ಜಿದಂತೆ' ಎನ್ನುವ ಹಾಗೆ ನಮ್ಮ ಬದುಕನ್ನು ಹೈರಾಣವಾಗಿಸಿದೆ. ಜಿ.ಎಸ್.ಟಿ. ವ್ಯಾಪ್ತಿಗೆ, ಸ್ವಿಗ್ಗಿ, ಆಟೋ, ಕಾರು ಸೇವೆ, ಪಾದರಕ್ಷೆ, ದಿನಬಳಕೆ ವಸ್ತುಗಳು, ಎಲೆಕ್ಟ್ರಾನಿಕ್ಸ್ ವಸ್ತುಗಳು, ಆಟೋಮೊಬೈಲ್ ಹಾಗೂ ಜಿಎಸ್‌ಟಿ ವಂಚನೆ ತಡೆಗೆ ಆಧಾರ್ ಕಡ್ಡಾಯ, ಎಟಿಎಂ ವಿತ್ ಡ್ರಾ ಶುಲ್ಕ ಹೆಚ್ಚಳ, ಗೂಗಲ್‌ನಲ್ಲಿ ಸೇವ್ ಆಗಿದ್ದ ಎಲ್ಲಾ ಮಾಹಿತಿ ಡಿಲೀಟ್ – ಹೀಗೆ ಅನೇಕ ತೆರನ ಆರ್ಥಿಕ ಹೊರೆ ಈಗಾಗಲೇ ಪ್ರಕಟಗೊಂಡಿದೆ.

ಹೀಗೆ ಸ್ಥಳೀಯವಾಗಿ, ಹಾಗೂ ಜಾಗತಿಕವಾಗಿ ಏನೆಲ್ಲ ಭಯಾನಕ ಸಂಗತಿಗಳು ವರದಿಯಾಗುತ್ತಿದ್ದರೂ, ನಮ್ಮಲ್ಲಿನ ಒಂದು ವಯೋಮಾನದ ಸಮೂಹ ಅಥವಾ ಸಾಮಾಜಿಕ ಜವಾಬ್ದಾರಿ ಇಲ್ಲದ, ಆರ್ಥಿಕವಾಗಿ ಒಂದಿಷ್ಟು ಬಲಿಷ್ಠವಾಗಿರುವ ಒಂದು ವರ್ಗದ ಜನ, ಹೊಸ ವರ್ಷವನ್ನು ಸ್ವಾಗತಿಸಲು ಗುಂಪುಗುಂಪಾಗಿ ಸೇರಿ, ಮೋಜು ಮಸ್ತಿ ಮಾಡಲು ಅವಕಾಶ ಕೊಡಬೇಕೆನ್ನುವುದು, ಧನದಾಹಿ ವ್ಯಾಪಾರೀ ವರ್ಗ ಅವರ ಬೆನ್ನಿಗೆ ನಿಂತಿರುವಂತದು ದುರದೃಷ್ಟಕರ ಸಂಗತಿ. ರಾಜ್ಯದಲ್ಲಿ ನೈಟ್ ಕರ್ಫ್ಯೂ ಇದ್ದರೂ ಎಂದಿಗಿಂತ ಹೆಚ್ಚು, ಅಂದರೆ ಸುಮಾರು 974 ಕೋಟಿ ರೂ.ಗಳಷ್ಟು ಮದ್ಯ ಮಾರಾಟವಾಗಿ, ಸರ್ಕಾರದ ಬೊಕ್ಕಸಕ್ಕೆ 573 ಕೋಟಿ ರೂ. ಆದಾಯ ಬಂದಿದೆಯಂತೆ! ಹೊಸ ವರ್ಷದ ಹಿಂದಿನ ದಿನವೇ 140 ಕೋಟಿ ರೂ.ಗಳಷ್ಟು ಮದ್ಯ ಮಾರಾಟವಾಗಿರುವ ವರದಿ ಪ್ರಕಟವಾಗಿದೆ – ಎಂತಹ ಆರ್ಥಿಕ ಬೆಳವಣಿಗೆ ! ಇವರಿಗೆ ಆರೋಗ್ಯಕ್ಕಿಂತ ಆಮೋದ ಪ್ರಮೋದಗಳೇ ಮುಖ್ಯವಾಗುತ್ತವೆ.

ನೈತಿಕ ಪ್ರಜ್ಞೆ ಹಾಗೂ ಸಾಮಾಜಿಕ ಪ್ರಜ್ಞೆ ಇಲ್ಲದ ಜನಕ್ಕೆ (ಇದರಲ್ಲಿ ನಗರಿಗರದೇ ಸಿಂಹಪಾಲು) ಸರ್ಕಾರ ಯಾವ ಕಾನೂನು ತಂದರು ತಾನೇ ಏನು ಮಾಡಲು ಸಾಧ್ಯವಾದೀತು? ಸ್ನೇಹಿತರೊಬ್ಬರು ಹೇಳಿದ ಮಾತು ಹೀಗಿದೆ – ಯುಗಾದಿ ಹಬ್ಬದ ಹೊಸ ವರ್ಷಾಚರಣೆಯಲ್ಲಿ ದೇವಸ್ಥಾನಗಳಲ್ಲಿ ಜನ ಕಿಕ್ಕಿರಿದು ನೆರೆದಿರುತ್ತಾರೆ; ಪ್ರಾರ್ಥನೆಯ ಧ್ವನಿ ನಮ್ಮ ಮನಸ್ಸನ್ನು ಮುದಗೊಳಿಸುತ್ತದೆ. ಪಬ್ ಬಾರ್‌ಗಳು ಖಾಲಿ ಖಾಲಿ ಇರುತ್ತವೆ. ಈ ಹೊಸ ವರ್ಷಾಚರಣೆಯ ದಿನದಲ್ಲಿ ಪಬ್, ಬಾರ್‌ಗಳು ಕಿಕ್ಕಿರಿದಿರುತ್ತವೆ, ದೇವಸ್ಥಾನಗಳು ಮಾತ್ರ ಖಾಲಿ ಖಾಲಿ ಇರುತ್ತವೆ !

ಈ ಮಾತನ್ನು ಗಂಭೀರವಾಗಿ ಅರ್ಥೈಸಿಕೊಂಡರೆ, ಸಂಸ್ಕೃತಿಯ ಸ್ಥಿತ್ಯಂತರದ ಅನೇಕ ಅರ್ಥಗಳು ಹೊಳೆಯುತ್ತವೆ. ಅರ್ಥಸಂಸ್ಕೃತಿಯ ಈ ಕಾಲಮಾನದಲ್ಲಿ 'ಸಂಸ್ಕೃತಿಯ ಅರ್ಥ'ವನ್ನು ಎಲ್ಲರ ಮನೆಮನಗಳಲ್ಲಿ ಬಿತ್ತಿ ಬೆಳೆಯಬೇಕಾಗಿದೆ. ಹೊಸ ವರ್ಷ ಅದಕ್ಕೆ ನಾಂದಿಯಾಗಬಹುದೇ?

**ಮಲೆಯೂರು ಗುರುಸ್ವಾಮಿ**
**ಸಂಪಾದಕ**

# ತತ್ವಪದ

## ಕಾಯುವ ಬಿಟ್ಟು ಆತ್ಮೆಲ್ಲಿ

ದೇಹವ ಬಿಟ್ಟು ಬ್ರಹ್ಮವು ಎಂತೆನೆ
ದೇಹ ಬಿಟ್ಟು ಬ್ರಹ್ಮವೆಲ್ಲಿ
ದೇಹವು ಬ್ರಹ್ಮವು ಒಂದೆಯೋ
ದೇಹವು ಇಹುದು ಬ್ರಹ್ಮದಲ್ಲಿ.

ಮಾಯೆಯ ಬಿಟ್ಟು ಬ್ರಹ್ಮವು ಎಂದೆನೆ
ಮಾಯೆಯ ಬಿಟ್ಟು ಬ್ರಹ್ಮೆಲ್ಲಿ
ಕಾಯ ಬಿಟ್ಟು ಆತ್ಮವು ಎಂತೆನೆ
ಕಾಯುವ ಬಿಟ್ಟು ಆತ್ಮೆಲ್ಲಿ.

ಪಿಂಡವ ಬಿಟ್ಟು ಬ್ರಹ್ಮಾಡವೆಂತೆನೆ
ಪಿಂಡಾಂಡಿಲ್ಲದೆ ಬ್ರಹ್ಮಾಂಡವೆಲ್ಲಿ
ಖಂಡವ ಬಿಟ್ಟು ಖಂಡವೆಂತೆನೆ
ಖಂಡವ ಬಿಟ್ಟು ಅಖಂಡವದೆಲ್ಲಿ.

ಜಗವನು ಬಿಟ್ಟು ತನ್ನನು ತೋರನೆ
ಜಗವನು ಬಿಟ್ಟು ತಾನೆಲ್ಲಿ
ಜಗಪತಿ ಚಿದಾನಂದ ಸದ್ಗುರು ನೀನು ನೀ
ಜಗಸಂಶಯವೆಲ್ಲಿ.

**– ಚಿದಾನಂದ ಅವಧೂತರು**

**ಕೃಪೆ: ತತ್ವಪದಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ**

# ಡಾ. ಎಚ್. ತಿಪ್ಪೇರುದ್ರಸ್ವಾಮಿಗಳು ನಿರೂಪಿಸಿರುವ ಷಟ್ಸ್ಥಲಗಳ ಬಗೆಗಿನ ಕಿರು ತಾತ್ಪರ್ಯ

**ಡಾ. ಕೆ.ಎಸ್. ಮಲ್ಲೇಶ್**

"ವೀರಶೈವ ಧರ್ಮದ ಒಂದು ವಿಶಿಷ್ಟವಾದ ಕೊಡುಗೆ ಷಟ್ಸ್ಥಲ. ಸಾಧಕನ ಅನುಭವದ ವಿಕಾಸವನ್ನು ತಳಹದಿಯನ್ನಾಗಿ ಉಳ್ಳ ಇದರ ವಿವೇಚನೆಯಲ್ಲಿ ವೀರಶೈವ ಧರ್ಮದ ಸಾರವೆಲ್ಲಾ ಅಡಕವಾಗುತ್ತದೆ. ತಾತ್ತ್ವಿಕ ಸಿದ್ಧಾಂತ ಮತ್ತು ಆಚರಣೆಯ ಮಾರ್ಗಗಳೆರಡೂ ಇಲ್ಲಿ ಸಮಾವೇಶಗೊಳ್ಳುತ್ತವೆ. ಈ ಧರ್ಮದ ತಾತ್ತ್ವಿಕ ಹಿನ್ನೆಲೆಗೆ ಅನುಗುಣವಾಗಿ ಭೇದಾಭೇದಗಳ ಸಮನ್ವಯ ಇಲ್ಲಿ ರೂಪುಗೊಂಡಿದೆ. ಭಕ್ತಿ ಜ್ಞಾನ ಕರ್ಮಗಳು ಇಲ್ಲಿ ಮುಪ್ಪುರಿಗೊಂಡು ಸಾಮರಸ್ಯಕ್ಕೇರಿಸುವ ನಿಚ್ಚಣಿಕೆಗಳನ್ನು ನಿರ್ಮಿಸಿವೆ". ಷಟ್ಸ್ಥಲಗಳನ್ನು ಕುರಿತ ಇಂತಹ ಮಹತ್ವದ ವಿಚಾರಗಳನ್ನು ತಿಳಿಸುವಲ್ಲಿ ಅವರಿಗೆ ವಚನಸಾಹಿತ್ಯವೇ ಆಧಾರವಾಗಿದೆ. ತಮ್ಮ ವಚನಗಳ ಮೂಲಕ ಷಟ್ಸ್ಥಲದ ಏರುಮುಖ ಮಾರ್ಗವನ್ನು ಪಥಿಸಿ ಬಸವಾದಿ ಶರಣರು ತಮ್ಮ ಬದುಕಿನಲ್ಲಿ ಕಂಡುಕೊಂಡ ಪರಿಪೂರ್ಣತೆಯನ್ನು ವಚನಗಳ ಮೂಲಕ ನುಡಿದಿದ್ದಾರೆ. ವಿದ್ಯಾರ್ಜನೆಯಲ್ಲಿ ಮೊದಲು ಪ್ರಾಥಮಿಕ, ನಂತರ ಮಾಧ್ಯಮಿಕ ಮುಂದೆ ಪ್ರೌಢಶಿಕ್ಷಣ ಹೀಗೆ ಒಂದು ಏರುಕ್ರಮವನ್ನು ಅನುಸರಿಸಿ ವಿದ್ಯಾರ್ಥಿ ಹೇಗೆ ಕಲಿಯುತ್ತಾನೋ ಅದೇ ರೀತಿ ವೀರಶೈವ ಧರ್ಮವನ್ನು ಅರಿತು ತನ್ನದಾಗಿಸಿಕೊಂಡು ನಡೆಯಲಿಚ್ಛಿಸುವ ವ್ಯಕ್ತಿಯೂ ಕೂಡ ಷಟ್ಸ್ಥಲ ಮಾರ್ಗದಲ್ಲಿನ ಹಂತಹಂತವಾದ ಮೆಟ್ಟಿಲುಗಳನ್ನು ಉಪಕ್ರಮಿಸಬೇಕು ಎಂದು ಸರಳವಾಗಿ ತಿಳಿಯುವಂತೆ ತಮ್ಮ ಆಶೀರ್ವಚನಗಳಲ್ಲಿ ಶ್ರೀ ಲಿಂಗಾನಂದ ಮಹಾಸ್ವಾಮಿಗಳು ಹೇಳಿದ್ದಾರೆ. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯವೆನ್ನುವವೇ ಆ ಆರು ಮೆಟ್ಟಿಲುಗಳು. ಈ ಒಂದೊಂದು ಮೆಟ್ಟಿಲಲ್ಲೂ ಅದರದೇ ಆದ ಕ್ರಮ ನಿಯಮಗಳಿವೆ. ಸಿದ್ಧಾಂತ ಶಿಖಾಮಣಿ, ಮಹಾಲಿಂಗ ಎಂಬುವರ ಏಕೋತ್ತರ ಶತಸ್ಥಲ, ಕಲ್ಲುಮಠದ ಪ್ರಭುದೇವರ ಲಿಂಗಲೀಲಾವಿಲಾಸಚಾರಿತ್ರ, ಹಾಗೆಯೇ ಬಸವಣ್ಣ, ಅಲ್ಲಮಪ್ರಭು ಮತ್ತು ಚನ್ನಬಸವಣ್ಣ ಇವರೇ ಮುಂತಾದ ಶರಣರು ನಿರೂಪಿಸಿರುವ ಷಟ್ಸ್ಥಲಸಂಬಂಧಿತ ವಚನಗಳು. ಇವುಗಳಲ್ಲಿ ಷಟ್ಸ್ಥಲಗಳ ಭಾಗ ಉಪವಿಭಾಗ ಕ್ರಮಗಳು ಅನೇಕವಿರುವುದನ್ನೂ ಪರಸ್ಪರ ಹೋಲಿಕೆ ವ್ಯತ್ಯಾಸಗಳಿರುವುದನ್ನೂ ತಮ್ಮ ಗ್ರಂಥದಲ್ಲಿ ವಿವರವಾಗಿ ಉಲ್ಲೇಖಿಸಿರುವ ತಿಪ್ಪೇರುದ್ರಸ್ವಾಮಿಗಳು 'ಒಟ್ಟಿನಲ್ಲಿ ಷಟ್ಸ್ಥಲಗಳ

ಚೌಕಟ್ಟನ್ನು ಇವೆಲ್ಲವೂ ಒಂದೊಂದು ರೀತಿಯಲ್ಲಿ ಸಮರ್ಥಿಸುತ್ತವೆನ್ನಬಹುದು. ಭಕ್ತಸ್ಥಲದಿಂದ ಐಕ್ಯಸ್ಥಲದವರೆಗೆ ಏರುವ ಆಧ್ಯಾತ್ಮಿಕ ಯಾತ್ರೆಯ ಮುನ್ನಡೆಯನ್ನೂ ಅದಕ್ಕೆ ಅವಶ್ಯವಾದ ಉಪಾಸನಾ ವಿಧಾನ, ಲಿಂಗಸ್ವರೂಪ, ಶಕ್ತಿ ಭಕ್ತಿಗಳ ಕಲ್ಪನೆಯನ್ನೂ ಬಹಳ ಅರ್ಥವತ್ತಾದ ರೀತಿಯಲ್ಲಿ ಮೂಡಿಸಿವೆ. ತಾತ್ತ್ವಿಕ ಸಿದ್ಧಾಂತ ಮತ್ತು ಆಚರಣೆಯ ಮಾರ್ಗದ ಶ್ರೇಣಿಗಳಲ್ಲಿ ಇದನ್ನು ಅದ್ವಿತೀಯವನ್ನಾಗಿಸಿವೆ' ಎಂದು ಅಭಿಪ್ರಾಯಪಡುತ್ತ ಮುಂದೆ ತಮ್ಮ ಗ್ರಂಥದಲ್ಲಿ ಷಟ್ಸ್ಥಲಗಳ ಬಗೆಗಿನ ವಿಚಾರಗಳನ್ನು ಶರಣರ ವಚನಗಳನ್ನು ಅಲ್ಲಲ್ಲಿ ಬಳಸಿಕೊಂಡು ಐವತ್ತಕ್ಕೂ ಹೆಚ್ಚು ಪುಟಗಳಲ್ಲಿ ವಿವರಿಸುತ್ತ ತಮ್ಮ ವಿವರಣೆ ಸಂಕ್ಷೇಪವಷ್ಟೇ ಎಂದು ವಿನಮ್ರವಾಗಿ ನುಡಿದಿದ್ದಾರೆ. ಉನ್ನತ ಮಟ್ಟದ ಈ ಸಂಶೋಧನಾತ್ಮಕ ಬರವಣಿಗೆಯನ್ನು ಎಲ್ಲೂ ಚ್ಯುತಿಯಾಗದಂತೆ ಇನ್ನೂ ಸಂಕ್ಷಿಪ್ತಗೊಳಿಸಿ ಹೇಳಬಹುದು ಎನ್ನುವುದು ಧಾರ್ಷ್ಟ್ಯದ ಮಾತು. 20ನೆಯ ಶತಮಾನ ಕಂಡ ಮಹಾವಿಜ್ಞಾನಿ ಐನ್‌ಸ್ಟೈನ್ ಒಂದು ಕಡೆ 'ಪ್ರತಿಯೊಂದನ್ನೂ ಸರಳಗೊಳಿಸಿ ಹೇಳಬೇಕೇ ಹೊರತು ಅತಿ ಸರಳಗೊಳಿಸಬಾರದು' ಎಂದು ವೈಜ್ಞಾನಿಕ ಸಿದ್ಧಾಂತಗಳ, ತತ್ತ್ವಗಳ ಬಗ್ಗೆ ಹೇಳಿರುವುದನ್ನು ಎಚ್ಚರಿಕೆಯ ನುಡಿಯೆಂದು ಮನಸ್ಸಿನಲ್ಲಿಟ್ಟುಕೊಂಡು, ಪ್ರಸ್ತುತ ಷಟ್ಸ್ಥಲದ ಆರು ಸ್ಥಲಗಳಲ್ಲಿ ಪಾಲಿಸಬೇಕಾದ ನಿಯಮಗಳ ಹಾಗೂ ವ್ಯಕ್ತಿಯೊಬ್ಬ ತನ್ನ ಪ್ರಾಪಂಚಿಕ ನೆಲೆಗಟ್ಟಿನ ಆಧಾರದೊಂದಿಗೆ ಆಧ್ಯಾತ್ಮಿಕ ನೆಲೆಗಟ್ಟನ್ನು ಪ್ರವೇಶಿಸಿ ಪಡೆಯಬಹುದಾದ ಪರಿಪೂರ್ಣತೆಯ ಬಗೆಗೆ ನನ್ನ ಮಿತಪ್ರಜ್ಞೆಗೆ ನಿಲುಕಿರುವಂತಹ ಸ್ಥೂಲ ವಿವರಣೆಯನ್ನು ಸಾಮಾನ್ಯ ಓದುಗರಿಗೆ ಸುಲಭವಾಗಿ ಅರ್ಥವಾಗುವಂತೆ ಅರುಹಬೇಕೆನ್ನುವ ಸದುದ್ದೇಶದೊಂದಿಗೆ ಮುಂದುವರಿಯುತ್ತೇನೆ. ಮೊದಲಿಗೆ ಮಹಾದೇವಮ್ಮನ

> ಭಕ್ತಂಗೆ ವಿಶ್ವಾಸ, ಮಾಹೇಶ್ವರರಿಗೆ ನಿಷ್ಠೆ
> ಪ್ರಸಾದಿಗೆ ಅವಧಾನ, ಪ್ರಾಣಲಿಂಗಿಗೆ ಯೋಗ,
> ಶರಣಂಗೆ ಮುನ್ನವೇ ಬಿಡುಗಡೆ,
> ಐಕ್ಯಂಗೆ ಕುರುಹುಗೊಂಬುದಕ್ಕೆ ಮುನ್ನವೇ ನಿರಾಳ,
> ಇಂತೀ ಷಟ್ಸ್ಥಲ ಭೇದ ಎನ್ನಯ್ಯಪ್ರಿಯ ನಿಃಕಳಂಕ ಮಲ್ಲಿಕಾರ್ಜುನಾ

ಹಾಗೂ ದಾಸೋಹದ ಸಂಗಣ್ಣನವರ

> ಭಕ್ತಂಗೆ ಕ್ರೀ, ಮಹೇಶ್ವರಂಗೆ ನಿಶ್ಚಯ;
> ಪ್ರಸಾದಿಗೆ ಅರ್ಪಣ, ಪ್ರಾಣಲಿಂಗಿಗೆ ಯೋಗ,
> ಶರಣಂಗೆ ನಿಬ್ಬೆರಗು, ಐಕ್ಯಂಗೆ ನಿರ್ಲೇಪ,
> ಇಂತೀ ಷಟ್ಸ್ಥಲವನವಗ್ರಹಿಸಿ ನಿಂದ ವಿರಕ್ತನ
> ಏಕಸ್ಥಲದಾಟ, ನಿಜತತ್ವದ ಕೂಟ;
> ಕುರುಹುಗೊಂಬುದಕ್ಕೆ ಮುನ್ನವೇ ನಿರಾಳ,
> ಶಂಭುವಿಂದಿತ್ತ ಸ್ವಯಂಭುವಿಂದತ್ತ ಅತಿಬಳ ನೋಡಾ
> ಮಾಕುಳಂಗ ಮಧುಕೇಶ್ವರನು

ವಚನಗಳು ತಿಪ್ಪೇರುದ್ರಸ್ವಾಮಿಯವರೇ ಹೇಳುವಂತೆ ಅತ್ಯಂತ ಸಂಕ್ಷಿಪ್ತರೂಪದಲ್ಲಿ ಆಯಾ ಸ್ಥಲದ ಗುಣಗಳನ್ನು ಪ್ರಸ್ತಾಪಿಸುತ್ತ ಷಟ್ಸ್ಥಲಗಳ ಒಟ್ಟು ವ್ಯಾಪ್ತಿಯನ್ನು ನಿರೂಪಿಸಿವೆ. ಈ ವಚನಗಳ ಬೆಳಕಿನಲ್ಲಿಯೇ ಕ್ರಮವಾಗಿ ಮುಂದುವರೆದು ಷಟ್ಸ್ಥಲಗಳನ್ನು ಅರ್ಥಮಾಡಿಕೊಳ್ಳಬಹುದೆನ್ನಿಸುತ್ತದೆ.

## 1. ಭಕ್ತಸ್ಥಲ

ಪ್ರಾರಂಭಿಕ ಮೆಟ್ಟಿಲಾದ ಭಕ್ತಸ್ಥಲದ ಎರಡು ಮುಖ್ಯ ಲಕ್ಷಣಗಳೆಂದರೆ ಮೇಲಿನ ವಚನಗಳೇ ಹೆಳುವಂತೆ ವಿಶ್ವಾಸ ಮತ್ತು ಕ್ರಿಯೆ. ವಿಶ್ವಾಸವೆಂದರೆ ಅಂಧಶ್ರದ್ಧೆಯಲ್ಲ, ವಿವೇಚನೆಯಿಂದ ಕೂಡಿದ ಶ್ರದ್ಧೆ. ಬದುಕಿನ ಎಲ್ಲ ಹಂತಗಳಲ್ಲಿಯೂ ವ್ಯಕ್ತಿ ತಾನು ನಡೆಯಬೇಕಾದ ದಾರಿಯಲ್ಲಿ ಎದುರಾಗುವ ಸಂಗತಿಗಳ ಬಗ್ಗೆ ವಿವೇಕಸಹಿತ ಆಲೋಚನೆಯಿಂದ, ಮಹತ್ವವೆನಿಸುವ ವಿಚಾರದಲ್ಲಿ ಗೌರವ ಮತ್ತು ನಂಬಿಕೆಗಳನ್ನು ಬೆಳೆಸಿಕೊಂಡಿರಬೇಕು. ಹಾಗೆಯೇ ಗುರುವಿನಿಂದ ಲಿಂಗದೀಕ್ಷೆ ಪಡೆದು ತನ್ನ ಕಾಯಕ, ಲಿಂಗಪೂಜೆ, ಜಂಗಮಸೇವೆ ಮುಂತಾದ ಕ್ರಿಯೆಗಳಲ್ಲಿ ತೊಡಗಬೇಕು. ವೀರಶೈವ ಧರ್ಮ ದೇವರ ಅಸ್ತಿತ್ವವನ್ನು ತನ್ನದೇ ರೀತಿಯಲ್ಲಿ ಒಪ್ಪಿಕೊಂಡಿದೆ. ಅದ್ಭುತವಾಗಿರುವ ಇಡೀ ಸೃಷ್ಟಿಯ ಹುಟ್ಟು, ರಚನೆ ಮತ್ತು ನಿರಂತರವಾಗಿ ನಡೆಯುತ್ತಿರುವ ಕ್ರಿಯಾಸರಣಿಗಳಿಗೆ ದೈವವೇ ಕಾರಣವಿರಬೇಕೆನ್ನುವ ಪರಿಕಲ್ಪನೆಯನ್ನು ಒಪ್ಪುತ್ತಲೇ, ನಮಗೆ ಮನಸ್ಸಾಕ್ಷಿಯೆಂಬುದಿದೆ ಎಂಬ ಪರಿಕಲ್ಪನೆಯನ್ನು ನಾವು ಒಪ್ಪಿಕೊಳ್ಳುವಂತೆ, ಇಡೀ ಸೃಷ್ಟಿಯ ಆಂತರ್ಯದ ಮನಸ್ಸಾಕ್ಷಿಯಾಗಿಯೇ ದೈವವನ್ನು ವೀರಶೈವ ಧರ್ಮ ಪರಿಭಾವಿಸಿದೆ. ದೈವವೆನ್ನುವುದು ಸೃಷ್ಟಿಯಲ್ಲಿನ ಎಲ್ಲವನ್ನೂ ಒಳಗೊಂಡಿದೆ ಅಥವಾ ಸೃಷ್ಟಿಯ ಸಕಲ ಚರಾಚರಗಳಲ್ಲಿಯೂ ದೈವಾಂಶವಿದೆ ಎನ್ನುತ್ತದೆ ವೀರಶೈವ ಧರ್ಮ. ದೈವದ ಪರಿಕಲ್ಪನೆ ಎಲ್ಲ ಧರ್ಮಗಳಲ್ಲಿದ್ದರೂ ಕೂಡ ಅದನ್ನು ಪರಿಭಾವಿಸುವುದು ಎಲ್ಲರಿಗೂ ಸುಲಭವಲ್ಲ. ಪ್ರಾರಂಭಿಕ ಹಂತದಲ್ಲಿ ಗುರು ಕೊಟ್ಟ ಇಷ್ಟಲಿಂಗವನ್ನೇ ದೈವದ ಕುರುಹಾಗಿಟ್ಟುಕೊಂಡು ತನ್ನೆಲ್ಲ ಕ್ರಿಯಾಚರಣೆಗಳಿಗೆ ಆ ಲಿಂಗವನ್ನೇ ಸಾಕ್ಷಿಯಾಗಿಟ್ಟು ಕೊಂಡು ಭಕ್ತನಾಗುವವನು ಮುಂದುವರೆಯಬೇಕು. ಕಾಯಾ ವಾಚಾ ಮನಸಾ ತಾನು ಸೃಷ್ಟಿಯ ಅವಿಭಾಜ್ಯ ಅಂಗವಾಗಿದ್ದೇನೆನ್ನುವ ನಿಲುವು ಅವನದಾಗಬೇಕು. ಇದನ್ನೇ ದೈವೀಕರಿಸಿ ಹೇಳುತ್ತ ಎಲ್ಲರಲ್ಲೂ ತನ್ನಲ್ಲೂ ಶಿವನ ಅಂಶ ಸುಪ್ತವಾಗಿ ಅಡಗಿದೆ ಎಂದು ಶರಣರು ಭಕ್ತಸ್ಥಲದಲ್ಲಿನ ನಿಲುವನ್ನು ತಿಳಿಸಿದ್ದಾರೆ. ಬೆಳೆಯುತ್ತಿರುವಾಗ ಪ್ರಾರಂಭದ ಎಳೆತನದಲ್ಲಿ ವ್ಯಕ್ತಿ ಈ ಸುಪ್ತಚೈತನ್ಯದ ಅರಿವಿಲ್ಲದೆಯೋ ಅಥವಾ ಮುಂದೆ ಇಂದ್ರಿಯಾಧೀನನಾಗಿ ಪ್ರಾಪಂಚಿಕ ವಿಷಯಗಳ ಬಗ್ಗೆ ಅತಿಯಾದ ಮೋಹ ಬೆಳೆಸಿಕೊಂಡ ಕಾರಣ ತನ್ನಲ್ಲಿರುವ ದೈವಾಂಶದ ಬಗ್ಗೆ ವಿಸ್ಮೃತಿಯುಂಟಾಗಿಯೋ, ಐಹಿಕ ಸಂಸಾರ ಸಾಗರವೇ ತನ್ನ ಶಕ್ತಿಸಾಮರ್ಥ್ಯಗಳ ಆಸೆ ಆಕಾಂಕ್ಷೆಗಳ ಆಗರವೆಂದು ಪರಿಭಾವಿಸಿ

ಅದರ ಐಂದ್ರಜಾಲಿಕ ಬಲೆಯೊಳಗೆ ಸಿಲುಕಿ ಏಳುಬೀಳುಗಳಿಗೆ ತುತ್ತಾಗುತ್ತಾನೆ. ಈ ಮೋಹಪಾಶಕ್ಕೆ ಸಿಲುಕದೆ ಭಕ್ತನಾಗಬೇಕಾದರೆ ಎಚ್ಚರದಿಂದ ಹೆಜ್ಜೆಯಿಡಬೇಕು. ತಾನು ಒಂದು ವಿಶಾಲ ವ್ಯವಸ್ಥೆಯ ಭಾಗವಾಗಿದ್ದೇನೆ. ಆ ನೆಲೆಗಟ್ಟಿನಲ್ಲಿ ಶ್ರದ್ಧೆಯಿಂದ ಕ್ರಿಯಾಶೀಲನಾದರೆ ಲೌಕಿಕದ ಪರಿಮಿತ ಸುಖಕ್ಕಷ್ಟೇ ಭಾಜನನಾಗದೆ ಪರಿಪೂರ್ಣವಾದ ಆನಂದವನ್ನೂ ಹೊಂದಬಹುದು ಎನ್ನುವುದನ್ನು ಆತ ಮನಗಾಣಬೇಕು. ನಮ್ಮ ಸುತ್ತಲಿನ ಸೃಷ್ಟಿಯ ಆಕರ್ಷಣೆಯನ್ನು ಭ್ರಾಂತಿಜನ್ಯವೆಂದು ತಿರಸ್ಕರಿಸದೆ ಸಾಂಸಾರಿಕ ಬದುಕು ಮುಂದೊಡ್ಡುವುದನ್ನು ಮಾಯೆ, ಅಸಹಜವೆಂದು ವೈರಾಗ್ಯತಾಳದೆ ಅದನ್ನೆಲ್ಲ ಸತ್ಯವೆಂದು ಒಪ್ಪಿಕೊಂಡು ಎಲ್ಲವನ್ನೂ ಸಮರಸಭಾವದಿಂದ ಸ್ವೀಕರಿಸಿ ಚೆನ್ನಾಗಿ ಜೀವಿಸುವುದನ್ನು ಗುರಿಯಾಗಿಸಿಕೊಳ್ಳಬೇಕು. ಇದಕ್ಕಾಗಿ ಗುರುವಿನಿಂದ ಪಡೆದ ಲಿಂಗದೀಕ್ಷೆಯಲ್ಲಿ ಶ್ರದ್ಧೆಯಿಟ್ಟು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೂ ತನ್ನ ದಿನನಿತ್ಯದ ಬದುಕಿನ ನಿರ್ವಹಣೆಗಾಗಿಯೂ ಶ್ರಮವನ್ನಾಧರಿಸಿದ ಸತ್ಯ ಶುದ್ಧ ಕಾಯಕವೊಂದನ್ನು ಮಾಡುತ್ತ ಜೊತೆಜೊತೆಗೇ ಸಾಧ್ಯವಾದಷ್ಟುಮಟ್ಟಿಗೆ ಸಮಾಜದ ಸ್ವಾಸ್ಥ್ಯ ಮತ್ತು ಪರಿಸರದ ಸಂರಕ್ಷಣೆಗೂ ವ್ಯಕ್ತಿ ಸಮರ್ಪಣಾಭಾವದೊಂದಿಗೆ ಕಟಿಬದ್ಧನಾಗಬೇಕು. ನಮ್ಮ ಇರವಿಗೆ ಕಾರಣವಾದ, ಬದುಕಿನ ನಿರ್ವಹಣೆಗೆ ಸಂಪನ್ಮೂಲ ಒದಗಿಸುವ, ಸದಾಶಯಗಳಿಗೆ ಆಶ್ರಯ ಒದಗಿಸುವ ಸೃಷ್ಟಿಯ ವಿವಿಧ ವ್ಯವಸ್ಥೆಗಳನ್ನು ತಿರಸ್ಕರಿಸದೆಯೇ ಅವುಗಳು ಕೊಡುವಂತಹ ಫಲಗಳನ್ನು ಸ್ವೀಕರಿಸುವಲ್ಲಿ, ಅವುಗಳು ಸಾಂದರ್ಭಿಕವಾಗಿ ಒಡ್ಡಬಹುದಾದ ಪ್ರಲೋಭನೆಗಳಿಗೆ ಎದುರಾಗುವಲ್ಲಿ ಸಮಭಾವದಿಂದ ಪ್ರತಿಕ್ರಿಯಿಸುವ ಪ್ರವೃತ್ತಿಯನ್ನು ಭಕ್ತಸ್ಥಲ ವ್ಯಕ್ತಿಯಿಂದ ನಿರೀಕ್ಷಿಸುತ್ತದೆ. ಕಾಲದ ಪರಿಮಿತಿಯೊಳಗೆ ಇದೆಲ್ಲ ರೀತಿಯ ವರ್ತನೆಗಳನ್ನು ಮೈಗೂಡಿಸಿಕೊಂಡು ಹತ್ತಾರು ದಿನಗಳಲ್ಲಿಯೇ ಭಕ್ತನಾಗಲು ಸಾಧ್ಯವೇ ಎಂದು ಅನ್ನಿಸಬಹುದೇನೋ. ಭಕ್ತಸ್ಥಲ ಪ್ರವೇಶಿಸುವ ವ್ಯಕ್ತಿ ಈ ರೀತಿ ಆಲೋಚಿಸುವುದಕ್ಕಿಂತಲೂ, ಬೇಗ ಈ ಮೆಟ್ಟಿಲನ್ನು ಏರಿ ಮುಂದಿನ ಮೆಟ್ಟಿಲನ್ನು ಪ್ರವೇಶಿಸಬೇಕೆಂಬ ಹಂಬಲವೊಂದುವುದಕ್ಕಿಂತಲೂ, ತಾನು ಪ್ರವೇಶಿಸ ಲಿಚ್ಛಿಸುವ ಭಕ್ತಸ್ಥಲವು ತನ್ನಲ್ಲಿ ಏನನ್ನು ನಿರೀಕ್ಷಿಸುತ್ತದೆ, ಅದು ನಿರೀಕ್ಷಿಸುವ ಗುಣ ಗಳಿವೆಯೇ, ಹಾಗೆಯೇ ಅದು ಒಪ್ಪದಂತಹ ಅವಗುಣಗಳು ನನ್ನಲ್ಲಿ ಮನೆಮಾಡಿವೆಯೇ ಎನ್ನುವುದನ್ನು ತಿಳಿಯುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅನಂತರ ಅವಗುಣ ಗಳನ್ನು ವರ್ಜಿಸಿ ಸದ್ಗುಣಗಳನ್ನು ಬೆಳೆಸಿಕೊಳ್ಳುವ ಕಡೆಗೆ ಪ್ರಯತ್ನಶೀಲನಾಗಬೇಕು. ಈ ಕಾರ್ಯಕ್ಕೆ ಎಷ್ಟು ಸಮಯ ಹಿಡಿಯುತ್ತದೋ ಎನ್ನುವುದು ವ್ಯಕ್ತಿಯ ನಿಷ್ಠೆಯನ್ನು ಅವಲಂಬಿಸಿದೆ. ಭಕ್ತಸ್ಥಲ ಪ್ರವೇಶಕ್ಕಾಗಿ ಇಡೀ ಆಯುಷ್ಯವನ್ನೇ ಕಳೆಯಬೇಕಾದರೂ ಅಷ್ಟೂ ಕಾಲ ಒಳಗೊಳಗೇ ಪರಿವರ್ತನೆಹೊಂದುವ ವ್ಯಕ್ತಿಗೆ ತನ್ನ ಗುರಿ ಮುಟ್ಟುವಲ್ಲಿನ ಸತ್ಪ್ರಯತ್ನದ ಹಾದಿಯೇ ತಕ್ಕಮಟ್ಟಿನ ಸಮಾಧಾನ ತೃಪ್ತಿಗಳನ್ನಂತೂ ನೀಡುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲವೆನಿಸುತ್ತದೆ.

## 2. ಮಹೇಶಸ್ಥಲ

ಭಕ್ತಸ್ಥಲದ ಮುಂದಿನ ಈ ಸ್ಥಲದಲ್ಲಿ ವಿಚಾರ ಆಚಾರಗಳಿಂದ ಗಟ್ಟಿಗೊಂಡ ಅಚಲವಾದ ಸಾತ್ವಿಕ ಸತ್ವರವಾದ ನಿಷ್ಠೆಯೇ ಪ್ರಧಾನ ಗುಣ. ಪರದೈವವನೊಲ್ಲದ ಛಲ, ಕಾಯದ ಕಳವಳಕ್ಕಂಜದ, ಮರಣವನ್ನು ಮಹಾನವಮಿಯೆಂದು ಭಾವಿಸುವ ಧೈರ್ಯ, ಸತ್ಯವೆಂಬುದನ್ನು ಎಂತಹ ಪ್ರಸಂಗದಲ್ಲೂ ಬಿಡದ ಪ್ರಾಮಾಣಿಕ ಮನೋಧರ್ಮ, ಇಷ್ಟೇ ಅಲ್ಲದೆ, ಭಕ್ತಸ್ಥಲದಲ್ಲಿ ವಿಶ್ವಾಸವಿಟ್ಟ ಗುರು ಲಿಂಗ ಜಂಗಮಕ್ಕೆ ತ್ರಿವಿಧ ದಾಸೋಹ ಮಾಡುವಲ್ಲಿ ಸದಾ ಮಗ್ನವಾಗಿರುವಿಕೆ, ಶುಭ ಅಶುಭಗಳೆಂದು ಕಾಲವನ್ನು ನಿರ್ಣಯಿಸುತ್ತಿದ್ದನ್ನು ನಿರಾಕರಿಸುವಿಕೆ, ವರ್ಣಾಶ್ರಮ ವ್ಯವಸ್ಥೆಯನ್ನು ಒಪ್ಪದೆ ಆ ವ್ಯವಸ್ಥೆಯಿಂದ ಆಗುತ್ತಿದ್ದ ಅನಾಚಾರವನ್ನು ಖಂಡಿಸುವಿಕೆ, ಮೇಲ್ವರ್ಗದ ಅಪ್ರಾಮಾಣಿಕತೆ ಮತ್ತು ಪಟ್ಟಭದ್ರಹಿತಾಸಕ್ತಿಗಳಿಂದಾಗಿ ಸಾಂಸ್ಥಿಕಗೊಂಡು ಇನ್ನಿತರ ವರ್ಗದ ಜನರನ್ನು ಗುಡಿಗುಂಡಾರಗಳ ಮೂಲಕ, ಅಲ್ಲಿ ನಡೆಸುತ್ತಿದ್ದ ಹಿಂಸಾಮೂಲ ಯಜ್ಞಯಾಗಾದಿಗಳ ಮೂಲಕ ಶೋಷಿಸುತ್ತಿದ್ದ ವ್ಯವಸ್ಥೆಯನ್ನು ಸಾರಾಸಗಟಾಗಿ ತಿರಸ್ಕರಿಸುವಿಕೆ ಹೀಗೆ ಮಹೇಶಸ್ಥಲದಲ್ಲಿ ನಿಷ್ಠೆ ಹಲವು ವಿಭಿನ್ನ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ವಚನಗಳಲ್ಲಿ ಈ ಎಲ್ಲದರ ಬಗ್ಗೆ ಬಹಳಷ್ಟು ರೀತಿಯಲ್ಲಿ ಶರಣರು ತಿಳಿಸಿದ್ದಾರೆ. ಉದಾತ್ತ ಶಕ್ತಿಯೊಂದನ್ನು ಇಷ್ಟಲಿಂಗದ ರೂಪದಲ್ಲಿ ಅಂಗದಮೇಲೆ ಧರಿಸಿಕೊಂಡು ಆ ಶಕ್ತಿಯು ಸೃಷ್ಟಿಯ ಚರಾಚರಗಳಲ್ಲೂ ತನ್ನಲ್ಲೂ ಇರುವುದೆಂದು ಭಾವಿಸಿದ ಮೇಲೆ ಅದೊಂದೇ ದೈವ, ಅದನ್ನು ಬಿಟ್ಟು ಇನ್ನೊಂದು ದೈವದ ಕಲ್ಪನೆಯೂ ಇರಬಾರದು. ತನ್ನ ಕಾಯಕ ಮೊದಲು ಸತ್ಯಶುದ್ಧವಾಗಿರಬೇಕು, ಅದನ್ನು ಮಾಡುವಲ್ಲಿ ಶಿಸ್ತು, ಸಂಯಮ ಪ್ರಾಮಾಣಿಕತೆಗಳನ್ನು ಅಳವಡಿಸಿಕೊಂಡಿರಬೇಕು, ಇದೇ ಕಾಯಕನಿಷ್ಠೆ. ಇಂತಹ ಕಾಯಕವನ್ನು ಮಾಡುವಲ್ಲಿ ಇನ್ನಿತರ ಎಲ್ಲ ಜೀವಿಗಳ ಬಗ್ಗೆ ದಯೆ ಮತ್ತು ಅಹಿಂಸಾತ್ಮಕ ಭಾವ ವ್ಯಕ್ತವಾಗಬೇಕು. ಕಾಯಕದಿಂದ ಬಂದ ಫಲ ಕೇವಲ ತಾನು ಗಳಿಸಿಕೊಂಡದ್ದಲ್ಲ. ಅದು ದೈವದಿಂದ ಬಂದ ಪ್ರಸಾದ. ಗುರುವಿನಿಂದ ಸಿಕ್ಕ ಅನುಗ್ರಹ, ಸಮಾಜದಿಂದ ದೊರೆತ ಕಾಣಿಕೆಯೆಂದು ಭಾವಿಸಿ ತನ್ನ ಬದುಕಿನ ನಿರ್ವಹಣೆಗಾಗಿಯಷ್ಟೇ ಬಳಸಿಕೊಳ್ಳದೆ ಅದನ್ನು ಗುರು ಲಿಂಗ ಜಂಗಮಕ್ಕೂ ಅರ್ಪಿಸಬೇಕು. ಬರ್ಟ್ರಂಡ್ ರಸಲ್ ಯಾರೇ ವ್ಯಕ್ತಿ ದೀರ್ಘಕಾಲ ಬದುಕಬೇಕೆಂದು ಹೇಳುತ್ತ ಆ ಆಶಯದ ಹಿಂದೆ ದೀರ್ಘಕಾಲ ಬದುಕಿದಷ್ಟೂ ಈ ಸಮಾಜದ ಕಷ್ಟಗಳನ್ನು ನಿವಾರಿಸಲು ಹೆಚ್ಚು ಸಮಯ ಸಿಗುತ್ತದೆನ್ನುವ ಸತ್ಯವೊಂದನ್ನು ಮುಂದಿಡುತ್ತಾನೆ. ಶರಣರ ತ್ರಿವಿಧ ದಾಸೋಹ ಕಾರ್ಯದಲ್ಲೂ ಕೂಡ ದೀನದಲಿತರ ನೊಂದವರ ಸೇವೆಯನ್ನು ಭಕ್ತನ ಕರ್ತವ್ಯದ ಭಾಗವೆಂದು ತಿಳಿಯಲಾಗಿದೆ. ವೀರಶೈವ ಧರ್ಮದ ಹಾದಿಯಲ್ಲಿ ನಡೆಯಬಯಸುವವರು ಈ ದಾಸೋಹ ನಿಷ್ಠೆಯನ್ನು ಮನಗಂಡು ಅದಕ್ಕೆ ಬದ್ಧರಾಗಿರಬೇಕೆಂದು ಮಹೇಶಸ್ಥಲ ನಿರ್ದೇಶಿಸುತ್ತದೆ. ಭಕ್ತ ಮತ್ತು ಮಹೇಶ

ಸ್ಥಲಗಳಲ್ಲಿ ಸಾಧಕನ ಆಧ್ಯಾತ್ಮಿಕ ಯಾತ್ರೆ ನಿಶ್ಚಿತಗೊಂಡು ನಿರಾತಂಕವಾಗಿ ಅದರಲ್ಲಿ ಮುನ್ನಡೆಯುವ ಶಕ್ತಿ ಲಭಿಸುತ್ತದೆಂದು, ಶ್ರದ್ಧಾ ಮತ್ತು ನೈಷ್ಠಿಕಾ ಭಕ್ತಿಗಳ ಹಿನ್ನೆಲೆಯಲ್ಲಿ ಆಚಾರ ವಿಚಾರಗಳೆರಡಕ್ಕೂ ಸಮಾನ ಸ್ಥಾನ ದೊರಕುವುದೆಂದು ತಿಳಿಸುತ್ತ ಈ ಎರಡು ಸ್ಥಲಗಳು ಆಧ್ಯಾತ್ಮಿಕ ಸಾಧನೆಯ ವಿಕಾಸಕ್ಕೆ ಭದ್ರ ಬುನಾದಿಯನ್ನು ಒದಗಿಸುತ್ತವೆ ಎಂದು ಸಕಾರಣವಾಗಿಯೇ ತಿಪ್ಪೇರುದ್ರಸ್ವಾಮಿಯವರು ಅಭಿಪ್ರಾಯಪಡುತ್ತಾರೆ.

### 3. ಪ್ರಸಾದಿಸ್ಥಲ

ಈ ಮೂರನೇ ಸ್ಥಲಕ್ಕೆ ಮಹದೇವಮ್ಮನ ವಚನ ಅವಧಾನಗುಣವನ್ನು ಸಂಗಣ್ಣನ ವಚನ ಅರ್ಪಣಗುಣವನ್ನು ನಿರ್ದೇಶಿಸುತ್ತವೆ. ಹಿಂದಿನ ಎರಡು ಸ್ಥಲದಲ್ಲಿ ಅನುಸರಿಸಿದ ಶ್ರದ್ಧೆ ಮತ್ತು ನಿಷ್ಠೆಗಳೆರಡೂ ಇಲ್ಲಿ ಅಪ್ರಯತ್ನಪೂರ್ವಕವಾದ ಸಹಜಸ್ಥಿತಿಯಾಗಿ ಪರಿಣಮಿಸುತ್ತವೆ. ಹಿಂದಿನಿಂದ ಮನೆಮಾಡಿದ್ದ ಆತಂಕ ತಳಮಳಗಳು, ಛಲ ಹಠ ಮುಂತಾದ ಗುಣಗಳು ಮೃದುತ್ವ ಪಡೆದು ಮನಸ್ಸಿನ ಪ್ರಸನ್ನತೆಗೆ ಕಾರಣವಾಗುತ್ತವೆ. ಇಂತಹ ಸ್ಥಿತಿಯಲ್ಲಿ ಸಾಧಕನ ಮನಸ್ಸು ಅವಧಾನಸ್ಥಿತಿಗೆ ಒಳಗಾಗಬೇಕು. ಸತ್ಕಾರ್ಯದೆಡೆಗೆ ತುಡಿಯುವಂತಾಗಬೇಕು. ಅವಧಾನವೆಂದರೆ ಪ್ರಜ್ಞಾವಸ್ಥೆಯಲ್ಲಿ ಮನಸ್ಸು ಎದುರಿನ ಎಲ್ಲ ವಿಷಯಗಳ ಕಡೆಗೂ ಹರಿದಿರುತ್ತದಾದರೂ ಯಾವುದೋ ಉದ್ದಿಷ್ಟ ವಿಷಯದಲ್ಲಿ ಮಾತ್ರ ವಿಶಿಷ್ಟವಾಗಿ ಕೆಲಸ ಮಾಡುತ್ತಿರುತ್ತದೆ. ಎಲ್ಲ ಇಂದ್ರಿಯಶಕ್ತಿಗಳನ್ನೂ ಏಕೀಭವಿಸುವಂತೆ ಮಾಡಿ ಪ್ರಕೃತವಿಷಯದತ್ತ ಮಾತ್ರ ಮನಸ್ಸನ್ನು ಕೇಂದ್ರೀಕೃತಗೊಳಿಸಿ ನಿರ್ದಿಷ್ಟರೀತಿಯಲ್ಲಿ ಕಾರ್ಯೋನ್ಮುಖವಾದರೆ ದೊಡ್ಡ ಸಾಧನೆಗಳು ಸಾಧ್ಯವಾಗುತ್ತವೆ. ಆಸಕ್ತಿಗೆ ತಕ್ಕಂತೆ ಅವಧಾನ, ಅವಧಾನಕ್ಕೆ ತಕ್ಕಂತೆ ಅರಿವೂ ಉಂಟಾಗುತ್ತದೆ. ಇಂತಹ ಅವಧಾನವನ್ನು ಸಾಧಕ ತನ್ನ ಕಾಯಕನಿರತತೆಯಲ್ಲಿ ಮುಂಗಾಣಬೇಕು. ತಾನು ಮಾಡುವುದು ಅಹಂಕಾರಕ್ಕೋ ಬಯಕೆಗೋ ಕಾರಣವಾಗದ ರೀತಿಯಲ್ಲಿ, ಮುಂದೊಂದನ್ನು ಕಲ್ಪಿಸಿಕೊಳ್ಳುವ ಹಿಂದೊಂದನ್ನು ಭಾವಿಸುವಂತಹ ಅವಗುಣಗಳನ್ನು ಅಪೇಕ್ಷಿಸದೆ, ತನ್ನ ಬದುಕಿಗೊಂದಿಷ್ಟು ಬಿಟ್ಟು ಉಳಿದೆಲ್ಲವೂ ಗುರು ಲಿಂಗ ಜಂಗಮಕ್ಕೆ ಸಲ್ಲತಕ್ಕದ್ದು ಎಂದು ಭಾವಿಸಿ ತನ್ನ ಕಾಯಕದಲ್ಲಿ ಸತತ ಮಗ್ನನಾಗಿರಬೇಕು. ಇಂತಹ ಸದಾಶಯದ ಸೇವಾಮನೋಭಾವದ ಅವಧಾನಕ್ಕಾಗಿ ಸಾಧಕ ತನ್ನನ್ನೇ ಅರ್ಪಿಸಿಕೊಳ್ಳಬೇಕಾಗುತ್ತದೆ. ಪ್ರಾರಂಭದಲ್ಲಿ ಕಷ್ಟವೆನಿಸಿದರೂ ಎಡಬಿಡದೆ ಪ್ರಯೋಗಶೀಲನಾದಲ್ಲಿ ಪ್ರಸಾದಿಯ ಮೆಟ್ಟಿಲನ್ನೇರುವುದು ಸಾಧ್ಯವೆನ್ನುವುದನ್ನು ಬಸವಯುಗದ ಶರಣರು 12 ನೆಯ ಶತಮಾನದಲ್ಲಿಯೇ ತೋರಿಸಿಕೊಟ್ಟಿದ್ದಾರೆ. ಇಂತಹ ಶರಣರು ಈಗಲೂ ನಮ್ಮ ನಡುವೆ ಇದ್ದಾರೆ. ಗುರುತಿಸುವ ಮನಸ್ಸಿದ್ದರೆ, ತಾವಾಯಿತು ತಮ್ಮ ಕೆಲಸವಾಯಿತು ಎಂದುಕೊಂಡು ಹೊಲದಲ್ಲಿ ಉಳುತ್ತಿರುವ ರೈತನಲ್ಲೋ, ಪ್ರತಿನಿತ್ಯ ಬೀದಿಗುಡಿಸುತ್ತ ಶುಚಿಗೊಳಿಸುವ ಜಲಗಾರನಲ್ಲೋ, ಮಕ್ಕಳ ಮನಮುಟ್ಟುವಂತೆ ನಿರ್ವಂಚನೆಯಿಂದ

ಪಾಠಮಾಡುತ್ತಿರುವ ಶಿಕ್ಷಕನಲ್ಲೋ, ಒಂದು ಕುಟುಂಬದ ಮನೆಯೊಳಗಿನ ಮಕ್ಕಳ ಲಾಲನೆ ಪಾಲನೆಯಿಂದ ಹಿಡಿದು ಎಲ್ಲ ಜವಾಬ್ದಾರಿಗಳನ್ನೂ ಹೊತ್ತು ತನ್ನ ಗೃಹಕೃತ್ಯದ ಕಾಯಕದಲ್ಲೇ ನಿಷ್ಠೆಯಾಗಿರುವ ಗೃಹಿಣಿಯಲ್ಲೋ, ಹೀಗೆ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಸತ್ಯ ಶುದ್ಧ ಕಾಯಕಕ್ಕೆ ತಮ್ಮನ್ನೇ ಅರ್ಪಿಸಿಕೊಂಡು ಪ್ರಸಾದಿಗಳಾಗಿರುವವರನ್ನು ಈಗಲೂ ಕಾಣಬಹುದು. ಅತ್ಯಂತ ಸಾಮಾನ್ಯರಂತೆ ಬರಿಗಣ್ಣಿಗೆ ಅಪರೂಪಕ್ಕೆ ಅಲ್ಲಲ್ಲಿ ಕಾಣಸಿಗುವ ಇಂತಹ ಮಹನೀಯರನ್ನು ಗುರುತಿಸಬೇಕಾದರೆ ಅತಿಯಾಗಿ ಆವರಿಸಿರಬಹುದಾದ ಪ್ರಾಪಂಚಿಕದ ಪೊರೆ ಕಳಚಿ ನೋಡಬೇಕು.

## 4. ಪ್ರಾಣಲಿಂಗಿಸ್ಥಲ

ಮೇಲಿನ ಮೂರು ಸ್ಥಲಗಳಲ್ಲಿನ ಸಾಧನೆ ಈ ಪ್ರಾಣಲಿಂಗಿಸ್ಥಲದಲ್ಲಿ ಇನ್ನೂ ಮೇಲಿನ ಹಂತಕ್ಕೇರುತ್ತದೆ ಎಂದು ಅಭಿಪ್ರಾಯಪಡುವ ಸ್ವಾಮಿಯವರು ಇಲ್ಲಿ ಎರಡು ಮುಖ್ಯ ಅಂಶಗಳಿರುವುದನ್ನು ಗಮನಿಸಿ ಇದೊಂದು ಮಹತ್ವದ ಸ್ಥಲ ಎಂದೂ ಗುರುತಿಸಿದ್ದಾರೆ. ಲಿಂಗಾಯತ ಧರ್ಮದಲ್ಲಿ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗ ಎಂದು ಮೂರುಂಟು. ದೇವಾಲಯಗಳ ಸ್ಥಾವರಲಿಂಗಗಳನ್ನು ಪೂಜಿಸುವ ಸ್ವಾತಂತ್ರವನ್ನು ಎಲ್ಲರಿಗೂ ನೀಡದಿದ್ದ ಸನ್ನಿವೇಶದಲ್ಲಿ ದೇವರ ಕುರುಹಾಗಿ ಗುರುವಿನಿಂದ ದೀಕ್ಷೆಯಾಗಿ ಪಡೆದದ್ದು ಮೂರ್ತರೂಪದ ಇಷ್ಟಲಿಂಗ. ತನ್ನೆಲ್ಲ ಕಾರ್ಯಗಳಿಗೆ ಅದನ್ನು ಸಾಕ್ಷಿಯನ್ನಾಗಿಟ್ಟುಕೊಂಡು ಸಾಧಕ ಭಕ್ತ ಮಹೇಶ ಪ್ರಸಾದಸ್ಥಲಗಳಲ್ಲಿ ವಿಕಾಸವನ್ನು ಕಾಣತೊಡಗುತ್ತಾನೆ. ಇಷ್ಟಲಿಂಗವೆಂಬುದು ಪ್ರಾರಂಭದಲ್ಲಿ ಬಹಿರಂಗದಲ್ಲಿ ಗುರುತಿಸಿಕೊಳ್ಳುವ ದೈವತ್ವದ ಕುರುಹಾದರೆ ಪ್ರಾಣಲಿಂಗವೆಂಬುದು ಅಂತರಂಗದಲ್ಲಿರುವ ದೈವತ್ವದ ಗುರುತು. ಬಹಿರಂಗದ ಇಷ್ಟಲಿಂಗದ ಪೂಜೆ ಮತ್ತು ಧ್ಯಾನ ಯೋಗಾಭ್ಯಾಸದ ಮೂಲಕ ಅಂತರಂಗದ ದೈವತ್ವವನ್ನು ಸಾಧಕ ಪ್ರಾಣಲಿಂಗವೆಂದು ಕಾಣಲು ತೊಡಗುತ್ತಾನೆ. ಇಷ್ಟಲಿಂಗ ಮತ್ತು ಪ್ರಾಣಲಿಂಗಗಳು ನಿಜಕ್ಕೂ ಬೇರೆಯಲ್ಲ. ಒಂದು ಊರ ಹೊರಗಣ ಬಯಲು ಇನ್ನೊಂದು ಊರ ಒಳಗಿನ ಬಯಲು. ಪರುಷ ಮತ್ತು ಲೋಹಗಳೆರಡೂ ಕೂಡಿ ಹೇಮವಾದಂತೆ ಎರಡೂ ಒಂದಾಗುವುದರಲ್ಲಿ ಸಾಧಕನ ಸಾರ್ಥಕತೆ ಸಾಕ್ಷಾತ್ಕಾರವಾಗುತ್ತದೆ. ಈ ಸಾಧನೆಗೆ ಯೋಗಾಭ್ಯಾಸ ಅತ್ಯಂತ ಆವಶ್ಯಕ. ದೇಹವನ್ನು ಮನಸ್ಸಿನ ಹತೋಟಿಯಲ್ಲಿಡಲು ಯಮ ನಿಯಮ ಮುಂತಾದ ಕ್ರಮಗಳು ಮತ್ತು ವಿವಿಧ ಯೋಗಾಸನಗಳು, ಮನಸ್ಸನ್ನು ಹತೋಟಿಯಲ್ಲಿಡಲು ಪ್ರಾಣಾಯಾಮ ಹೀಗೆ ಎಲ್ಲವನ್ನೂ ಕ್ರಿಯಾತ್ಮಕವಾಗಿ, ಪ್ರಯತ್ನಪೂರ್ವಕವಾಗಿ ನಿಷ್ಠೆಯಿಂದ ಮಾಡತೊಡಗಿ ಧ್ಯಾನ ಧಾರಣ ಸಮಾಧಿಸ್ಥಿತಿಗಳಲ್ಲಿ ಭಾಗಿಯಾಗಿ ಈ ಪ್ರಾಣಲಿಂಗಿಯ ಸ್ಥಲದಲ್ಲಿ ಸಾಧಕ ತನ್ನ ಅಂತಃಶಕ್ತಿಯ ಸ್ವರೂಪವನ್ನು ಕಾಣುತ್ತ ತನ್ಮೂಲಕ ಅಮೂರ್ತರೂಪದಲ್ಲಿ ಕಾಯವನ್ನು ಆವರಿಸಿರುವ ಪ್ರಾಣಲಿಂಗದ ಉಪಾಸನೆಗೈಯಬೇಕು.

### 5. ಶರಣಸ್ಥಲ

ಪ್ರಾಣಲಿಂಗಿ ಸ್ಥಲದಲ್ಲಿ ಪ್ರಯತ್ನಪೂರ್ವಕವಾಗಿ ಕೈಕೊಂಡ ಯೋಗಸಾಧನೆಯ ಅನುಭಾವ ಶರಣಸ್ಥಲದಲ್ಲಿಯೂ ಮುಂದಿನ ಐಕ್ಯಸ್ಥಲದಲ್ಲಿಯೂ ಸಹಜಸ್ಥಿತಿಯಾಗಿ ಪರಿಣಮಿಸುತ್ತವೆಯೆಂದು ತಿಪ್ಪೇರುದ್ರಸ್ವಾಮಿಯವರು ಅಭಿಪ್ರಾಯಪಡುತ್ತಾರೆ. ಕರಸ್ಥಲದಲ್ಲಿಟ್ಟುಕೊಂಡು ದೈವದ ಕುರುಹಾಗಿ ಪೂಜಿಸಿದ ಇಷ್ಟಲಿಂಗ, ಯೋಗಾಭ್ಯಾಸದ ಧ್ಯಾನಧಾರಣ ಸಮಾಧಿಸ್ಥಿತಿಗಳ ಮೂಲಕ ಕಂಡುಕೊಂಡ ಪ್ರಾಣಲಿಂಗದ ಜೊತೆಗೆ ಸಾಧಕ ತನ್ನ ಮನೋಲೋಕದೊಳಗೂ ದೈವತ್ವವನ್ನು ಕಾಣತೊಡಗುತ್ತಾನೆ. ಭಾವಲಿಂಗ ವೆಂದು ಇಲ್ಲಿನ ದೈವತ್ವವನ್ನು ಗುರುತಿಸಿ ಉಪಾಸನೆಗೈಯುವ ಆತ ಸಂಶಯರಹಿತನಾಗಿ, ನಿರ್ಭೀತನಾಗಿ ಆತ್ಮವಿಶ್ವಾಸಿಯಾಗಿ ಪ್ರಪಂಚದೊಳಗಿದ್ದೂ ನಿಸ್ಸಂಗಿಯಾಗಿ ಪರಿಣಮಿಸು ತ್ತಾನೆ. ಸಾಧಕ ಆನಂದ ಮತ್ತು ಸಮರಸ ಭಕ್ತಿಗಳಿಂದ ಆತ್ಯಂತಿಕ ತೃಪ್ತಿಯೊಂದಿದವನಾಗಿ, ಸಂಗಣ್ಣನು ಸೂಚಿಸುವಂತೆ ಇಲ್ಲಿ ತಾನು ಕಂಡ ದಿವ್ಯ ಅನುಭಾವದ ಬೆರಗನ್ನು ಬೆಳಕನ್ನು ಇತರರಿಗೂ ತೋರಿಸಿಕೊಡುವ ಮಾರ್ಗದರ್ಶಿಯಾಗುತ್ತಾನೆ. ಶರಣಸ್ಥಲದಲ್ಲಿ ಆತ ತನ್ನನ್ನು ಇಡೀ ಜಗತ್ತಿಗೆ ಸಮರ್ಪಿಸಿಕೊಳ್ಳುತ್ತಾನೆ. ಮಹದೇವಮ್ಮ ಸೂಚಿಸುವಂತಹ ಬಿಡುಗಡೆಗೆ ಸಾಕ್ಷಿಯಾಗುವ ರೀತಿಯಲ್ಲಿ ಎಲ್ಲರೊಳಗೊಬ್ಬನಂತೆ ದೇಹಧರಿಸಿದ್ದರೂ ದೇಹಾತೀತನಾದಂತೆ, ನಡೆದರೂ ನಿರ್ಗಮನಿಯಾದಂತೆ, ಆತ ವ್ಯಕ್ತಿಯಾದರೂ ಇಡೀ ಲೋಕಕ್ಕೆ ವ್ಯಾಪಿಸಿಕೊಳ್ಳುತ್ತಾನೆ. ಅಂತೆಯೇ 12ನೆಯ ಶತಮಾನದಲ್ಲಿ ಬಸವಣ್ಣನವರೂ ಸೇರಿದಂತೆ ಅವರೇ ಪ್ರತಿಪಾದಿಸಿದ ಷಟ್ಸ್ಥಲಮಾರ್ಗವನ್ನು ಕಾಯಾ ವಾಚಾ ಮನಸಾ ಅನುಸರಿಸಿದ ಲಕ್ಷಾಂತರ ಕಾಯಕಜೀವಿಗಳು ಇಂತಹ ಸ್ಥಿತಿ ತಲುಪಿ ಶರಣರಾದುದನ್ನು ತನ್ಮೂಲಕ ಊಹೆಗೂ ನಿಲುಕದ ಸುಂದರ ಸಮಾಜವೊಂದು ರೂಪಗೊಂಡಿದ್ದನ್ನು ವಚನಗಳ ಮೂಲಕ, ಅನೇಕ ಕವಿಗಳು ಇತಿಹಾಸಕಾರರ ಮೂಲಕ ಕೇಳಿ ಓದಿ ಅಚ್ಚರಿಗೊಳಗಾಗಿ ಅಂತಹ ಸಮಾಜವೊಂದನ್ನು ಈಗಲೂ ಸಾಕ್ಷಾತ್ಕಾರಗೊಳಿಸಿ ಕೊಳ್ಳಬೇಕೆಂಬ ಕನಸನ್ನು ಕಾಣುತ್ತಲೇ ಬಂದಿದ್ದೇವೆ.

### 6. ಐಕ್ಯಸ್ಥಲ

ಷಟ್ಸ್ಥಲದ ಮುಂಚಿನ ಐದು ಸ್ಥಲಗಳಲ್ಲಿದ್ದು ತನ್ನ ಕರ್ತವ್ಯಗಳನ್ನೆಲ್ಲ ನಿರ್ವಹಿಸಿ ಅನುಭಾವಿಯಾಗಿರುವ ಸಾಧಕ ಅಂತಿಮ ಹಂತವಾದ ಐಕ್ಯಸ್ಥಲದಲ್ಲಿ ಸಂಪೂರ್ಣ ಸಾಮರಸ್ಯದಲ್ಲಿ ಲೀನನಾಗುತ್ತಾನೆ. ಹೂವಾಗಿ ಕಾಯಾಗಿ ಹಣ್ಣಾಗುವ ಸಾಧಕ ಬಸವಣ್ಣನವರೇ ಹೇಳುವ 'ತೊಟ್ಟು ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ' ಎನ್ನುವ ಮಾತಿಗೆ ಶಿವನ ಹೃದಯಕ್ಕೆ ಅರ್ಪಿತವಾಗಿ ಅಲ್ಲಿ ಸಾಮರಸ್ಯವನ್ನು ಪಡೆದನೆಂಬ ವಿಶೇಷ ಅರ್ಥ ಕಲ್ಪಿಸುತ್ತ ಇದು ಐಕ್ಯಸ್ಥಾನದಲ್ಲಿರುವ ಸಾಧಕನಿಗೆ ಅನ್ವಯಿಸುತ್ತದೆ ಎಂದು ತಿಪ್ಪೇರುದ್ರಸ್ವಾಮಿಯವರು ಅಭಿಪ್ರಾಯಪಡುತ್ತಾರೆ.

ಐಕ್ಯಸ್ಥಲವೆಂಬುದೊಂದು ನಿವೃತ್ತಿಯ ಮಾರ್ಗ. ಮಹದೇವಮ್ಮ ಮತ್ತು ಸಂಗಣ್ಣರಿಬ್ಬರೂ ಹೇಳುವ ನಿರಾಳ ಸ್ಥಿತಿ. ತನು ಮನ ಪ್ರಾಣ ಭಾವಗಳು ನಿವೃತ್ತಿಯಾಗಿ ಲಿಂಗಸ್ವರೂಪವಾಗುತ್ತವೆ. 'ಹರಿಯುವ ನೀರಿಗೆ ಮೈಯೆಲ್ಲ ಕಾಲು, ಉರಿಯುವ ಬೆಂಕಿಗೆ ಮೈಯೆಲ್ಲ ನಾಲಿಗೆ, ಬೀಸುವ ಗಾಳಿಗೆ ಮೈಯೆಲ್ಲ ಕೈ, ಗುಹೇಶ್ವರಾ, ನಿನ್ನ ಶರಣರ ಸರ್ವಾಂಗ ಲಿಂಗ' ಎನ್ನುವ ಅಲ್ಲಮನ ವಚನ ಇಡೀ ಶರಣರ ಕಾಯವೆಲ್ಲ ಲಿಂಗಮಯವಾಗುವುದನ್ನು ತಿಳಿಸುತ್ತದೆ. ಹೀಗೆ ನಿವೃತ್ತಿಯಾದಂತೆಲ್ಲ ಗುರು ಲಿಂಗ ಜಂಗಮಗಳೂ ಬೇರಾಗದೆ ತನ್ನಲ್ಲೇ ಲೀನಗೊಂಡು ಅವುಗಳನ್ನೂ ತನ್ನನ್ನೂ ಭಿನ್ನವಾಗಿ ನೋಡದೆ ಏಕೋಭಾವಿಯಾಗುತ್ತಾನೆ. ಮಾತೆಂಬುದು ಜ್ಯೋತಿರ್ಲಿಂಗವೆಂದ ಬಸವಣ್ಣನವರೇ 'ಕೂಡಲಸಂಗಯ್ಯನೆಂಬ ಮಹಾಬೆಳಗಿನ ಬೆಳಗಿನೊಳಗಿದ್ದೇನೆಂಬ ಶಬ್ದ ಮುಗ್ಧವಾದುದೇನೆಂಬೆನಯ್ಯಾ' ಎನ್ನುವಲ್ಲಿ ಐಕ್ಯಸ್ಥಲದೊಳಗೆ ಮಾತೂ ಐಕ್ಯಗೊಂಡು ಮೌನವಾಗುವ ಬೆರಗನ್ನು ಅರುಹುತ್ತಾರೆ. ಐಕ್ಯಸ್ಥಲವೆಂದರೆ ಮಹಾಬೆಳಗಿನ ಬೆಳಗಿನೊಳಗಿರುವುದು, ಬಯಲಿನಲ್ಲಿ ಬಯಲಾಗುವುದು ಎಂದೆಲ್ಲ ಹೇಳುವಾಗ ಭಿನ್ನವೆಂದು ಗುರುತಿಸಿಕೊಳ್ಳುವ ಸಾಂತ ಅನಂತದೊಡನೆ ಸೇರಿದಾಗ ತನ್ನ ಭಿನ್ನತೆಯನ್ನೂ ಸಾಂತತೆಯನ್ನೂ ಕಳೆದುಕೊಂಡು ತಾನೂ ಅನಂತದ ಭಾಗವಾಗುವುದನ್ನು ಸೂಚಿಸುತ್ತವೆ. ಐಕ್ಯಸ್ಥಲದಲ್ಲಿ ಜೀವವೆಂಬ ನದಿ ದೈವವೆಂಬ ಕಡಲನ್ನು ಸೇರಿ ತಾನೂ ಕಡಲಿನ ಅವಿಚ್ಛಿನ್ನ ಭಾಗವಾಗುತ್ತದೆ.

ಷಟ್ಸ್ಥಲಗಳ ಬಗ್ಗೆ ಇಷ್ಟು ವಿವರಣೆಯನ್ನು ಸಂಗ್ರಹಿಸಿ ಬರೆದನಂತರ ಸಹಜವಾಗಿ ಮೂಡುವ ಒಂದು ಆಲೋಚನೆಯೆಂದರೆ ಧರ್ಮಾಚರಣೆಯ ಅಂದಿನ ಕ್ರಮಗಳು ಇಂದಿನ ಪ್ರಸ್ತುತ ಸಮಾಜಕ್ಕೆ ಸಿಂಧುವೇ ಅಗತ್ಯವೇ ಅನಿವಾರ್ಯವೇ? ಎಂದು. ಇವುಗಳ ಕಡೆಗೆ ಒಮ್ಮೆ ದೃಷ್ಟಿಹಾಯಿಸಿದರೆ ಅವು ನಿರೀಕ್ಷಿಸುವ ನಿರಾಳ ಸ್ಥಿತಿಯೆಲ್ಲಿ? ಇಂದಿನ ತಲ್ಲಣದ ಸ್ಥಿತಿಯೆಲ್ಲಿ? ಎಂದೆನ್ನಿಸುವುದು ಸಹಜ. ವಿಜ್ಞಾನ ತಂತ್ರಜ್ಞಾನಗಳ ದುರ್ಬಳಕೆಯ ದುಷ್ಫಲಗಳು ವ್ಯಷ್ಟಿ ಮತ್ತು ಸಮಷ್ಟಿಯ ಬದುಕನ್ನೇ ಯಾಂತ್ರಿಕಗೊಳಿಸುತ್ತ ಲೌಕಿಕತೆಯೇ ಆತ್ಯಂತಿಕ ಗುರಿಯೆಂದು ಭಾವಿಸಿ ಧಾವಿಸುತ್ತಿರುವ ಈ ದಿನಮಾನಗಳಲ್ಲಿ ಆತಂಕ ಭಯ ಅನಿಶ್ಚಿತತೆ ಇವುಗಳಿಂದಲೇ ತುಂಬಿರುವ ಬದುಕು ಅಸಹನೀಯವೆನಿಸುವಂತಾಗಿದೆ. ತೃಪ್ತಿ, ನೆಮ್ಮದಿ ಮತ್ತು ಶಾಂತಿಗಳಿಗಾಗಿ ಹಪಹಪಿಸುತ್ತಲೇ ಕಾಲದೊಂದಿಗೆ ಚಂಚಲಚಿತ್ತರಾಗಿ ನಾಗಾಲೋಟ ಹಾಕುತ್ತ ಕಾಯಾ ವಾಚಾ ಮನಸಾ ನಾವೂ ಕಲುಷಿತಗೊಂಡಿದ್ದೇವೆ. ನಮ್ಮ ಸುತ್ತಲಿನ ಎಲ್ಲವನ್ನೂ ಕಲುಷಿತಗೊಳಿಸಿದ್ದೇವೆ. ಪ್ರಾಪಂಚಿಕ ಆಮಿಷಗಳು ಒಡ್ಡುವ ಪ್ರಲೋಭನೆಗಳಿಗೆ ಗುರಿಯಾಗಿ ನಮ್ಮ ಬದುಕನ್ನೇ ಅತಂತ್ರಗೊಳಿಸಿಕೊಂಡಿದ್ದೇವೆ. 21ನೆಯ ಶತಮಾನ 12ನೆಯ ಶತಮಾನಕ್ಕೆ ಕೇವಲ ಅಂಕೆಗಳಲ್ಲಿ ತಿರುವುಮುರುವಾಗಿಲ್ಲ, ಇಡೀ ವ್ಯವಸ್ಥೆಯೇ ಪಲ್ಲಟಗೊಂಡಿದೆ. ಆ ಶರಣಯುಗದ ಮುಂಚೆ ಕೂಡ ಇಂತದೇ ವಿಷಮಪರಿಸ್ಥಿತಿಯಿತ್ತು. ಬಸವಣ್ಣ ಬಂದ, ತನ್ನ ಕಾಲದ ಅವಾಂತರಗಳನ್ನೆಲ್ಲ ಸರಿಪಡಿಸಲು ನಡೆ ನುಡಿ ಒಂದಾದ ಸನ್ಮಾರ್ಗಕ್ಕೆ ಮುನ್ನುಡಿ

ಬರೆದ. ಸಕಲ ಜೀವಾತ್ಮರಲ್ಲಿ ಲೇಸ ಬಯಸುವ, ಎಲ್ಲರನ್ನೂ ತನ್ನವರೆಂದು ಭಾವಿಸುವ, ದಯಾಪೂರಿತ ಧರ್ಮವೊಂದಕ್ಕೆ ಅಡಿಗಲ್ಲಾಗಿ ಶರಣಸಂಕುಲವನ್ನು ಬೆಳೆಸಿ ಹಿಂದೆ ಮುಂದೆ ಎಂದೂ ಕಾಣಸಿಗದಂತಹ ಒಂದು ನವಸಮಾಜವನ್ನು ಕಟ್ಟಿ ಬೆಳೆಸಿ ಯುಗಪ್ರವರ್ತಕನಾದ. ಷಟ್ಸ್ಥಲ, ಪಂಚಾಚಾರ, ಅಷ್ಟಾವರಣಗಳೆಂಬ ನೈತಿಕ ಆಚರಣೆಗಳುಳ್ಳ ಧರ್ಮವೊಂದು ಜನಮಾನಸದೊಳಗೆ ಬೇರೂರುವಂತೆ ಮಾಡಿದ. ಕಾಯಕ ದಾಸೋಹ ತತ್ವಗಳನ್ನು ಮುಂದಿಟ್ಟುಕೊಂಡು ಅಂತರಂಗ ಬಹಿರಂಗದಲ್ಲಿ ಶುದ್ಧತೆಯನ್ನೂ, ಪರಸ್ಪರರಲ್ಲಿ ಸಮಾನತೆ, ಸಹಕಾರವನ್ನುಂಟುಮಾಡುವಂತಹ ಆಚರಣೆಯನ್ನು ತಾನೇ ತನ್ನ ಕೈಂಕರ್ಯವೆಂದು ಭಾವಿಸಿ ಆಚರಿಸಿ ತೋರಿಸಿದ. ಇಂತಹ ವಿಶಿಷ್ಟ ಧರ್ಮವೊಂದನ್ನು ಅನುಸರಿಸಲು ಧನಕನಕಾದಿ ಸಂಪತ್ತು ಸೌಕರ್ಯಗಳು ಬೇಕಿಲ್ಲ, ನಾವಿರುವ ಭೌತಿಕ ಸ್ಥಿತಿಯಲ್ಲಿಯೇ ನಮ್ಮೊಳಗಿರುವ ಆತಂಕ ಅಭದ್ರತೆ ಅನಿಶ್ಚಿತತೆಗಳನ್ನು ದೂರಮಾಡಿಕೊಂಡು ನಿರಾತಂಕದ ಶುದ್ಧ ಬದುಕನ್ನು ಬಯಸುವುದಾದರೆ ಷಟ್ಸ್ಥಲಗಳೇ ಮುಂತಾದ ಜೀವನಕ್ರಮಗಳಿಂದ ಸಾಧ್ಯ ಎನ್ನುವುದು ಇಂದಿಗೂ ಅವುಗಳ ಅನಿವಾರ್ಯತೆ ಅವಶ್ಯಕತೆ ಮತ್ತು ಮಹತ್ವಗಳನ್ನು ಸಾರುತ್ತದೆ.

ಷಟ್ಸ್ಥಲಗಳ ಮುಖ್ಯ ಲಕ್ಷಣಗಳನ್ನು, ಈ ಮಾರ್ಗದಲ್ಲಿ ಸಾಗುವಲ್ಲಿ ಅನುಸರಿಸಬೇಕಾದ ಪ್ರಮುಖ ನಿಯಮಗಳನ್ನು ಸ್ಥೂಲವಾಗಿ ಪ್ರಸ್ತಾಪಿಸಲಾಗಿದೆ. ಇದು ತಿಪ್ಪೇರುದ್ರಸ್ವಾಮಿಗಳ 'ವಚನಗಳಲ್ಲಿ ವೀರಶೈವ ಧರ್ಮ' ಎಂಬ ಕೃತಿಯಲ್ಲಿ ಅವರು ವಿಸ್ತೃತವಾಗಿ ಬರೆದಿರುವ ಷಟ್ಸ್ಥಲಮಾರ್ಗದ ಕಿರು ತಾತ್ಪರ್ಯ. ಮೂಲ ಮುಖ್ಯ ಅಂಶಗಳನ್ನು ಕ್ರೋಢೀಕರಿಸಿ ಸಂಗ್ರಹಿಸಿದ್ದರೂ, ಕೆಲವನ್ನು ಬಿಟ್ಟಿರುವ ಸಾಧ್ಯತೆಯೂ ಮತ್ತು ನನ್ನದೇ ಗ್ರಹಿಕೆಯೂ ಅರ್ಥವೂ ಅಲ್ಲಲ್ಲಿ ಸೇರಿವೆ. ಷಟ್ಸ್ಥಲಗಳ ಬಗ್ಗೆ ತಿಳಿದು ನನ್ನ ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂಬ ಬಯಕೆ ಮತ್ತು ಇಂತಹದೇ ಬಯಕೆಯುಳ್ಳವರಿಗೂ ಅನುಕೂಲವಾಗುವಂತೆ ತಿಳಿಸುವ ಇಚ್ಛೆಯಿಂದ ತಿಪ್ಪೇರುದ್ರಸ್ವಾಮಿಗಳನ್ನು ನೆನೆದುಕೊಳ್ಳುವಲ್ಲಿ ದೊರಕಿದ ಈ ಅವಕಾಶವನ್ನು ಬಳಸಿಕೊಂಡಿದ್ದೇನೆ. ಕನ್ನಡ ಭಾಷೆ ಮಾತೃಭಾಷೆಯಾದ್ದರಿಂದ ಕಲಿತಿದ್ದೇನೆ, ತಿಳಿದಿದ್ದೇನೆ, ಬರೆಯಬಲ್ಲೆ ಎನ್ನುವ ಹೆಮ್ಮೆಯ ಯಾವುದೋ ಮೂಲೆಯಲ್ಲಿ ನನ್ನಲ್ಲಿನ ಅಹಂಕಾರವೂ ನನ್ನ ಈ ಬರವಣಿಗೆಯಲ್ಲಿ ನುಸುಳಿದೆ ಎನ್ನುವ ಅಳುಕೂ ಕೂಡ ಕಾಡುತ್ತಿದೆ. ಪ್ರಾಜ್ಞರಾದ ಓದುಗರು ಅಪ್ರಸ್ತುತವೆನಿಸಬಹುದಾದ ನನ್ನ ಒಕ್ಕಣಿಕೆಗಳನ್ನು ಬದಿಸರಿಸಿ ತಿಪ್ಪೇರುದ್ರಸ್ವಾಮಿಯವರ ಚಿಂತನೆಗಳನ್ನು ಗಮನಿಸಬೇಕೆಂದು ವಿಸ್ತೃತ ಅರ್ಥಕ್ಕಾಗಿ ಅವರ ಸಂಶೋಧನಾ ಗ್ರಂಥವನ್ನು ಓದಬೇಕೆಂದು ನನ್ನ ವಿನಮ್ರ ವಿನಂತಿ. ಲೇಖನದಲ್ಲಿ ಗುರುತಿಸಬಹುದಾದ ಒಳಿತೆಲ್ಲವುಗಳ ಶ್ರೇಯಸ್ಸು ತಿಪ್ಪೇರುದ್ರಸ್ವಾಮಿ ಯವರಿಗೆ ಸಲ್ಲುತ್ತವೆ. ಉಳಿದಂತೆ ಇಲ್ಲಿನ ದೋಷಗಳಿಗೆ ನಾನೇ ಕಾರಣನೆಂದೂ ಕೂಡ ತಿಳಿಸಬಯಸುತ್ತೇನೆ. □

# ಅಕ್ಕಮಹಾದೇವಿಯ ಒಂದು ವಚನದ ಸಂದರ್ಭದಲ್ಲಿ

**ಬಾಲಚಂದ್ರ ಜಯಶೆಟ್ಟಿ**

**ಕ**ಲಬುರಗಿಯ ಬಸವ ಸಮಿತಿಯವರು ಇತ್ತೀಚೆಗೆ ಶ್ರಾವಣಮಾಸದಲ್ಲಿ ಅಕ್ಕ ಮಹಾದೇವಿಯ ಒಂದು ವಚನದ ಕುರಿತು ಮಾತಾಡಲು ಆಹ್ವಾನಿಸಿದ್ದರು. ವಚನದ ಮೊದಲನೆಯ ಸಾಲನ್ನಷ್ಟೇ ಕೊಟ್ಟು "ನೀವು ಈ ವಚನದ ಕುರಿತು ಮಾತಾಡಬೇಕು" ಎಂದು ಸೂಚಿಸಿದ್ದರು. ಆ ಸಾಲು ಈ ರೀತಿಯಾಗಿದೆ – 'ಅರಿವು ಸಾಧ್ಯವಾಯಿತೆಂದು ಗುರು ಲಿಂಗ ಜಂಗಮವ ಬಿಡಬಹುದೆ?' ಈ ಸಾಲು ಓದಿ ನನಗೆ ಒಂದಿಷ್ಟು ಖುಷಿಯಾಯಿತು. ಯಾಕೆಂದರೆ ಅನೇಕ ಜನ ಮಿತ್ರರು ನನಗೆ ಇದೇ ಪ್ರಶ್ನೆಯನ್ನು ಕೇಳುತ್ತಿರುತ್ತಾರೆ. ಒಮ್ಮೆ ಶಿವಯೋಗ ಸಿದ್ಧಿಸಿತ್ತೆಂದ ಮೇಲೆ ಇಷ್ಟಲಿಂಗ ಧರಿಸುವ ಅವಶ್ಯಕತೆಯಾದರೂ ಏನು? ಅದರ ಪೂಜೆ ಯಾಕೆ? ಅಷ್ಟಾವರಣದ ಎಲ್ಲೆಯನ್ನು ಮೀರಿದ ಸ್ಥಿತಿಗೆ ತಲುಪಿರುವುದರಿಂದ ಅಷ್ಟಾವರಣ ಮುಂತಾದವುಗಳು ಯಾಕೆ ಬೇಕು? ಎಂದು ಕೇಳುತ್ತಾರೆ. ನನ್ನ ಇತಿಮಿತಿಗೆ ತಕ್ಕಂತೆ ಅವರ ಜಿಜ್ಞಾಸೆಗೆ ಉತ್ತರ ಕೊಡುತ್ತ ಬಂದಿದ್ದೇನೆ. ಆದರೆ ಈಗ ಒಂದು ಸಭೆಯನ್ನು ಉದ್ದೇಶಿಸಿ ಮಾತನಾಡ ಬೇಕಾದರೆ ಈ ಕುರಿತು ಗಂಭೀರವಾಗಿ ಚಿಂತನೆ ಮಾಡುವುದು ಅವಶ್ಯಕ ಎಂದೆನಿಸಿತು. ಅಕ್ಕಮಹಾದೇವಿಯ ಆ ವಚನದ ಪೂರ್ಣ ಪಾಠ ಈ ಕೆಳಗಿನಂತಿದೆ :

ಅರಿವು ಸಾಧ್ಯವಾಯಿತ್ತೆಂದು
ಗುರುಲಿಂಗಜಂಗಮವ ಬಿಡಬಹುದೆ?
ಸಂದು ಸಂಶಯವಳಿದು ಅಖಂಡ ಜ್ಞಾನವಾಯಿತ್ತೆಂದು
ಪರಧನ ಪರಸ್ತ್ರೀಯರುಗಳಿಗೆ ಅಳುಪಬಹುದೆ?
'ಯತ್ರಜೀವಃ ತತ್ರಶಿವಃ'
ಎಂಬ ಅಭಿನ್ನ ಜ್ಞಾನವಾಯಿತ್ತೆಂದು
ಶುನಕ ಸೂಕರ ಕುಕ್ಕುಟ ಮಾರ್ಜಾಲಂಗಳ ಕೂಡೆ ಭುಂಜಿಸಬಹುದೆ?
ಭಾವದಲ್ಲಿ ತನ್ನ ನಿಜದನೆಲೆಯನ್ನರಿತಿಹುದು,
ಸುಜ್ಞಾನ, ಸತ್ಕ್ರಿಯಾ, ಸುನೀತಿ ಮಾರ್ಗದಲ್ಲಿ ವರ್ತಿಸುವುದು
ಹೀಂಗಲ್ಲದೆ ಜ್ಞಾನವಾಯಿತ್ತೆಂದು ತನ್ನ ಮನಕ್ಕೆ ಬಂದ ಹಾಂಗೆ
ಮೀರಿ ನುಡಿದು ನಡೆದೆನಾದಡೆ
ಶ್ವಾನಗರ್ಭದಲ್ಲಿ ಹುಟ್ಟಿಸದೆ ಬಿಡುವನೆ
ಚೆನ್ನಮಲ್ಲಿಕಾರ್ಜುನಯ್ಯನು? (ಸ.ವ.ಸಂ. 5–37)

ಈ ವಚನದ ಸಾರಾಂಶ ಇಷ್ಟು – ತನ್ನ ಅರಿವು ತನಗೆ ಉಂಟಾದ ಮೇಲೆಯೂ ಗುರು ಲಿಂಗ ಜಂಗಮಗಳನ್ನುಕಡೆಗಣಿಸುವಹಾಗಿಲ್ಲ. ಸಂದು ಸಂಶಯಕ್ಕೆಎಡೆಯಿಲ್ಲದಂತಹ ಪೂರ್ಣ ಜ್ಞಾನ ಪ್ರಾಪ್ತವಾದ ಮೇಲೆ ಪರಧನ ಮತ್ತು ಪರಸ್ತ್ರೀಯರುಗಳನ್ನು ಬಯಸಬಾರದು. ಜೀವನಿರುವಲ್ಲಿಯೇ ಶಿವನೂ ಇದ್ದಾನೆ ಎಂಬ ಅದ್ವೈತದ ಜ್ಞಾನ ಉಂಟಾದ ಮೇಲೆಯೂ ನಾಯಿ, ಹಂದಿ, ಕೋಳಿ, ಬೆಕ್ಕುಗಳಂಥ ಸ್ವಭಾವದ ಇಂದ್ರೀಯ ವಿಕಾರಗಳನ್ನು ಭೋಗಿಸಬಾರದು. ತನ್ನನ್ನು ತಾನು ಅರಿತುಕೊಂಡು ಸನ್ಮಾರ್ಗದಲ್ಲಿ ನಡೆಯಬೇಕು. ಹಾಗೆ ನಡೆಯದೆ ಮನಸ್ಸಿಗೆ ಬಂದಹಾಗೆ ವರ್ತಿಸಿದರೆ ಮುಂದೆ ನಾಯಿಯ ಜನ್ಮದಲ್ಲಿ ಹುಟ್ಟುವರು ಎಂದು ಅಕ್ಕ ಹೇಳುತ್ತಾಳೆ.

ತನ್ನ ತಾನರಿದು ಶರಣನಾದ ಮೇಲೆ ತನ್ನ ಹಿಂದಿನ ಭವಿತನದ ಸಂಬಂಧಗಳನ್ನು ಹರಿದುಕೊಳ್ಳಬೇಕೆಂದು ಎಲ್ಲಾ ಶರಣರು ಹೇಳುತ್ತಾರೆ. ಇಲ್ಲಿ ಅಕ್ಕನು 'ಶುನಕ, ಸೂಕರ, ಕುಕ್ಕುಟ, ಮಾರ್ಜಾಲ' ಎಂಬ ಪದಗಳನ್ನು ಬಳಸಿದ್ದಾಳೆ. ಮಾಯಾಮಲವನ್ನು ಬಯಸುವುದು ನಾಯಿ, ಅದನ್ನು ಹೆಕ್ಕುವುದು ಕುಕ್ಕುಟ, ಭವಾರಣ್ಯದಲ್ಲಿಯೇ ಬದುಕುವುದು ಸೂಕರ ಮತ್ತು ಮಾರ್ಜಾಲಗಳು, ಅಂದರೆ ಇವೆಲ್ಲ ಪ್ರಾಪಂಚಿಕವಾದ ಮಾಯಾಶಕ್ತಿಗಳು. ಅರಿವು ಮೂಡಿದಾಗ ಈ ಎಲ್ಲವುಗಳ ಆಮಿಷದ ಬಲೆಯಿಂದ ದೂರನಾಗಿರಬೇಕು, ಮುಕ್ತನಾಗಿರಬೇಕು. ಇದೇ ಮಾತನ್ನು ಸತ್ಯಕ್ಕನು ಹೇಳುತ್ತಾಳೆ:

ಅಯ್ಯಾ, ಮಹಾಲಿಂಗೈಕ್ಯಾನುಭಾವಿಯೆಂದು
ಪೂರ್ವಾರ್ಜಿತವನುಂಡಡೆ ಭಂಗ;
ಹರಶರಣೆಂದು ಭವಮಾಲೆಗೆ ಒಳಗಾದಡೆ ಭಂಗ;
ಹರವಶವೆನಿಸಿ ವಿಧಿವಶವೆನಿಸಿದಡೆ ಅದು ನಿಮಗೆ ಭಂಗ
ಕಾಣಾ ಶಂಭುಜಕ್ಕೇಶ್ವರಾ ॥ (ಸ.ವ.ಸಂ. 5–962)

ಇದು ಅಕ್ಕನ ವಚನಕ್ಕೆ ಬಿಂಬ–ಪ್ರತಿಬಿಂಬದಂತಿದೆ. ಇತರ ಶರಣರ ವಚನಗಳಲ್ಲಿಯೂ ಇದೇ ಅರ್ಥದ ಅನೇಕ ನುಡಿಗಳು ನಮಗೆ ಸಿಗುತ್ತವೆ. ಆದರೆ ನನ್ನ ವಿಶ್ಲೇಷಣೆಗೆ ಪ್ರಮುಖವಾದುದು ಅಕ್ಕನ ವಚನದ ಮೊದಲನೆಯ ಸಾಲು. 'ಅರಿವು ಸಾಧ್ಯವಾದ ಮೇಲೆ ಗುರು ಲಿಂಗ ಜಂಗಮವ ಬಿಡಕೂಡದು' ಎಂದು ಅಕ್ಕ ಹೇಳುವುದು ಸರಿಯಾಗಿಯೇ ಇದೆ. 'ಗುರು ಲಿಂಗ ಜಂಗಮಗಳು ಭಿನ್ನವಲ್ಲ, ಪರಸ್ಪರ ಪೂರಕವಾಗಿವೆ. ಇವು ಸಾಧನೆಯ ಮೂರು ಅವಸ್ಥಾಂತರಗಳಾಗಿವೆ. ಗುರು ಎಂದರೆ 'ಸಕಲ' (ಸಾಕಾರ) ಸ್ವರೂಪದ್ದು, ಲಿಂಗವೆಂದರೆ 'ಸಕಲ+ನಿಃಕಲ' (ಸಾಕಾರ+ನಿರಾಕಾರ) ಸ್ವರೂಪದ್ದು ಮತ್ತು ಜಂಗಮವೆಂಬುದು 'ನಿಃಕಲ' (ನಿರಾಕಾರ) ರೂಪವುಳ್ಳದ್ದು ಎಂದು ಅರ್ಥ. ಇವು ಮೂರೂ ಇಷ್ಟಲಿಂಗ ಸಾಧನೆಯಲ್ಲಿ ಹಂತಹಂತವಾಗಿ ಅನುಭವಕ್ಕೆ ಬರುವ ತತ್ತ್ವಗಳಾಗಿವೆ. ಸಿದ್ಧಾವಸ್ಥೆಗೆ ಏರಲು ಇವು ಮೂರೂ ಪೂರಕವಾಗಿವೆ. ಅದಕ್ಕೆಂದೇ

ನೀವು ಸಾಧನೆಯ ಕೊನೆಯ ಹಂತವನ್ನು ತಲುಪಿದರೂ ಈ ಮೂರೂ ಹಂತಗಳನ್ನು ಕೈಬಿಡುವ ಹಾಗಿಲ್ಲ. ಆನುಷಂಗಿಕವಾಗಿ ಅಷ್ಟಾವರಣದ ಉಳಿದ ತತ್ತ್ವಗಳಾದ ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರ ಎಂಬ ಐದೂ ಆವರಣಗಳೂ ಇದರಲ್ಲಿ ಸೇರಿಕೊಳ್ಳುತ್ತವೆ.

ಮುಂದಿನ ನಾಲ್ಕು ಸಾಲುಗಳನ್ನು ವಾಚ್ಯಾರ್ಥದಲ್ಲಿ ಗ್ರಹಿಸಿದಾಗ ನನಗೆ ತುಂಬ ಗೊಂದಲವಾಯಿತು. 'ಸಂದು ಸಂಶಯವಳಿದು ಅಖಂಡ ಜ್ಞಾನವಾಯಿತ್ತೆಂದು ಪರಧನ ಪರಸ್ತ್ರೀಯರುಗಳಿಗೆ ಅಳುಪಬಹುದೆ?' ಎಂಬುದು ಒಂದು ವಿಚಾರ. ಇನ್ನೊಂದು ವಿಚಾರ, 'ಯತ್ರಜೀವಃತತ್ರಶಿವಃ ಎಂಬ ಅಭಿನ್ನ ಜ್ಞಾನವಾಯಿತ್ತೆಂದು ಶುನಕ, ಸೂಕರ, ಕುಕ್ಕುಟ ಮಾರ್ಜಾಲಂಗಳ ಕೂಡೆ ಭುಂಜಿಸಬಹುದೆ?' ಎಂಬುದಾಗಿದೆ. ಜೀವ–ಶಿವ ಒಂದೇ ಎಂಬ ಅಖಂಡ ಜ್ಞಾನ ಪ್ರಾಪ್ತವಾದ ಮೇಲೆ ಲೌಕಿಕ ಪದಾರ್ಥಗಳ ಅನುಬಂಧ ತಾನೇತಾನಾಗಿ ಕಳಚಿಹೋಗುತ್ತದೆ. ಜ್ಞಾನದ ತುಟ್ಟತುದಿಯನ್ನು ಮುಟ್ಟಿದವನು ಪ್ರಾಪಂಚಿಕದ ಪಾರ್ಥಿವ ಹಂತವನ್ನು ದಾಟಿ ಹೋಗಿರುತ್ತಾನೆ. ಆತನಿಗೆ ಯಾವುದೇ ವ್ಯಾಮೋಹ ಇರಲು ಸಾಧ್ಯವಿಲ್ಲ. ಹೀಗಿರುವಾಗ ಪರಧನ ಮತ್ತು ಪರಸ್ತ್ರೀಯರ ಕಡೆಗೆ ಮನಸ್ಸು ಹರಿಯಲು ಹೇಗೆ ಸಾಧ್ಯ? ಅಂಥ ವ್ಯಕ್ತಿ ನಾಯಿ, ಹಂದಿ. ಕುಕ್ಕುಟ, ಮಾರ್ಜಾಲದಂಥ ಸ್ವಭಾವವುಳ್ಳ ವ್ಯಕ್ತಿಗಳ ಜೊತೆಗೆ ಬೆರೆಯಲು ಹೇಗೆ ಸಾಧ್ಯ? ಎಂಬ ಪ್ರಶ್ನೆಗಳು ಎದುರಾಗುತ್ತವೆ. ಆದರೂ ಅಕ್ಕಮಹಾದೇವಿ ಹೀಗೇಕೆ ಎಚ್ಚರಿಕೆಯನ್ನು ಕೊಡುತ್ತಾಳೆ ಎಂಬ ಅನುಮಾನ ಮೂಡುತ್ತದೆ.

ಇಲ್ಲಿ ಬಸವಣ್ಣನವರ ಒಂದು ವಚನ ನೆನಪಾಗುತ್ತದೆ. ಅವರು ಹೇಳುತ್ತಾರೆ:

> ಆಚಾರಲಿಂಗವಿಡಿದು ಅನುಭಾವಲಿಂಗ ಸಿದ್ಧಿ,
> ಅನುಭಾವಲಿಂಗವಿಡಿದು ಮಾರ್ಗಕ್ರಿಯಾಲಿಂಗ ಸಿದ್ಧಿ,
> ಮಾರ್ಗಕ್ರಿಯಾಲಿಂಗವಿಡಿದು ಮೀರಿದ ಕ್ರಿಯಾಲಿಂಗ ಸಿದ್ಧಿ,
> ಮೀರಿದ ಕ್ರಿಯಾಲಿಂಗವಿಡಿದು ಕ್ರಿಯಾನಿಷ್ಪತ್ತಿಲಿಂಗ ಸಿದ್ಧಿ.
> ಇದು ಕಾರಣ ಕೂಡಲಸಂಗಮದೇವಾಲಿಂಗವಿಡಿದು ಲಿಂಗಸಿದ್ಧಿ ॥
>
> (ಸವಸಂ 1–828)

ಇಲ್ಲಿ ಲಿಂಗವಿಡಿದು ಹಂತಹಂತವಾಗಿ ಹೇಗೆ ಲಿಂಗಸಿದ್ಧಿಯಾಗುತ್ತದೆ ಎಂಬುದನ್ನು ಅಣ್ಣನವರು ವಿವರಿಸಿದ್ದಾರೆ. ಲಿಂಗಾನುಸಂಧಾನದಲ್ಲಿ ಕೊನೆಯ ಸಿದ್ಧಾವಸ್ಥೆ, ಅಂದರೆ ಲಿಂಗಸಿದ್ಧಿಯಾಗಬೇಕಾದರೆ ಅಥವಾ ಅಕ್ಕನ ಮಾತಿನಲ್ಲಿ ಅರಿವನ್ನು ಸಾಧಿಸಬೇಕಾದರೆ, ಅಖಂಡ ಜ್ಞಾನದ ಮೆಟ್ಟಿಲು ಏರಬೇಕಾದರೆ ಲಿಂಗವಿಡಿದಾಗಲೇ ಲಿಂಗಸಿದ್ಧಿಯಾಗುತ್ತದೆ ಎಂದು ಅಣ್ಣನವರು ಹೇಳುತ್ತಾರೆ. ಈ ಸಿದ್ಧಿಗೆ ಆಚಾರಲಿಂಗವೇ ಮೂಲ. ಅದನ್ನು ಹಿಡಿದುಕೊಂಡೇ ಅನುಭಾವಲಿಂಗವನ್ನು ಕಾಣಬೇಕು. ಮಾರ್ಗಕ್ರಿಯೆ ಹಾಗೂ ಆ

ಮಾರ್ಗಕ್ಕೂ ಮೀರಿದ ಕ್ರಿಯೆ ಕಂಡಾಗಲೇ ಕ್ರಿಯಾನಿಷ್ಪತ್ತಿಯಾಗಲು ಸಾಧ್ಯ.

ಈ ಕ್ರಿಯಾನಿಷ್ಪತ್ತಿಯ ಸ್ಥಿತಿ ಅಥವಾ ಅಖಂಡ ಹಾಗೂ ಅಭಿನ್ನವಾದ ಜ್ಞಾನದ ಸ್ಥಿತಿ ಅಂದರೆ ಲಿಂಗಾಂಗಸಾಮರಸ್ಯದ ಸ್ಥಿತಿಯು. ಇದು ಬೇರೆ ದರ್ಶನಶಾಸ್ತ್ರಗಳು ಹೇಳುವಂತೆ ಸತ್ತ ಮೇಲೆ ಜೀವನಿಗೆ ಒದಗುವ ಸ್ಥಿತಿಯಲ್ಲ. ಬದುಕಿರುವಾಗಲೇ ಬದುಕಿನಲ್ಲಿ ಪಾರ್ಥಿವ ಮಟ್ಟದಿಂದ ಏರಿ, ಸಿದ್ಧಾವಸ್ಥೆಯಲ್ಲಿ ಲಿಂಗಾಂಗಸಾಮರಸ್ಯದ ಸ್ವಾದವನ್ನು ಸವಿದು ಮತ್ತೆ ಪಾರ್ಥಿವ ಪ್ರಪಂಚಕ್ಕೆ ಮರಳುವುದು. ಶರಣರ ಈ ಸಾಧನಾ ಮಾರ್ಗವನ್ನು ಅರ್ಥ ಮಾಡಿಕೊಂಡರೆ ಅಕ್ಕ ಹೇಳಿದ ಮಾತುಗಳು ನಮಗೆ ಪ್ರಶ್ನೆಯಾಗಿ ಕಾಡುವುದಿಲ್ಲ.

ಪ್ರಾಕೃತ ಜೀವಿಯು ಭವಿಯಾಗಿರುತ್ತಾನೆ. ಭವಿತನವೇ ಭಕ್ತಿಯ ಕಡೆಗೆ ದಾರಿ ತೋರುತ್ತದೆ. ಆ ದಾರಿಯಲ್ಲಿ ಹೋದವರು ಭಕ್ತರೆನಿಸುತ್ತಾರೆ. ಶರಣರು ಭವಿತನವನ್ನು ಒಪ್ಪುತ್ತಾರೆ. ಅದನ್ನು ಅಲ್ಲಗಳೆದು ಹೀಯಾಳಿಸುವುದಿಲ್ಲ ಎಂಬ ಮಾತನ್ನು ನಾವು ಗಮನದಲ್ಲಿಡಬೇಕು. ಭವಿತನವನ್ನು ಕಳೆದು ಭಕ್ತನಾದಾಗ ಆತನಲ್ಲಿ ಪ್ರಸಾದಗುಣ ಅಳವಡುತ್ತದೆ. ಪ್ರಸಾದಗುಣವೆಂದರೆ ತೃಪ್ತಿ. ಅಲೌಕಿಕವಾದ ತೃಪ್ತಿ. ಈ ತೃಪ್ತಿಯು ಶರಣರ ಪ್ರಕಾರ ಏಕಾಂತಿಕವಲ್ಲ. ಸಾರ್ವತ್ರಿಕ ತೃಪ್ತಿಯಾಗಬೇಕು. ಯಾಕೆಂದರೆ ಮನುಷ್ಯನು ಸಮಾಜಜೀವಿಯಾದ್ದರಿಂದ ಸಾಮಾಜಿಕ ಬದುಕಿನಲ್ಲಿಯೇ ತೃಪ್ತಿಯನ್ನು ಪಡೆಯಬೇಕು. ಶರಣರ ಭಾಷೆಯಲ್ಲಿ ಸಮಾಜವೇ ಜಂಗಮ – ಜಂಗಮವೇ ಸಮಾಜ. ಮುಂದುವರಿದು ಭವಿ–ಭಕ್ತ (ಗಣ) – ಪ್ರಸಾದ – ಜಂಗಮ – ಲಿಂಗ – ಆಚಾರ – ಗುರು ಆ ಮೇಲೆ ಕೊನೆಯದಾಗಿ ಅರಿವು ಅಳವಡುತ್ತದೆ. ಚೆನ್ನಬಸವಣ್ಣನವರ ಒಂದು ವಚನದ ಉತ್ತರಾರ್ಧ ಈ ರೀತಿಯಾಗಿದೆ:

> .... .... ..... .... .... .... .... .....
> ಅರಿವು ಸಾಹಿತ್ಯ ಗುರು, ಗುರು ಸಾಹಿತ್ಯ ಆಚಾರ
> ಆಚಾರ ಸಾಹಿತ್ಯ ಲಿಂಗ, ಲಿಂಗ ಸಾಹಿತ್ಯ ಜಂಗಮ
> ಜಂಗಮ ಸಾಹಿತ್ಯ ಪ್ರಸಾದ, ಪ್ರಸಾದ ಸಾಹಿತ್ಯ ಗಣತ್ವ
> ಇದು ಕಾರಣ, ಕೂಡಲಚೆನ್ನಸಂಗನಲ್ಲಿ
> ಈ ಸ್ಥಲವಾದವರಿಗೆಲ್ಲ ಭಕ್ತಿ ಉನ್ಮದ ಉಂಟು
> [ಸರಳ] ನಿರ್ವಾಣ ಲಿಂಗೈಕ್ಯ ಪದವಪೂರ್ವ ॥ (ಸವಸಂ. 3–783)
> (ಸಾಹಿತ್ಯ = ಸಾಹಚರ್ಯ, ಸಂಬಂಧ)

ಇಲ್ಲಿ ಗಮನಿಸಬೇಕಾದ ಒಂದು ಪ್ರಮುಖವಾದ ಅಂಶವಿದೆ. ಷಟ್‌ಸ್ಥಲ ಸಿದ್ಧಾಂತದ ಮೇಲೆಯೇ ಶರಣ ದರ್ಶನ ನಿಂತಿದೆ. ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಇವು ಷಸ್ಥಲಗಳು. ಲಿಂಗಾಯತ ಧರ್ಮದ ಪ್ರಕಾರ ಇವು

ಹಂತ ಹಂತವಾಗಿ ಸಮರಸ ಸ್ಥಿತಿಯ ಚರಮ ಬಿಂದುವನ್ನು ತಲುಪಿಸುವ ಮೆಟ್ಟಿಲುಗಳಾಗಿವೆ. ಬಸವಣ್ಣನವರ ಒಂದು ವಚನ ಈ ರೀತಿಯಾಗಿದೆ :

> ಭಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ,
> ಯುಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ,
> ಸಾರಿ ಶರಣನೆನಿಸುವೆನಯ್ಯಾ ಮೆಲ್ಲಮೆಲ್ಲನೆ,
> ಎಡಹು ಗುಳಿಗಳ ದಾಂಟಿ ಬರಬರಲಿಂಗೈಕ್ಯನೆನಿಸುವೆನಯ್ಯಾ
> ಕೂಡಲಸಂಗಮದೇವಾ, ನಿಮ್ಮಿಂದಧಿಕನೆನಿಸುವೆನಯ್ಯಾ॥ (ಸವಸಂ. 1–893)

ಭಕ್ತ, ಯುಕ್ತ, ಶರಣನೆನಿಸಿ ಎಡಹು ಗುಳಿಗಳನ್ನು ದಾಂಟಿ ಬರಬರುತ್ತ ಲಿಂಗೈಕ್ಯನೆನಿಸುವೆನು ಎಂದು ಬಸವಣ್ಣನವರು ಹೇಳುತ್ತಾರೆ. ಇಲ್ಲಿ 'ಬರಬರುತ್ತ' ಎಂಬ ಪದದ ಪ್ರಯೋಗವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಒಂದು ವೇಳೆ ಲಿಂಗಾಯತರ ಪ್ರಕಾರ ಸತ್ತು ಶಿವನಲ್ಲಿ ಬೆರೆಯುವುದೇ ಲಿಂಗೈಕ್ಯವಾಗಿದ್ದರೆ ಇಲ್ಲಿ 'ಬರಬರುತ್ತ' ಎಂಬ ಪದಪ್ರಯೋಗ ಬೇಕಾಗಿರಲಿಲ್ಲ. ಯಾಕೆಂದರೆ ಸಾವು ಅನಿರೀಕ್ಷಿತ. ಯಾವಾಗ ಬೇಕಾದರೂ ಬರಬಹುದು. ಸಾವಿನಲ್ಲಿಯೇ ಲಿಂಗಾಂಗಸಾಮರಸ್ಯವನ್ನು ಅನುಭವಿಸುವುದೆಂದರೆ ಅದು ಅರ್ಥವಿಲ್ಲದ ಮಾತಾಗುತ್ತದೆ. ಬದುಕಿನಲ್ಲಿಯೇ ಲಿಂಗಾಂಗಸಾಮರಸ್ಯದ ಅನುಭೂತಿಯನ್ನು ಪಡೆಯುವುದು ಶಿವಯೋಗಸಾಧನೆಯ ಪರಮ ಗುರಿಯಾಗಿದೆ. ಬದುಕಿನಲ್ಲಿ ಅನೇಕ ಎಡಹು ಗುಳಿಗಳು ಎದುರಾಗುತ್ತವೆ. ಅವುಗಳನ್ನು ದಾಟಿ ಸೇರುವಂಥ – ಕ್ರಿಯಾಜ್ಞಾನಗಳ ಭೇದವಿಲ್ಲದಂಥ ಸಾಮರಸ್ಯದ ಸ್ಥಿತಿ ಅದಾಗಿರುತ್ತದೆ. ಇದು ಎಲ್ಲ ಮನುಷ್ಯರ ಶರೀರಗಳಲ್ಲಿ ಉಂಟಾಗುವಂಥದ್ದಾಗಿದೆ. ಮನುಷ್ಯನ ಎಲ್ಲ ತರದ ಅನುಭವಗಳಲ್ಲಿ ಕಾಣಿಸಿಕೊಳ್ಳುವಂಥ ಸಮರಸದ ಸ್ಥಿತಿ ಇದಾಗಿರುತ್ತದೆ. ಇದನ್ನೇ ಅಕ್ಕನ ವಚನದಲ್ಲಿ ಅಖಂಡ ಜ್ಞಾನ, ಅಭಿನ್ನ ಜ್ಞಾನ ಎಂದು ಕರೆದಿರುವುದು.

ಇನ್ನೊಂದು ಮಹತ್ವದ ವಿಚಾರ ಚೆನ್ನಬಸವಣ್ಣನವರು ಹೇಳುತ್ತಾರೆ:

> ಮೆಲ್ಲಮೆಲ್ಲನೆ ಭಕ್ತ, ಮೆಲ್ಲಮೆಲ್ಲನೆ ಮಾಹೇಶ್ವರ,
> ಮೆಲ್ಲಮೆಲ್ಲನೆ ಪ್ರಸಾದಿ, ಮೆಲ್ಲಮೆಲ್ಲನೆ ಪ್ರಾಣಲಿಂಗಿ,
> ಮೆಲ್ಲಮೆಲ್ಲನೆ ಶರಣ, ಮೆಲ್ಲಮೆಲ್ಲನೆ ಐಕ್ಯರಾದೆವೆಂಬರು.
> ನಿಮ್ಮ ಶರಣರು ತಾವೇನು ಮರುಜವಣಿಯ ಕೊಂಡರೆ?
> ಅಮೃತ ಸೇವನೆಯ ಮಾಡಿದರೆ?
> ಆವ ಸ್ಥಲದಲ್ಲಿ ನಿಂದರೂ
> ಆ ಸ್ಥಲದಲ್ಲಿ ಷಡುಸ್ಥಲ ಅಳವಡದಿದ್ದರೆ
> ಆ ಭಕ್ತಿಯ ಬಾಯಲ್ಲಿ ಹುಡಿಯ ಹೊಯ್ದು ಹೋಗುವೆನೆಂದ
> ಕೂಡಲಚೆನ್ನಸಂಗಮದೇವ ॥ (ಸವಸಂ. 3–1554)

'ಷಟ್ಸ್ಥಲಜ್ಞಾನಿ' ಎಂದು ಖ್ಯಾತಿ ಪಡೆದಿರುವ ಚೆನ್ನಬಸವಣ್ಣನವರು ಇಲ್ಲಿ ನಿರೂಪಿಸಿರುವ ಷಟ್ಸ್ಥಲಸಾರವನ್ನು ಪರಿಶೀಲಿಸಬೇಕು. ಮೆಲ್ಲಮೆಲ್ಲನೆ ಭಕ್ತ, ಮೆಲ್ಲಮೆಲ್ಲನೆ

ಮಾಹೇಶ್ವರ ಮುಂತಾದ ಸ್ಥಲಪ್ರಾಪ್ತಿಯ ವಿವರಗಳನ್ನು ನೀಡುತ್ತ ಈ ಆರೂ ಸ್ಥಲಗಳು ಒಂದರ ಅನಂತರ ಇನ್ನೊಂದು ಲಭ್ಯವಾಗುವಂಥ ತಂಗುದಾಣಗಳೇ? ಅಥವಾ ಒಂದು ಸ್ಥಲದಲ್ಲಿ ನೆಲೆಯೂರಿದ ಮೇಲೆ ಇನ್ನೊಂದು ಸ್ಥಲದಿಂದ ಅದು water tight compartmentನ ತರಹ ಯಾವುದೇ ರೀತಿಯ ಸಂಪರ್ಕ ಇಲ್ಲದಂಥ ವಿವಿಕ್ತ ಅಂದರೆ ಸಂಪರ್ಕವಿಲ್ಲದಂಥ ಸ್ಥಿತಿಯಲ್ಲಿರುತ್ತದೆಯೆ? ಒಂದು ವೇಳೆ ಹಾಗಿರುವುದಾದರೆ ಒಂದು ಸ್ಥಲದ ಸಿದ್ಧಿಯನ್ನು ಪಡೆದು ಇನ್ನೊಂದು ಸ್ಥಲಕ್ಕೆ ಏರುತ್ತ ಹೋಗಲು ಎಷ್ಟೊಂದು ಕಾಲ ಬೇಕು! ಅದಕ್ಕೆಂದೇ ಚೆನ್ನಬಸವಣ್ಣನವರು 'ನಿಮ್ಮ ಶರಣರು ಅಮೃತಪಾನ ಮಾಡಿ ಅಮರರಾಗಿರುವವರೆ?' ಎಂದು ಕೇಳುತ್ತಾರೆ. ಈ ಪ್ರಶ್ನೆಗೆ ಅವರೇ ಉತ್ತರಿಸುತ್ತಾರೆ. 'ಆವ ಸ್ಥಲದಲ್ಲಿ ನಿಂದರೂ ಆ ಸ್ಥಲದಲ್ಲಿ ಷಡುಸ್ಥಲ ಅಳವಡದಿದ್ದರೆ ಆ ಭಕ್ತಿಯ ಬಾಯಲ್ಲಿ ಹುಡಿಯ ಹೊಯ್ಯಬೇಕು' ಎಂದು ಹೇಳುತ್ತಾರೆ.

ಆವ ಸ್ಥಲದಲ್ಲಿ ನಿಂದರೂ ಆ ಸ್ಥಲದಲ್ಲಿ ಷಡುಸ್ಥಲ ಅಳವಡಬೇಕು ಮತ್ತು ಅಳವಡುತ್ತದೆ ಎಂಬ ಸ್ಪಷ್ಟೀಕರಣದಿಂದಾಗಿ ಅಕ್ಕನ ವಚನದಲ್ಲಿ ತಲೆದೋರಿದ ಆ ಶಂಕೆಗೆ ಪರಿಹಾರ ದೊರೆತಂತಾಗುತ್ತದೆ. ಅಖಂಡ ಹಾಗೂ ಅಭಿನ್ನ ಜ್ಞಾನದ ಚರಮಾವಸ್ಥೆಯನ್ನು ತಲುಪಿದ್ದರೂ ಕೆಳಗಿನ ಹಂತದ ಸ್ಥಲಗಳ ಸಂಬಂಧ ಸೂತ್ರ ಹರಿದುಹೋಗುವುದಿಲ್ಲ. ಪ್ರಾಣಲಿಂಗಿ ಅಥವಾ ಶರಣ ಯಾವುದೇ ಸ್ಥಲದಲ್ಲಿ ನೆಲೆ ನಿಂತಿದ್ದರೂ ಉಳಿದ ಸ್ಥಲಗಳ ಗುಣಲಕ್ಷಣಗಳು ಆ ಸ್ಥಲದಲ್ಲಿ ಮೈದೋರುತ್ತಲೇ ಇರುತ್ತವೆ. ಹೀಗಾಗಿ ಯಾವ ಕ್ಷಣದಲ್ಲಾದರೂ ವಿಕಾರಿಯಾದ ಮನಸ್ಸು ಭವಿತ್ವದ ಕಡೆಗೆ ಹಂದಿ, ನಾಯಿಗಳ ತರಹ ಎಳಸುವುದು ಸಹಜವಾಗಿದೆ. ಅದಕ್ಕಾಗಿ ಜ್ಞಾನವಾಯಿತ್ತೆಂದು ತನ್ನ ಮನಕ್ಕೆ ಬಂದ ಹಾಗೆ ಮೀರಿ ನುಡಿಯಬಾರದು, ನಡೆಯಬಾರದು ಎಂದು ಅಕ್ಕ ಹೇಳುತ್ತಾಳೆ. ಹೀಗೆ ಹರಿಬಿಟ್ಟ ಮನಸ್ಸಿನ ಸಂಸ್ಕಾರವನ್ನು ಉಳಿಸಿಕೊಂಡು ಹೋಗುವುದಕ್ಕಾಗಿ ಗುರು ಲಿಂಗ ಜಂಗಮದ ಆಸರೆ ಬೇಕೇಬೇಕಾಗುತ್ತದೆ. ಇಲ್ಲಿ ನಾನು ವಿಕಾರಿಯಾದ ಮನಸ್ಸು ಎಂದು ಹೇಳುತ್ತಿಲ್ಲ. ಸಂಸ್ಕಾರ ಪಡೆದ ಮನಸ್ಸು ಎಂದು ಹೇಳುತ್ತಿದ್ದೇನೆ. ಉಳಿದ ಸಾಧಕರು ವಿಕಾರಿಯಾದ ಮನಸ್ಸನ್ನು ದಮನ ಮಾಡಲು ಹೇಳುತ್ತಾರೆ. ಆದರೆ ಷಟ್ಸ್ಥಲ ಸಾಧನೆಯಲ್ಲಿ ಮನಸ್ಸನ್ನು ದಮನ ಮಾಡಬೇಕಾಗಿಲ್ಲ. ಅದಕ್ಕೆ ಸಂಸ್ಕಾರ ಕೊಟ್ಟು ಅದರಿಂದ ಭವಿತನವನ್ನು ಕಳೆಯಬೇಕಾಗುತ್ತದೆ. ಈ ರೀತಿಯ ಸಂಸ್ಕಾರದಿಂದಾಗಿಯೇ ಮನಸ್ಸು ಅಖಂಡ ಮತ್ತು ಅಭಿನ್ನವಾದ ಜ್ಞಾನದ ಹಂತವನ್ನು ತಲುಪುತ್ತದೆ. ಹೀಗಾಗಿ ಶರಣರ ಮನಸ್ಸು ಹೀಚುಗಾಯಿಯಾಗಿರುವುದಿಲ್ಲ. ಆದರೂ ಅದು ಪಾರ್ಥಿವ ಆಮಿಷಗಳಿಗೆ ಬಲಿಯಾಗುವ ಆತಂಕ ಇದ್ದೇ ಇರುತ್ತದೆ. ಆದ್ದರಿಂದ ಅದರ ಸಂಸ್ಕಾರ ಹಾಳುಗೆಡದಂತೆ ಇರಲು ಗುರು ಲಿಂಗ ಜಂಗಮಗಳು ಬೇಕೇ ಬೇಕು.

ಗುರು ಲಿಂಗ ಜಂಗಮಗಳು ಯಾಕೆ ಬೇಕು ಎಂಬುದಕ್ಕೆ ಮೇಲೆ ಸ್ಪಷ್ಟೀಕರಣ ನೀಡಲಾಗಿದೆ. ಆದರೂ ಅರಿವು – ಮರಹು, ಆಚಾರ – ಅನಾಚಾರ, ಅರ್ಪಿತ – ಅನರ್ಪಿತ, ಪ್ರಸಾದ – ಪದಾರ್ಥ ಇವುಗಳನ್ನು ಬೇರ್ಪಡಿಸುವ ವಿಭಾಜಕ ರೇಖೆ ತುಂಬಾ ಸೂಕ್ಷ್ಮವಾಗಿರುತ್ತದೆ. ಒಂದು ಕ್ಷೇತ್ರದಿಂದ ಮನಸ್ಸು ಇನ್ನೊಂದು ಕ್ಷೇತ್ರಕ್ಕೆ ಯಾವಾಗ ಜಿಗಿಯುತ್ತದೆ ಎಂಬುದು ಗೊತ್ತೇ ಆಗುವುದಿಲ್ಲ. ಇದು ನಿತ್ಯ ಜೀವನದಲ್ಲಿ ನಮ್ಮ ಅನುಭವಕ್ಕೆ ಬರುವ ವಿಚಾರವೇ ಆಗಿದೆ. ಆದಕ್ಕೆಂದೇ ಅಕ್ಕ ಇಲ್ಲಿ ಎಚ್ಚರಿಕೆಯನ್ನು ನೀಡಿದ್ದಾಳೆ. ಅಖಂಡ ಜ್ಞಾನ ಪ್ರಾಪ್ತವಾದ ಮೇಲೆ ಕೀಳುತನದ ಕಡೆಗೆ ಮನಸ್ಸು ಹರಿಯುವುದಿಲ್ಲ, ಹರಿಯಬಾರದು ಎಂಬುದು ಸೈದ್ಧಾಂತಿಕವಾದ ಮಾತು. ಒಂದು ವೇಳೆ ಅದು ಕೀಳುತನದ ಕಡೆಗೆ ಹರಿಯುತ್ತದೆ ಎಂದರೆ ಅದು ಜ್ಞಾನಾವಸ್ಥೆಗೆ ವಿರೋಧಾಭಾಸವಾಗಿ ಕಾಣುತ್ತದೆ. ಜ್ಞಾನಿಯಾದವನು ಕೀಳು ವಿಚಾರಗಳನ್ನು ಮಾಡಲು ಸಾಧ್ಯವೆ? ಖಂಡಿತ ಸಾಧ್ಯವಿಲ್ಲ ಎಂದು ಹೇಳಬಹುದು. ಆದರೆ, ವ್ಯಾವಹಾರಿಕವಾಗಿ ಹಾಗಾಗುವುದಿಲ್ಲ. ಎಂಥ ಜ್ಞಾನಿಯೇ ಆದರೂ, ಸಿದ್ಧಪುರುಷನೇ ಆಗಿದ್ದರೂ ಯಾವ ಕ್ಷಣದಲ್ಲಿ ಜಾರುವನು ಎಂದು ಹೇಳಲು ಬರುವುದಿಲ್ಲ. ಸಿದ್ಧಪುರುಷರು, ಮಹಾನ್ ಯೋಗಿಗಳು ಎಂದು ಪುರಾಣಗಳಲ್ಲಿ ವರ್ಣಿಸಲಾದ ಅನೇಕ ಋಷಿ–ಮುನಿಗಳು, ಜಿತೇಂದ್ರಿಯರು ತಮ್ಮ ಸಾಧನೆಯ ಮಾರ್ಗದಲ್ಲಿ ಜಾರಿದ ಕಥೆಗಳನ್ನು ನಾವು ಓದುತ್ತೇವೆ. ಇದು ಯಥಾರ್ಥವಾದ ಸತ್ಯ. ಇದನ್ನು ಅಲ್ಲಗಳೆಯುವುದು ಒಂದು ರೀತಿಯ ಆತ್ಮವಂಚನೆ ಎಂದೇ ಹೇಳಬೇಕು. ಅಥವಾ ವಾಸ್ತವದ ಅರಿವಿಲ್ಲದವರು ಹೇಳುವ ಮಾತು ಎಂದು ತಿಳಿಯಬೇಕು. ಶರಣರು ಈ ಸತ್ಯವನ್ನು ಕಂಡುಕೊಂಡಿದ್ದರು. ಶರಣರು ಕಂಡುಕೊಂಡಿರುವುದು ಸೈದ್ಧಾಂತಿಕ ಮಾತಲ್ಲ, ಅನುಭವದ ವಸ್ತುಸತ್ಯ, ಯಥಾರ್ಥವಾದ ವಿಚಾರ ಎಂಬುದನ್ನು ಅಕ್ಕನ ವಚನ ಧ್ವನಿಸುತ್ತದೆ.

ಅರಿವು – ಮರಹು ಮುಂತಾದ ಪರಸ್ಪರ ವಿರೋಧಿಯಾದ ಗುಣಗಳ ಆನುಷಂಗಿಕ ಸಂಬಂಧವನ್ನು ಹರಿದುಕೊಂಡು ಸಾಧನೆಗೆ ಪೂರಕ ಅಥವಾ ಅನಿವಾರ್ಯವಾದಂಥ ಅರಿವು, ಆಚಾರ, ಅರ್ಪಿತ, ಪ್ರಸಾದ ಮುಂತಾದ ಗುಣಗಳನ್ನು ಪೋಷಿಸಿಕೊಂಡು ಹೋಗಲು ಗುರು ಲಿಂಗ ಜಂಗಮವನ್ನು ಬಿಡಲು ಬರುವುದಿಲ್ಲ ಎಂದು ಅಕ್ಕ ಹೇಳುತ್ತಾಳೆ. ಅಕ್ಕನ ಇಂಗಿತವನ್ನು ಅರ್ಥಮಾಡಿಕೊಂಡೋ ಎಂಬಂತೆ ಚೆನ್ನಬಸವಣ್ಣನವರು ಹೇಳುತ್ತಾರೆ :

> ಅರಿವರತು ಮರಹು (ಕುರುಹು) ನಷ್ಟವಾದರೆ ಭಕ್ತ
> ಆಚಾರವರತು ಅನಾಚಾರ ನಷ್ಟವಾದರೆ ಜಂಗಮ
> ಅರ್ಪಿತವರತು ಅನರ್ಪಿತ ನಷ್ಟವಾದರೆ ಪ್ರಸಾದಿ
> ಪ್ರಸಾದವರತು ಪದಾರ್ಥ ನಷ್ಟವಾದರೆ ಪರಿಣಾಮಿ

ಪರಿಣಾಮವರತು ಪರಮ ಸುಖ ನೆಲೆಗೊಂಡರೆ
ಕೂಡಲ ಚೆನ್ನಸಂಗನಲ್ಲಿ ಲಿಂಗೈಕ್ಯವು ॥ (ಸವಸಂ. 3–801)

ಈ ವಚನದ ವಿಷಯಕ್ಕೆ ಸಂಬಂಧಿಸಿದ ವಿಚಾರ ಮೇಲೆ ಹೇಳಿರುವುದರಿಂದ ಇಲ್ಲಿ ಮತ್ತೆ ಅದರ ವಿಶ್ಲೇಷಣೆ ಬೇಕಾಗಿಲ್ಲ. ಇತರ ಯೋಗಮಾರ್ಗಗಳಲ್ಲಿ ಯಮ, ನಿಯಮ ಮುಂತಾದ ಅಷ್ಟಾಂಗಯೋಗದ ವಿಚಾರ ಬರುತ್ತದೆ. ಆದರೆ ಶರಣರು ಈ ಅಷ್ಟಾಂಗದಲ್ಲಿ ಕೊನೆಯ ಮೂರು ತತ್ತ್ವಗಳಾದ ಧ್ಯಾನ, ಧಾರಣ ಮತ್ತು ಸಮಾಧಿಗಳನ್ನು ಮಾತ್ರ ಸ್ವೀಕರಿಸಿದ್ದಾರೆ. ಮಗ್ಗೆಯ ಮಾಯಿದೇವರು ಶಿವಾಧವಶತಕದಲ್ಲಿ ಹೀಗೆ ಹೇಳುತ್ತಾರೆ:

ಧ್ಯಾನಮದಿಷ್ಟಲಿಂಗಮನಹರ್ನಿಶಮುಂ ನೆನೆವೇಕನಿಷ್ಠೆತದ್ ।
ಜ್ಞಾನಪರಾಯಣಮಳಮನೋಲಯವೇಸುಸಮಾಧಿತಲ್ಲಯ ।
ಸ್ಥಾನಮೆನಿಪ್ಪಲಿಂಗಮನನಾರತಮಂಗದ ಮೇಲೆ ಭಕ್ತಿ ಸ–
ನ್ಮಾನನಿಧಾನದಿಂಧರಿಸೆಧಾರಣಮೆಂಬಪದಂಶಿವಾಧವ ॥ 53 ॥

ಅಂದರೆ ಹಗಲಿರುಳೂ ಇಷ್ಟಲಿಂಗವನ್ನು ಸ್ಮರಿಸುವ ಭಾವನೆಯಿಂದ ಇರುವುದೇ ಧ್ಯಾನಯೋಗ. ಆ ಇಷ್ಟಲಿಂಗದ ಅರಿವಿನಲ್ಲಿ ಎರಕವಾಗಿ ಮನಸ್ಸನ್ನು ಲಯಗೊಳಿಸುವುದೇ ಸಮಾಧಿಯೋಗವು. ಆ ಮನಸ್ಸಿನ ಲಯಕ್ಕೆ ಆಶ್ರಯಸ್ಥಾನವಾದ ಇಷ್ಟಲಿಂಗವನ್ನು ಭಕ್ತಿ, ಕ್ರಿಯೆಯನ್ನು ಆಚರಿಸುತ್ತ, ಎಡಬಿಡದೆ ಶರೀರದ ಮೇಲೆ ಧರಿಸುವುದೇ ಧಾರಣಯೋಗವು. ಇತರ ಯೋಗಮಾರ್ಗಗಳು ಶರಣರ ಲಿಂಗಾಂಗಸಾಮರಸ್ಯದ ಸ್ಥಿತಿಯನ್ನೇ ಸಮಾಧಿ ಎಂದು ಕರೆದಿವೆ. ಮೇಲಿನ ಶತಕ ಪದ್ಯದಲ್ಲಿ ಧಾರಣದ ಅನಂತರ ಸಮಾಧಿಯ ಉಲ್ಲೇಖ ಬರಬೇಕಾಗಿತ್ತು. ಮಾಯಿದೇವರು ಸ್ಪಷ್ಟವಾಗಿ ಹೇಳಿದ್ದಾರೆ – ಸಮಾಧಿ ಸ್ಥಿತಿಗೆ ಅಂದರೆ ಮನಸ್ಸಿನ ಲಯಕ್ಕೆ ಆಶ್ರಯವಾದಂಥ ಇಷ್ಟಲಿಂಗವನ್ನು ಅನಾರತವಾಗಿ ಅಂದರೆ ಸಂತತವಾಗಿ ಅಂಗದ ಮೇಲೆ ಧರಿಸಿರಬೇಕು. 'ಅರಿವು ಸಾಧ್ಯವಾಯಿತ್ತೆಂದು ಗುರು ಲಿಂಗ ಜಂಗಮವ ಬಿಡಬಹುದೆ?' ಎಂಬ ಅಕ್ಕನ ಪ್ರಶ್ನೆಗೆ ಇದು ಉತ್ತರವಾಗಿದೆ.

ಅನುಲೋಮ ಕ್ರಮದಲ್ಲಿ ಧ್ಯಾನವೇ ಧಾರಣವಾಗುತ್ತದೆ, ಧಾರಣವೇ ಸಮಾಧಿಯಾಗಿ ಪರಿಣಮಿಸುತ್ತದೆ ಎಂದು ಮಾಯಿದೇವರು ಇನ್ನೊಂದು ಪದ್ಯದಲ್ಲಿ ಹೇಳುತ್ತಾರೆ. ಅದೇ ಪದ್ಯದಲ್ಲಿ ವಿಲೋಮಕ್ರಮದಿಂದ ಸಮಾಧಿಯೇ ಧಾರಣವಾಗಿ, ಧಾರಣವೇ ಧ್ಯಾನವಾಗಿ ಪರಿಣಮಿಸುತ್ತದೆ ಎಂದು ಹೇಳುತ್ತಾರೆ. ಹೀಗೆ ಇವು ಮೂರೂ ಒಂದನ್ನೊಂದು ಎಡೆಬಿಡದೆ ಆಶ್ರಯಿಸಿಕೊಂಡಿರುವುದೇ ಶಿವಯೋಗ ಅಥವಾ ಅಖಂಡ ಜ್ಞಾನದ ಅನುಭೂತಿಯ ಸ್ಥಿತಿಯಾಗುತ್ತದೆ. ನಾವು ಮೇಲೆ ಉಲ್ಲೇಖಿಸಿದ ಚೆನ್ನಬಸವಣ್ಣನವರ ವಚನದಂತೆ 'ಆವಸ್ಥಲದಲ್ಲಿ ನಿಂದರೂ ಆ ಸ್ಥಲದಲ್ಲಿ ಷಡುಸ್ಥಲಗಳು ಅಳವಡುತ್ತವೆ' ಎಂಬ ಮಾತನ್ನು ಇದು ಸಮರ್ಥಿಸುತ್ತದೆ.

ಇಲ್ಲಿ ಇನ್ನೊಂದು ಮಾತನ್ನು ಸೇರಿಸಲು ಮನಸ್ಸಾಗುತ್ತದೆ. ಶರಣರು ಶಿವಯೋಗವನ್ನು ಸಾಧಿಸಿ ಲಿಂಗಾಂಗಸಾಮರಸ್ಯವನ್ನು ಅಂದರೆ ಐಕ್ಯಾನುಭೂತಿಯನ್ನು ಹೊಂದಿದ್ದರೂ ಯಾರೂ 'ಐಕ್ಯ'ರೆಂದು ಅನಿಸಿಕೊಂಡಿಲ್ಲ. ಷಟ್ಸ್ಥಲಗಳಲ್ಲಿ ಕೆಲವೊಮ್ಮೆ ಕೆಲವು ಶರಣರನ್ನು 'ಭಕ್ತ'ರೆಂದು, 'ಪ್ರಸಾದಿ' ಎಂದು ಸಂಬೋಧಿಸಿದ್ದುಂಟು. '(ವೀರ) ಮಾಹೇಶ್ವರ' ಎಂಬ ಪದವು ಕೂಡ ಕೆಲವು ವಿಶೇಷ ಸಂದರ್ಭಗಳಲ್ಲಿ ಬಳಸಲಾಗಿದೆ. ಆದರೆ 'ಪ್ರಾಣಲಿಂಗಿ' ಅಥವಾ 'ಐಕ್ಯ' ಎಂದು ಯಾರನ್ನೂ ಸಂಬೋಧಿಸಿರುವುದು ಕಂಡುಬರುವುದಿಲ್ಲ. 'ಶರಣರು' ಎಂಬುದು ಇಷ್ಟಲಿಂಗಸಾಧಕರಿಗೆ ವ್ಯಾಪಕವಾಗಿ ಮತ್ತು ಸಾರ್ವತ್ರಿಕವಾಗಿ ಸಂಬೋಧಿಸಲಾಗುತ್ತದೆ. ಅಕ್ಕನ ಪ್ರಸ್ತುತ ವಚನದ ಸಂದರ್ಭದಲ್ಲಿ ಈ ವಿಚಾರವೂ ಕೂಡ ಒಂದಿಷ್ಟು ಜಿಜ್ಞಾಸೆಯನ್ನು ಹುಟ್ಟಿಸುತ್ತದೆ. ಷಟ್ಸ್ಥಲಗಳಲ್ಲಿ ಶರಣಸ್ಥಲಕ್ಕಿಂತ ಮೊದಲಿನ ನಾಲ್ಕು ಸ್ಥಲಗಳನ್ನು ಸಾಮಾನ್ಯ ತಿಳುವಳಿಕೆಗಾಗಿ ಕೆಳಗಿನ ಹಂತಗಳೆಂದು ಹೇಳಬಹುದು. (ಈ ಕುರಿತು ಚರ್ಚೆ ಬೇಡ). ಇನ್ನು ಶರಣಸ್ಥಲದ ಅನಂತರದ ಸ್ಥಲವಾದ ಐಕ್ಯಸ್ಥಲವು ಲೌಕಿಕ ಪ್ರಜ್ಞೆಯ ಆಚೆಗಿನ ಸ್ಥಿತಿ, ಅಂದರೆ ನಾನೇ 'ಶಿವ' ಎನ್ನುವ ಅದ್ವೈತ ಸ್ಥಿತಿ, ನಾನೇ ದೇವರಾಗುವುದು. ಶರಣಸ್ಥಲವು ಅದಕ್ಕಿಂತ ಒಂದು ಹಂತ ಕೆಳಗಿನದು. ಇಲ್ಲಿ ನಾನೂ ದೇವರಾಗುವುದು ಮತ್ತು ನೀವೂ ದೇವರಾಗುವುದನ್ನು ಕಾಣುವ ಸ್ಥಿತಿ. ನಾನು–ನೀವು ಎಲ್ಲರೂ ದೇವರಾಗುವುದನ್ನು ಪ್ರತಿಪಾದಿಸುವುದು 'ಶರಣಸ್ಥಲ' ಎಂದು ಹೇಳಬಹುದೇನೋ. ಹೀಗಾಗಿ ಶರಣಸ್ಥಲದಲ್ಲಿ ವ್ಯಕ್ತಿಯು ಬರೀ ವ್ಯಕ್ತಿಯಾಗಿ ಉಳಿಯುವುದಿಲ್ಲ, ಆತ ಸಮಾಜವಾಗಿ ಪರಿವರ್ತಿತನಾಗಿರುತ್ತಾನೆ. ಹೀಗಾಗಿ ಅಕ್ಕ ತನ್ನ ವಚನದಲ್ಲಿ ಹೇಳಿರುವ 'ಪರಧನ, ಪರಸ್ತ್ರೀಯರಿಗೆ ಅಳುಪುವುದು', 'ಶುನಕ ಸೂಕರ ಕುಕ್ಕುಟ ಮಾರ್ಜಾಲಂಗಳ ಕೂಡೆ ಭುಂಜಿಸುವುದು' ಎಂಬ ಮಾತುಗಳು ವ್ಯಕ್ತಿಯಾದ ಶರಣನ ಕುರಿತಾಗಿಯಲ್ಲ, ಸಮಾಜಜೀವಿಯಾದ ಇಷ್ಟಲಿಂಗಸಾಧಕನಾದ ಶರಣನ ಕುರಿತಾಗಿ ಎಂಬುದು ತಿಳಿದುಬರುತ್ತದೆ. ಈ ವಚನವನ್ನು ಇಡೀ ಸಮಾಜವನ್ನೇ ದೃಷ್ಟಿಯಲ್ಲಿಟ್ಟುಕೊಂಡು ನುಡಿಯಲಾಗಿದೆ.

□

# ಇಷ್ಟಲಿಂಗ : ಸಾಮಾಜಿಕ ಆಯಾಮ

**ಪ್ರಕಾಶ ಗಿರಿಮಲ್ಲನವರ**

'ಎನ್ನ ಕಷ್ಟಕುಲದಲ್ಲಿ ಹುಟ್ಟಿದೆನೆಂಬ ಕರ್ಮವ ಕಳೆದು, ಮುಟ್ಟಿ ಪಾವನವ ಮಾಡಿ ಕೊಟ್ಟನಯ್ಯಾ ಎನ್ನ ಕರಸ್ಥಲಕ್ಕೆ ಲಿಂಗವ; ಆ ಲಿಂಗ ಬಂದು ಸೋಂಕಲೊಡನೆ ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯಾ; ಎನ್ನ ತನುವಿನಲ್ಲಿ ಗುರುವ ನೆಲೆಗೊಳಿಸಿದ, ಎನ್ನ ಮನದಲ್ಲಿ ಜಂಗಮವ ನೆಲೆಗೊಳಿಸಿದ, ಎನ್ನ ಅರುಹಿನಲ್ಲಿ ಪ್ರಸಾದವ ನೆಲೆಗೊಳಿಸಿದ. ಇಂತೀ ತ್ರಿವಿಧ ಸ್ಥಾನವ ಶುದ್ಧವ ಮಾಡಿದ.......ಅಭಿನವ ಚನ್ನಮಲ್ಲಿಕಾರ್ಜುನ'.

ಡೋಹರ ಕಕ್ಕಯ್ಯನ ವಚನವಿದು. 12ನೇ ಶತಮಾನದಲ್ಲಿ ಎಲ್ಲ ವರ್ಗದ ಜನರು ಇಷ್ಟಲಿಂಗವನ್ನು ಧರಿಸುವ ಮೂಲಕ ಸಾಮಾಜಿಕ ಸಮಾನತೆಗೆ ನಾಂದಿ ಹಾಡಿದ್ದು ಧಾರ್ಮಿಕ ಇತಿಹಾಸದಲ್ಲೇ ದಾಖಲಾಗುವ ಸಂಗತಿಯಾಗಿದೆ. 'ಇಷ್ಟಲಿಂಗ' ಸಾಮಾಜಿಕ ಸಮಾನತೆಯ ಮುಖ್ಯ ಧ್ಯೇಯವುಳ್ಳ ಒಂದು ಧಾರ್ಮಿಕ ಲಾಂಛನವಾಗಿದೆ. ಇಳಕಲ್ ಮಠದ ಪೂಜ್ಯ ಶ್ರೀ ಮಹಾಂತಪ್ಪಗಳು ಇಷ್ಟಲಿಂಗವೆಂದರೆ ಜೆಸಿಬಿ ಇದ್ದಂತೆ, ತೆಗ್ಗನ್ನು ಮುಚ್ಚಿ, ದಿನ್ನೆಯನ್ನು ಸರಿಪಡಿಸಿ, ಸಮತಟ್ಟಾದ ಭೂಮಿಯನ್ನು ಜೆಸಿಬಿ ಸಿದ್ಧಗೊಳಿಸಿದಂತೆ, ಇಷ್ಟಲಿಂಗವು ಕೆಳವರ್ಗದ ತೆಗ್ಗನ್ನು ಮುಚ್ಚಿ, ಮೇಲ್ವರ್ಗದ ದಿನ್ನೆಯನ್ನು ಕೆಡವಿ ಸಮೃದ್ಧ ಸಮಾನತೆಯ ಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತದೆ. ಇಷ್ಟಲಿಂಗ ಪೂಜೆಯ ಮೂಲಕ ಸಮಾನತೆ ಸಾಧಿಸುವುದು, ಕಷ್ಟದ ದುಡಿಮೆ ಮಾಡಿ ಕಾಯಕತತ್ವವನ್ನು ಪೂರ್ಣ ಪ್ರಮಾಣದಲ್ಲಿ ಪರಿಪಾಲಿಸುವುದು, ನಿಷ್ಠೆಯ ದಾಸೋಹದ ಮೂಲಕ ಗಳಿಕೆಯನ್ನು ಸಮಾಜದ ಪ್ರಗತಿಗೆ ವಿನಿಯೋಗಿಸುವುದು ಶರಣಧರ್ಮದ ಪ್ರಮುಖ ಲಕ್ಷಣಗಳಾಗಿವೆ.

'ವಾಸ್ತವವಾಗಿ, ದೇವಾಲಯ-ಮಸೀದಿ-ಚರ್ಚುಗಳನ್ನು ಸೃಷ್ಟಿಸಿ, ಅಲ್ಲಿ ನಾವೇ ಸ್ಥಾಪಿಸಿರುವ ವಿಗ್ರಹವನ್ನೇ ದೇವರೆಂದು ಪೂಜಿಸುವಂತೆ ಮಾಡಿರುವುದು ಪೂಜಾರಿ-ಪುರೋಹಿತರ ಹುನ್ನಾರ. ದೇವರು ನಮಗಿಂತ ಭಿನ್ನ ಎಂಬ ಕಲ್ಪನೆಯೇ ಕುತಂತ್ರದ್ದು. ಶತಶತಮಾನಗಳ ಈ ಕುತಂತ್ರವನ್ನು ಶರಣರು ಗಂಭೀರವಾಗಿ ಗಮನಿಸಿದರು; ಬಯಲಿ ಗೆಳೆದರು. ಪುರೋಹಿತಶಾಹಿ ಅಂತಹ ನಂಬಿಕೆಯನ್ನು ತುಂಬಿದ್ದ ಕಾರಣ ಜನರ ದೃಷ್ಟಿಯೆಲ್ಲ ವಿಗ್ರಹ, ಗುಡಿ, ಕ್ಷೇತ್ರಗಳ ಕಡೆಗೆ ಹರಿದಿತ್ತೇ ವಿನಃ ತಮ್ಮ ಕಡೆಗೆ ತಾವು

ನೋಡಿಕೊಳ್ಳಲಿಲ್ಲ. ಈ ಕಳೆಯನ್ನು ಕಿತ್ತು ಹೊಸ ಬೆಳೆ ತೆಗೆಯುವುದೇ 12 ಶತಮಾನದ ಶರಣರ ಆಶಯವಾಗಿತ್ತು. ಈ ಆಶಯದ ಮುಂಬೆಳಗಾಗಿ ಇಷ್ಟಲಿಂಗ ಸಹಕಾರಿಯಾಯಿತು.

ಸ್ತ್ರೀಯರನ್ನು ಶೂದ್ರರನ್ನು ಅನಾಗರಿಕರನ್ನಾಗಿ ಕಾಣುವಂತಹ ಸಮಾಜದಲ್ಲಿ, ಅವರಿಗೆ ಸಮಾನತೆಯನ್ನು ಕಲ್ಪಿಸಬೇಕೆಂಬ ಕಾರಣಕ್ಕಾಗಿಯೇ ಇಷ್ಟಲಿಂಗ ಸಾಧನವಾಗಿ ಬಂದಿತು. ಈ ಕುರಿತು ಇಮ್ಮಡಿ ಶಿವಬಸವ ಸ್ವಾಮಿಗಳು ತುಂಭ ಅರ್ಥಪೂರ್ಣವಾಗಿ ವಿವರಿಸುತ್ತಾರೆ:

'ಉಪನಯನ ಸಂಸ್ಕಾರ ಲಭಿಸುವವರೆಗೂ ದ್ವಿಜನಾಗುವುದಿಲ್ಲ. ದ್ವಿಜನಾಗದ ಹೊರತು ಅಗ್ನಿಹೋತ್ರ ಯಜ್ಞ–ಯಾಗ ಮುಂತಾದ ಯಾವುದೇ ಕರ್ಮಕಲಾಪಗಳಿಗೆ ಅರ್ಹತೆ ಲಭಿಸುವುದಿಲ್ಲ. ಉಪನಯನ ಸಂಸ್ಕಾರ ಕ್ರಿಯೆಯೇ ಅರ್ಹತೆಯನ್ನು ತಂದುಕೊಡುವುದಾದರೆ ಅದು ಎಲ್ಲ ವರ್ಣದವರಿಗೂ ತಂದುಕೊಡಬೇಕಾಗುತ್ತದೆ. ಈ 'ಸಂಸ್ಕಾರ'ವನ್ನು ಸಕಲ ಮಾನವರಿಗೂ ಲಿಂಗಭೇದವಿಲ್ಲದೆ, ವರ್ಣಭೇದವಿಲ್ಲದೆ ಅನ್ವಯಿಸಿದ್ದ ಪಕ್ಷದಲ್ಲಿ ಪ್ರಾಯಶಃ ನಮ್ಮ ದೇಶದಲ್ಲಿ ಜಾತಿಯ ಸಮಸ್ಯೆಯೇ ಉದ್ಭವಿಸುತ್ತಿರಲಿಲ್ಲವೇನೋ? ನಿಸರ್ಗಸಿದ್ಧವಾದ ದೈಹಿಕ ಕ್ರಿಯೆಯ ಆಧಾರದ ಮೇಲೆ ಸ್ತ್ರೀಯರೂ ಸಹ ಈ ಸಂಸ್ಕಾರದಿಂದ ವಂಚಿತರಾಗಿದ್ದಾರೆ. ಸಂಸ್ಕಾರದಿಂದ ಅರ್ಹತೆಯು ಲಭಿಸುತ್ತದೆಯೋ? ಹುಟ್ಟಿನಿಂದ ಲಭಿಸುತ್ತದೆಯೋ? ಹುಟ್ಟಿನಿಂದಲೇ ಮೂರು ವರ್ಣದವರಿಗೂ ವೇದಾಧ್ಯಯನದ ಅರ್ಹತೆ ಇದ್ದ ಪಕ್ಷದಲ್ಲಿ ಈ ಸಂಸ್ಕಾರದಿಂದ ಆಗಬೇಕಾದ ಮತ್ತೊಂದು ಪ್ರಯೋಜನವೇನು? ಸಂಸ್ಕಾರದಿಂದ ಅರ್ಹತೆ ಲಭಿಸುತ್ತದೆ ಎನ್ನುವುದಾದರೆ ಎಲ್ಲ ವರ್ಣದವರಿಗೂ ವೇದಾಧ್ಯಯನದ ಅರ್ಹತೆ ಬರಬೇಕಾಗುತ್ತದೆ. ಒಂದು ವೇಳೆ ಗುಣ ಉಳ್ಳವರಿಗೆ ಮಾತ್ರ ಈ ಸಂಸ್ಕಾರದಿಂದ ವೇದಾಧ್ಯಯನಾರ್ಹತೆ ಯನ್ನು ಮಾನ್ಯ ಮಾಡಿದರೆ ಎಲ್ಲ ವರ್ಣದಲ್ಲೂ ಗುಣವುಳ್ಳವರು ದೊರೆಯುತ್ತಾರೆ. ಒಂದು ವರ್ಣಕ್ಕೆ ಸೇರಿದ ಎಲ್ಲರೂ ಗುಣವಂತರಾಗಿಯೇ ಇರುತ್ತಾರೆ ಎನ್ನಲು ಸಾಧ್ಯವೇ? ಆಗ ವ್ಯಕ್ತಿಯ ನೈತಿಕ ಮಟ್ಟವನ್ನನುಸರಿಸಿ ಸಂಸ್ಕಾರವನ್ನು ಕೊಡಬೇಕಾಗುತ್ತದೆ. ಆದರೆ ಅಂದಿನ ಯುಗದ ಸಾಂಪ್ರದಾಯಿಕ ವ್ಯಕ್ತಿಗಳಿಗೆ ಇದು ಅಧರ್ಮವೆನಿಸಿ ಮಾನ್ಯವಾಗಲಿಲ್ಲ. ಬಸವಣ್ಣನವರಿಗೆ ಈ ವಿಧವಾದ ಸಾಮಾಜಿಕ ವಿಷಮತೆಗೆ ಕಾರಣವಾದ ಪ್ರಕ್ರಿಯೆಯ ವಿರುದ್ಧ ಹೋರಾಟ ನಡೆಸಬೇಕಾದುದು ಅನಿವಾರ್ಯವಾಯಿತು. ಅವರು ಸಕಲ ಮಾನವರಿಗೂ ಅನ್ವಯವಾಗುವ ಸಾಮಾಜಿಕ ಅಸಮತೆಯನ್ನಳಿಸುವ ವಿಶಿಷ್ಟ ಸಂಸ್ಕಾರವನ್ನು ಆಲೋಚಿಸಬೇಕಾಯಿತು. ಸಾಮಯಿಕವಾದ ಈ ಸಮಸ್ಯೆಗೆ ಅವರ ಹೃದಯ ಮಾತ್ರ ಸ್ಪಂದಿಸಿತು.' (ಸಾಮಾಜಿಕ ಮೌಲ್ಯವಾಗಿ ಲಿಂಗ : ಡಾ. ಇಮ್ಮಡಿ ಶಿವಬಸವ ಸ್ವಾಮಿಗಳು)

ಸ್ತ್ರೀಯರಿಗೂ ಕೆಳವರ್ಗದವರಿಗೂ ಇಷ್ಟಲಿಂಗ ಪೂಜೆಯ ಹಕ್ಕನ್ನು ನೀಡುವ ಮೂಲಕ ಬಸವಾದಿ ಶಿವಶರಣರು ಸಾಮಾಜಿಕ ಸಮಾನತೆಗೆ ನಾಂದಿ ಹಾಡಿದರು.

ವಚನ ಚಳುವಳಿ ಹುಟ್ಟಿದ್ದೆ ಸಾಮಾಜಿಕ ನ್ಯಾಯಕ್ಕಾಗಿ. ಸಾವಿರಾರು ವಚನಗಳನ್ನು ಈ ನಿಟ್ಟಿನಲ್ಲಿ ಉದ್ಧರಿಸಬಹುದು. ಆದರೆ 15ನೇ ಶತಮಾನದಲ್ಲಿ ವಚನಗಳ ಸಂಕಲನ, ಸಂಗ್ರಹ, ಸಂಪಾದನಾ ಘಟ್ಟದಲ್ಲಿ ಅನೇಕ ಪ್ರಕ್ಷಿಪ್ತ ವಚನಗಳು ಹುಟ್ಟಿಕೊಂಡವು. ಈ ವಚನಗಳ ನಡುವೆ ಸಂಸ್ಕೃತ ಉಕ್ತಿಗಳನ್ನು ಉದ್ದೇಶಪೂರ್ವಕವಾಗಿ ಸೇರಿಸಲಾಯಿತು. ಈ ವಿಷಯವಾಗಿ ಸಂಶೋಧನೆ ಮಾಡಿರುವ ಡಾ. ಇಮ್ಮಡಿ ಶಿವಬಸವ ಸ್ವಾಮಿಗಳು ಹೀಗೆ ಹೇಳುತ್ತಾರೆ:

'ಕೆಲವರು ವೈದಿಕ ನೆಲೆಯಲ್ಲೇ ಲಿಂಗಾಯತ ಧರ್ಮವನ್ನು ಸದೃಢವಾಗಿ ನೆಲೆಗೊಳಿಸಲು ಪ್ರಯತ್ನಿಸಿದ್ದನ್ನು ಕೆಲವು ವಚನಗಳಲ್ಲಿ ಕಾಣಬಹುದು. ಚನ್ನಬಸವಣ್ಣನವರ ಒಂದು ಬಹು ದೀರ್ಘವಾದ ವಚನವು ಕರ್ಮಠತನದ ಪರಮಾವಧಿ ಎನ್ನಬಹುದಾದ 'ಇಷ್ಟಲಿಂಗ' ದೀಕ್ಷಾವಿಧಿಯನ್ನು ಹೇಳಿದೆ. ಇದನ್ನು ಓದಿದವರಿಗೆ ಸಾಧನೆಗೆ ಭಯವನ್ನು ಹುಟ್ಟಿಸುವಂತಿದೆ. ಅತ್ಯಂತ ಸರಳವಾದ ಶಿವಯೋಗ ಸಾಧನೆಗೆ ಇದು ವಿರೋಧವೆನಿಸುತ್ತದೆ. ಈ ವಚನ ಸರ್ವಥಾ ಚನ್ನಬಸವಣ್ಣನವರದ್ದು ಎಂದು ಹೇಳಲು ಕಷ್ಟವಾಗುತ್ತದೆ. ಇದು ಖಚಿತವಾಗಿ ಪ್ರಕ್ಷಿಪ್ತವೆನ್ನಲು ಯಾವ ಅಡ್ಡಿಯೂ ಇಲ್ಲ. ಕಾಲಾಂತರದಲ್ಲಿ ಶಿವಶರಣರ ಹೆಸರಿನಲ್ಲಿ ಸೇರ್ಪಡೆಗೊಂಡಿರುವ ಕೆಲವು ಪ್ರಕ್ಷಿಪ್ತ ವಚನಗಳಲ್ಲಿ ಸಂಸ್ಕೃತೋಕ್ತಿಗಳ ಸೇರ್ಪಡೆ ಅಧಿಕವಾಗಿರುವಂತೆ ಕಾಣುತ್ತದೆ. ಈ ಸಂಸ್ಕೃತೋಕ್ತಿಗಳು ಷಟ್‌ಸ್ಥಲ ವಚನಗಳಲ್ಲಿ ಕಡಿಮೆ ಇದ್ದು, 'ಹೆಚ್ಚಿನ ವಚನಗಳು' ವಿಭಾಗದಲ್ಲಿ ಹೆಚ್ಚಾಗಿವೆ. (ವಚನಗಳಲ್ಲಿ ಸಂಸ್ಕೃತೋಕ್ತಿಗಳು : ಡಾ. ಇಮ್ಮಡಿ ಶಿವಬಸವ ಸ್ವಾಮಿಗಳು, ಪ್ರಸ್ತಾವನೆ ಪು. 4)

ಎಲ್ಲರೂ ಸಮಾನರು ಎಂದು ಸರ್ವಸಮಾನತೆಯ ಸೂತ್ರವನ್ನು ಸಮಾಜದಲ್ಲಿ ಅನ್ವಯಿಸಿ ಸಾಧಿಸುವಾಗ ಅದನ್ನು ಕೇವಲ ತಾತ್ವಿಕವಾಗಿ ಹೇಳಿದರೆ ಸಾಲದು. ಅದನ್ನು ಅನುಭವಕ್ಕೆ ತಂದುಕೊಡುವ ಪ್ರಾಯೋಗಿಕ ಆಚರಣೆ ಬೇಕಾಗಿತ್ತು. ಇಲ್ಲವಾದರೆ ಸಮಾನತೆ ಎನ್ನುವುದು ಮಾತಿನಲ್ಲಿಯೇ ಉಳಿಯುತ್ತಿತ್ತು. ಆ ಮಾತಿನ ಸಮಾನತೆ ಮೊದಲಿನಿಂದಲೂ ನಮ್ಮಲ್ಲಿತ್ತು. ಈಗಲೂ ಇದೆ. ನಮಗೆ ಒಳಿತು ಕೆಡಕು ಎಲ್ಲಾ ಒಂದೇ ಎನ್ನುವವರು ತಮಗೆ ಒಳಿತೇ ಇರಲಿ ಎಂದು ಮೊದಲು ಆರಿಸಿಕೊಳ್ಳುತ್ತಾರೆ. ನಮಗೆ ಕಾರೂ ಒಂದೇ, ಗಾಡಿಯೂ ಒಂದೇ!. ಯಾವ ಭೇದವೂ ಇಲ್ಲ, ಆದರೆ ನಮಗೆ ಕಾರೇ ಇರಲಿ, ನಮಗೆ ಮೃಷ್ಟಾನ್ನವೂ ಒಂದೇ, ಗಂಜಿಯೂ ಒಂದೇ. ಆದರೆ ನಮಗೆ ಮೊದಲನೆಯದೇ ಇರಲಿ, ಎನ್ನುವಂತಹ ಸಮಾನತೆ ನಮ್ಮದು. ಎಲ್ಲಾ ಒಂದೇ, ಕಸ ಗುಡಿಸಿದರೇನು? ಮಾಲೆ ಧರಿಸಿದರೇನು? ಆದರೆ ನನಗೆ ಮಾಲೆಯೇ ಇರಲಿ ನಿನಗೆ ಕಸ ಗುಡಿಸುವುದೇ ಇರಲಿ– ಎನ್ನುವಂತಹ ಬುದ್ಧಿವಂತಿಕೆಯ ಮಾತುಗಳಿಂದ ಸಮಾನತೆ ಸಾಧಿತವಾಗುವುದಿಲ್ಲ. ಸಾಮಾಜಿಕವಾಗಿ ಧಾರ್ಮಿಕವಾಗಿ ಎಲ್ಲರೂ ಸಮಾನರು ಎನ್ನುವುದನ್ನು ಬಸವಣ್ಣ ಸಾಧಿಸಿ ತೋರಿಸಬೇಕಾಗಿತ್ತು. ದೀನರಲ್ಲಿ ದಲಿತರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಬೇಕಾಗಿತ್ತು. ಆದ್ದರಿಂದ ತಾನು ಧರಿಸುವ

ಲಿಂಗವನ್ನೇ ಅವರಿಗೂ ಕೊಟ್ಟು, ಯಾವ ಮೇಲು ಕೀಳುಗಳಿಲ್ಲದ ಪೂರ್ಣ ಸಮಾನತೆಯ ಅರಿವನ್ನು ಅವರಿಗೆ ತಂದುಕೊಡಬೇಕಾಯಿತು. ಅಂದರೆ ಇಷ್ಟಲಿಂಗ ಸಾಮಾಜಿಕ ಸಮಾನತೆಯ ಸಾಕಾರ ಸಾಕ್ಷಿಯಾಯಿತು. ಇಂದಿನ ಆಧುನಿಕ ಯುಗದಲ್ಲಿ ಈ ಸಮಾನತೆ ಹಲವು ಮಾರ್ಗಗಳಿಂದ ಸಾಧಿತವಾಗಿರುವುದರಿಂದ ಅದರ ಮಹತ್ವ ಇಂದು ಅಷ್ಟಾಗಿ ಮನವರಿಕೆಯಾಗಲಾರದು. ಆದರೆ ಅಂದು ಸಮಷ್ಟಿ ಚೈತನ್ಯವನ್ನು ಉದ್ದೀಪಿಸುವುದರಲ್ಲಿ ಬಹಳ ಪ್ರಭಾವಶಾಲಿಯಾದ ಪಾತ್ರ ವಹಿಸಿತು.

ಬಸವಣ್ಣನವರ ಈ ಲಿಂಗನಿಷ್ಠೆಯನ್ನು ಅತಿರೇಕವಾದ (Fanaticism) ಎಂದು ಕೆಲವರು ತಿಳಿಯುವ ಸಂಭವವುಂಟು. ಇತರ ಕ್ಷುದ್ರ ದೇವತೆಗಳನ್ನು ಗೇಲಿ ಮಾಡಿ ಇದೊಂದನ್ನೇ ಪೂಜಿಸಬೇಕೆಂದು ಹೇಳುತ್ತ 'ಪತಿವ್ರತೆಗೆ ಗಂಡನೊಬ್ಬನೇ ಕಾಣಿರೋ' ಎಂದು ಮುಂತಾಗಿ ಹೇಳಿರುವುದರಲ್ಲಿ ಅವರ ಸರ್ವಾಧಿಕಾರಿ ಮನೋಧರ್ಮ ವ್ಯಕ್ತವಾಗುತ್ತದೆಂದು ಹೇಳಿರುವವರೂ ಇದ್ದಾರೆ. ಆದರೆ ಅವರ ನಿಷ್ಠೆಯಲ್ಲಿ ಕಾಣುವುದು ಸಂಕುಚಿತತೆಯಾಗಲೀ ಸರ್ವಾಧಿಕಾರವಾಗಲೀ ಅಲ್ಲ; ಮನಸ್ಸನ್ನು ಕೇಂದ್ರೀಕರಿಸಿ ಅಂತರ್‌ಮುಖಿಗೊಳಿಸುವ ಯಶಸ್ವಿಯಾದ ಪ್ರಯತ್ನ. 'ದೇವನೊಬ್ಬ ನಾಮ ಹಲವು' ಎನ್ನುವುದು ಅವರಿಗೆ ಗೊತ್ತು. ಆದರೆ ಕ್ಷುದ್ರ ಬಯಕೆಗಳ ಈಡೇರಿಕೆಗಾಗಿ ಆ ನಾಮಗಳನ್ನು ಬಳಸಬಾರದೆನ್ನುವ ಸತ್‌ಪರವಾದ ನಿಷ್ಠೆ ಅವರದು.

ಅರಗು ತಿಂದು ಕರಗುವ ದೈವ, ಉರಿಯ ಕಂಡು ಮುರುಟುವ ದೈವ, ಕಾಳಯ್ಯ, ಕೇತಯ್ಯ, ಮಾರಿ ಚೌಡಿ ಮೊದಲಾದ ಹಾದಿಬೀದಿಗಳ ಕ್ಷುದ್ರ ಉಪಾಸನೆಯನ್ನು ಅವರು ನಿರಾಕರಿಸಿದುದು ಪರಿಶುದ್ಧ ನಿಷ್ಠೆಯ ಕೇಂದ್ರೀಕರಣಕ್ಕಾಗಿ. ಉದಾತ್ತವಾದುದಕ್ಕೆ ಒಲಿದ ಮೇಲೆ ಮತ್ತೆ ಕುತ್ಸಿತಕ್ಕೆ ಇಳಿಯಬಾರದು. ಅದು ಗಂಗಾನದಿಯಲ್ಲಿ ಮಿಂದು ಗಂಜಳದಲ್ಲಿ ಹೊರಳಿದಂತೆ ಆಗುತ್ತದೆ. ನೀರ ಕಂಡಲ್ಲಿ ಮುಳುಗುವುದು, ಮರನ ಕಂಡಲ್ಲಿ ಸುತ್ತುವುದು, ತೀರ್ಥಕ್ಷೇತ್ರಗಳಿಗೆ ತಿರುಗುವುದು, ಯಜ್ಞಯಾಗಾದಿಗಳಲ್ಲಿ ತೊಡಗುವುದು, ದೇವಾಲಯಗಳಲ್ಲಿ ಅದ್ದೂರಿಯ ಪೂಜೆ, ಇವೆಲ್ಲಾ ಭಕ್ತಿಯನ್ನು ಅಂತರಂಗದ ಕಡೆಗೆ ತಿರುಗಿಸುವುದರ ಬದಲು ಸಾಮೂಹಿಕ ಪ್ರದರ್ಶನಕ್ಕೆ ಕಾರಣವಾಗಿ ಕೊನೆಗೆ ಶೋಷಣೆಯಲ್ಲಿ ಪರ್ಯವಸಾನವಾಗುತ್ತದೆ. ಆದುದರಿಂದ ಇವೆಲ್ಲವುಗಳನ್ನು ನಿರಾಕರಿಸಿ ಒಂದನ್ನೇ ನಂಬಬೇಕೆಂಬ ಏಕೈಕ ನಿಷ್ಠೆಯನ್ನು ಬೋಧಿಸಿದುದು ಸರ್ವಾಧಿಕಾರವಲ್ಲ; ಸರ್ವಶಕ್ತಿ ವಿಕಾಸದ ಅಭೀಪ್ಸೆ, 'ನನ್ನೊಬ್ಬನನ್ನೇ ನಂಬಿ' ಎಂದು ಬಸವಣ್ಣ ಹೇಳಲಿಲ್ಲ. ನಿಮ್ಮನ್ನೇ ನಂಬಿ, ನಿಮ್ಮ ಅಂತರಂಗವೇ ಪರಮ ಪ್ರಮಾಣ' ಎಂದು ಅಂತರಂಗದ ಅವಲೋಕದ ಕಡೆಗೆ ತಿರುಗಿಸಿದ. ಆದುದರಿಂದ ಇದು ಸರ್ವಾಧಿಕಾರವಲ್ಲ, ಪುರೋಹಿತಶಾಹಿಯ ಸರ್ವಾಧಿಕಾರದ ವಿಕೇಂದ್ರೀಕರಣ, ಸಾಮಾಜಿಕ ಸೌಲಭ್ಯಗಳ ಆರಾಧನೆ ಮತ್ತು ಉಪಾಸನೆಗಳ ಸಾಮಾಜೀಕರಣ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಮಾತೆಂದರೆ ಶೋಷಣೆಯನ್ನು ಪರಾವಲಂಬನೆಯನ್ನು ತೊಡೆದುಹಾಕಿ

ಸರ್ವಸಮಾನತೆಯ ಆಧಾರದ ಮೇಲೆ ಎಲ್ಲರ ವಿಕಾಸಕ್ಕೆ ಕಾರಣವಾಗುವ ಮುಕ್ತ ಸಮಾಜದ ರಚನೆಗಾಗಿ ಶರಣರು ಹೋರಾಡಿದುದು; ಮತ್ತು ಅದನ್ನು ಸಾಧ್ಯವನ್ನಾಗಿ ಮಾಡಿ ತೋರಿಸಿದುದು. ಈ ಯುಗದಲ್ಲಿಯೂ ಸಾಧ್ಯವಾಗದೇ ಇರುವಷ್ಟರಮಟ್ಟಿಗೆ ಶರಣರ ಆ ಚಳುವಳಿ ಸಾಮಾಜಿಕ ಪರಿವರ್ತನೆಯನ್ನು ತಂದಿತು. ವರ್ಣವ್ಯವಸ್ಥೆಯನ್ನು ಮುರಿದು ಮುಂದುವರಿಯಿತು.

ಇದನ್ನು ಸ್ಪಷ್ಟಪಡಿಸುವುದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಇದನ್ನು ಈಗಾಗಲೇ ಒಂದೆರಡು ಕಡೆಗಳಲ್ಲಿ ದಾಖಲುಗೊಳಿಸಿದ್ದೇನೆ. ಇಲ್ಲಿ ಇನ್ನೊಮ್ಮೆ ಅದನ್ನು ಹೇಳುವುದು ಅಪ್ರಸ್ತುತವಾಗಲಾರದು. ನಾಡಿನ ಮಹಾಕವಿ ಕುವೆಂಪು ಅವರ ವಿಚಾರಶೀಲ ನಿಲುವನ್ನೂ, ವಿಶ್ವಮಾನವ ಪ್ರಜ್ಞೆಯನ್ನು ರೂಢಿಸುವ ಅವರ ಕಳಕಳಿಯನ್ನು, ಅವರ ಭಾಷಣಗಳನ್ನು ಓದಿದವರೆಲ್ಲಾ ಬಲ್ಲರು. ಒಮ್ಮೆ ಕೆಲವು ವರ್ಷಗಳ ಹಿಂದೆ, ಅವರ ಬಳಿಗೆ ವಿಶ್ವ ಹಿಂದೂ ಪರಿಷತ್ತಿನ ಕೆಲವು ಮುಖಂಡರು ಬಂದರು. ವಿಶ್ವ ಹಿಂದೂ ಪರಿಷತ್ತಿಗೆ ಉಪಾಧ್ಯಕ್ಷರನ್ನಾಗಿ ಕುವೆಂಪು ಅವರನ್ನು ಒಪ್ಪಿಸಬೇಕೆಂಬುದು ಅವರ ಉದ್ದೇಶವಾಗಿತ್ತು. ಅದನ್ನು ಅವರ ಬಳಿ ಹೇಳಿದರು. ಅದನ್ನು ಕೇಳಿದ ಕುವೆಂಪು ಅವರು ಕೆಲವು ಷರತ್ತುಗಳನ್ನು ಅವರ ಮುಂದಿಟ್ಟರು. ಮೊದಲನೆಯದಾಗಿ ವಿಶ್ವ ಹಿಂದೂ ಪರಿಷತ್ತು ಚತುರ್ವರ್ಣಗಳನ್ನು ಅಸ್ಪೃಶ್ಯತೆಯನ್ನು ಒಪ್ಪುವುದಿಲ್ಲ ಎಂಬುದನ್ನು ಸಂದಿಗ್ಧತೆಗೆ ಅವಕಾಶವಿಲ್ಲದಂತೆ ಸ್ಪಷ್ಟವಾಗಿ ಘೋಷಿಸಬೇಕು; ಮತ್ತು ಅವುಗಳನ್ನು ನಿರ್ಮೂಲ ಮಾಡಲು ತೀವ್ರವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. 'ಹಿಂದೂಗಳೆಲ್ಲರೂ ಸರ್ವ ಸಮಾನರು' ಎಂದು ಸಾರಬೇಕು. ಒಬ್ಬ ಅಸ್ಪೃಶ್ಯನು ಗುಣದಿಂದ ಯೋಗ್ಯನಾದರೆ ಉತ್ತಮರಿಗೆ ಆತನು ಎಲ್ಲ ರೀತಿಯಿಂದಲೂ ಸರಿಸಮಾನವಾಗಬೇಕು. ಹಿಂದೂಗಳ ಯಾವುದೇ ಮಠಕ್ಕೆ ಒಬ್ಬ ಅಸ್ಪೃಶ್ಯನನ್ನು, ಅವರು ಆ ಮಟ್ಟಕ್ಕೆ ಬೆಳೆದರೆ, ಸ್ವಾಮಿಯನ್ನಾಗಿ ಮಾಡುವುದು ಸಾಧ್ಯವಾಗಬೇಕು. ಇದನ್ನು ತಾತ್ತ್ವಿಕವಾಗಿಯಾದರೂ ಒಪ್ಪಿಕೊಳ್ಳಬೇಕು. ಈ ಕೂಡಲೇ ಇದನ್ನು ಕಾರ್ಯಗತಗೊಳಿಸಿ ಎಂದು ಕುವೆಂಪು ಹೇಳಲಿಲ್ಲ. ತಮ್ಮ ಯೋಗ್ಯತೆಯಿಂದ ಯಾರಾದರೂ ಆ ಮಟ್ಟಕ್ಕೆ ಬಂದರೆ ಅಸ್ಪೃಶ್ಯರೂ ಹಿಂದೂ ಮಠಗಳಿಗೆ ಸ್ವಾಮಿಗಳಾಗಬಲ್ಲರು ಎಂದು ತಾತ್ತ್ವಿಕವಾಗಿ ಘೋಷಿಸಿದರೆ ಸಾಕು – ಎಂದು ಅವರು ಹೇಳಿದರು. ಆದರೆ ಈ ಮಾತುಗಳನ್ನು ಕೇಳುತ್ತಿದ್ದ ಆ ಮುಖಂಡರು ಒಳಗೊಳಗೆ ಬೆವತಿರಬೇಕು. ತಾವು ಮತ್ತೆ ಬರುವುದಾಗಿ ಏನೇನೋ ಸಬೂಬುಗಳನ್ನು ಹೇಳಿ ಹೋದ ಅವರು ಕುವೆಂಪು ಅವರ ಮನೆಯ ಕಡೆ ಮತ್ತೆ ತಲೆಹಾಕಲಿಲ್ಲ.

ಈ ಇಪ್ಪತ್ತನೇ ಶತಮಾನದಲ್ಲಿ ಇದು ನಮ್ಮ ಸ್ಥಿತಿ. ವರ್ಣವ್ಯವಸ್ಥೆಯ ಸಂಪೂರ್ಣ ನಿರ್ಮೂಲನಕ್ಕೆ ಇನ್ನೂ ನಾವು ಸಿದ್ಧರಿಲ್ಲ. ಆದರೆ ಅದನ್ನು ಈಗ ಯಾರೂ ಉಳಿಸಿಕೊಳ್ಳಲಾರರೆಂಬ ಮಾತು ಬೇರೆ, ಆಧುನಿಕ ಯುಗ ಪರಿಸರವೇ ಅದನ್ನು

ತೆಗೆದುಹಾಕುತ್ತದೆ. ಅಂತಹ ಈ ಯುಗದಲ್ಲಿಯೂ ನಾವು ಒಬ್ಬ ಹರಿಜನ, ಮಠದ ಸ್ವಾಮಿಯಾಗಬಲ್ಲನೆಂಬುದನ್ನು ತಾತ್ತ್ವಿಕವಾಗಿಯಾದರೂ ಒಪ್ಪಿಕೊಳ್ಳುವುದಕ್ಕೆ ಸಿದ್ಧರಿಲ್ಲ. ಆದರೆ 900 ವರ್ಷಗಳ ಹಿಂದೆ ಶರಣರು ತಾತ್ತ್ವಿಕವಾಗಿಯಲ್ಲ, ಪ್ರಾಯೋಗಿಕವಾಗಿಯೂ ಸಾಧಿಸಿ ತೋರಿಸಿದುದನ್ನು ನೆನೆದರೆ ಅವರ ಆ ಚಳುವಳಿಯ ಮಹತ್ವ ಮನದಟ್ಟಾಗುತ್ತದೆ. ಉರಿಲಿಂಗದೇವ ಮತ್ತು ಉರಿಲಿಂಗಪೆದ್ದಿಯ ಕಥೆಯನ್ನು ಸ್ಮರಿಸಿಕೊಳ್ಳಬಹುದು. ಉರಿಲಿಂಗದೇವ ಕಾಂಧಾರದಲ್ಲಿ ಒಂದು ಮಠಕ್ಕೆ ಸ್ವಾಮಿಯಾಗಿದ್ದವನು. ಅನಿರೀಕ್ಷಿತವಾದ ಒಂದು ಘಟನೆ ಒಮ್ಮೆ ಸಂಭವಿಸುತ್ತದೆ. ಪೆದ್ದಣ್ಣ ಎಂಬುವವನೊಬ್ಬ ಆ ಭಾಗದಲ್ಲಿ ಕಳ್ಳತನದಿಂದ ಜೀವನ ಮಾಡುತ್ತಿದ್ದವನು. ಆತನ ಹೆಂಡತಿ ಕಾಳವ್ವೆ ಇಬ್ಬರೂ ಅಸ್ಪೃಶ್ಯ ದಂಪತಿಗಳು. ಅವಕಾಶ ಸಿಕ್ಕಾಗ ಕಳ್ಳತನ ಮಾಡುತ್ತ ಹೇಗೋ ಜೀವನವನ್ನು ಸಾಧಿಸುತ್ತಿದ್ದನು. ಪೆದ್ದಣ್ಣ, ಒಮ್ಮೆ ಉರಿಲಿಂಗದೇವರು ತಮ್ಮ ಶಿಷ್ಯನೊಬ್ಬನಿಗೆ ದೀಕ್ಷೆಯನ್ನು ಕೊಡುವ ಕಾರ್ಯವನ್ನಿಟ್ಟಿಕೊಂಡಿದ್ದರು. ಅದಕ್ಕಾಗಿ ಆ ಭಕ್ತ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದ. ಅದನ್ನು ಹೇಗೋ ಹೊಂಚುಹಾಕಿದ ಪೆದ್ದಣ್ಣ ಅದೆಲ್ಲವನ್ನು ಕದಿಯುವ ಉದ್ದೇಶದಿಂದ ಯಾರೂ ಅರಿಯದಂತೆ ಆ ಕೋಣೆಯನ್ನು ಪ್ರವೇಶಿಸಿದ, ಆದರೆ ಆತನಿಗೆ ಹೊರಹೋಗಲು ಅವಕಾಶವೇ ಆಗಲಿಲ್ಲ. ಗುರುಗಳು, ಅವರನ್ನು ಹಿಂಬಾಲಿಸಿ ಶಿಷ್ಯ, ಎಲ್ಲರೂ ಕೋಣೆಯನ್ನು ಪ್ರವೇಶಿಸಿದರು. ಮುಂಗಾಣದ ಪೆದ್ದಣ್ಣ ಮೇಲಕ್ಕೆ ಹಾರಿ ಆ ಕೋಣೆಯ ಅಟ್ಟದ ಮೇಲೆ ಅವಿತುಕೊಂಡು ಅಲ್ಲಿಗೆ ದೀಕ್ಷಾ ವಿಧಿಗಳೆಲ್ಲಾ ಸ್ಪಷ್ಟವಾಗಿ ಕಾಣುವಂತಿತ್ತು. ದೀಕ್ಷೆಯ ಕಾರ್ಯ ಪ್ರಾರಂಭವಾಯಿತು. ಉಪಾಸನೆಯ ಕ್ರಮವನ್ನೆಲ್ಲಾ ಹೇಳಿ ಆತ ಶಿಷ್ಯನಿಗೆ ಲಿಂಗವನ್ನು ಅನುಗ್ರಹಿಸಿದ. ಇದನ್ನೆಲ್ಲಾ ಮೇಲೆ ಕುಳಿತು ನೋಡುತ್ತಿದ್ದ ಪೆದ್ದಣ್ಣನ ಮನಸ್ಸಿನ ಮೇಲೆ ತುಂಬಾ ಪರಿಣಾಮ ಬೀರಿತು. ಅಲ್ಲಿಂದ ನೇರವಾಗಿ ಇಳಿದು ಬಂದು ಉರಿಲಿಂಗದೇವರಿಗೆ ಶರಣಾಗತನಾದ. ತನ್ನ ತಪ್ಪೆಲ್ಲವನ್ನೂ ಒಪ್ಪಿಕೊಂಡು ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದ. ತನಗೂ ಲಿಂಗದೀಕ್ಷೆ ಕೊಡುವಂತೆ ಪ್ರಾರ್ಥಿಸಿದ. ಉರಿಲಿಂಗದೇವ ಸುಲಭವಾಗಿ ಒಪ್ಪಿಕೊಳ್ಳಲಿಲ್ಲ. ಕೆಲಕಾಲ ಆತನನ್ನು ಪರೀಕ್ಷಿಸಿದ. ಆತನ ನಿಷ್ಠೆಯನ್ನು ಮೆಚ್ಚಿದ. ಕಲ್ಲನ್ನು ಕೊಟ್ಟನೆಂದೂ ಅದೇ ಲಿಂಗವಾಯಿತೆಂದೂ ಕತೆ ಬರುತ್ತದೆ. ಆದರೆ ಕೊನೆಯಲ್ಲಿ ಪೆದ್ದಣ್ಣ ಮತ್ತು ಆತನ ಹೆಂಡತಿ ಕಾಳವ್ವೆ ಇಬ್ಬರೂ ಲಿಂಗದೀಕ್ಷೆ ಪಡೆದರೆಂಬುದು ಸ್ಪಷ್ಟ. ಆ ದಂಪತಿಗಳಲ್ಲಿ ಸುಪ್ತವಾಗಿದ್ದ ಯಾವ ಸಂಸ್ಕಾರವೋ ಜಾಗೃತವಾಗಿ ಇಬ್ಬರೂ ಒಳ್ಳೆಯ ಸಾಧಕರಾಗಿ ಸಾಧನೆಯಲ್ಲಿ ತುಂಬಾ ಮುಂದುವರಿದರು. ಮುಂದೆ ಉರಿಲಿಂಗದೇವ ತನ್ನ ಮಠಕ್ಕೆ ಉತ್ತರಾಧಿಕಾರಿಯನ್ನು ಆರಿಸುವ ಪ್ರಶ್ನೆ ಬಂದಾಗ, ಆತನ ದೃಷ್ಟಿ ಪೆದ್ದಣ್ಣನ ಕಡೆ ತಿರುಗುತ್ತದೆ. ಒಬ್ಬ ಅಸ್ಪೃಶ್ಯ ಗೃಹಸ್ಥನನ್ನು ಮಠಾಧೀಶನನ್ನಾಗಿ ಮಾಡಬಹುದೇ ಎಂಬ ಪ್ರಶ್ನೆ ಬರುತ್ತದೆ. ಯೋಗ್ಯತೆಯೊಂದನ್ನೇ ಒರೆಗಲ್ಲನ್ನಾಗಿಟ್ಟುಕೊಂಡಿರುವ ಶರಣಮಾರ್ಗಕ್ಕೆ ಇದಾವುದೂ ಅಡ್ಡಿ ಬರುವುದಿಲ್ಲ. ಆತ ಉರಿಲಿಂಗದೇವರ ಉತ್ತರಾಧಿಕಾರಿಯಾಗಿ

ಉರಿಲಿಂಗಪೆದ್ದಿ ಎಂಬ ಹೆಸರಿನಿಂದ ಸ್ವಾಮಿಯಾಗುತ್ತಾನೆ. ಈ ಯುಗದಲ್ಲಿಯೂ ತಾತ್ವಿಕವಾಗಿ ಕೂಡ ಒಪ್ಪಲಾಗದ ಘಟನೆ ಆ ಕಾಲದಲ್ಲಿಯೇ ವಾಸ್ತವ ಸತ್ಯವಾಗಿ ನೆರವೇರಿಹೋಗುತ್ತದೆ. ಮುಂದೆ ಪ್ರತಿಗಾಮಿ ಶಕ್ತಿಗಳು ಆ ಮಠಕ್ಕೆ ಬೆಂಕಿ ಹಚ್ಚಿದರು ಇತ್ಯಾದಿ ಮಾತುಗಳು ಬರುತ್ತವೆ. ಅದೇನೇ ಇದ್ದರೂ ಶರಣರ ವಚನ ಚಳುವಳಿ ಯಿಂದಾದ ಸಾಮಾಜಿಕ ಕ್ರಾಂತಿಯ ಸ್ವರೂಪವೇನೆಂಬುದು ಇದರಿಂದ ಮನದಟ್ಟಾಗುತ್ತದೆ. ಇಷ್ಟಲಿಂಗ ಪರಿಕಲ್ಪನೆಯು ಸಾಮಾಜಿಕ ಸಮಾನತೆಗೆ ನಾಂದಿ ಹಾಡಿದ ಕೀರ್ತಿ ಉರಿಲಿಂಗಪೆದ್ದಿಗಳ ಈ ಘಟನೆಯಿಂದ ಸಾಧಿತವಾಯಿತು ಎಂಬುದನ್ನು ಗಮನಿಸಬೇಕು.

ಕೆಲವು ವರ್ಷಗಳ ಹಿಂದೆ ಚಿತ್ರದುರ್ಗ ಮುರುಘಾಮಠದ ಪೂಜ್ಯ ಡಾ. ಮುರುಘಾ ಶರಣರು 'ಮಂಸಾಹಾರಿಗಳಿಗೂ ಬಸವಧರ್ಮದಲ್ಲಿ ಪ್ರವೇಶವಿದೆ' ಎಂಬ ಹೇಳಿಕೆಯನ್ನು ನೀಡಿದಾಗ, ಇಡೀ ನಾಡಿನಲ್ಲಿ ಸಂಚಲನವುಂಟಾಯಿತು. ಇದಕ್ಕೆ ಪೂರಕವಾದ ಒಂದು ಘಟನೆ ಮಹಾರಾಷ್ಟ್ರದಲ್ಲಿ ಜರುಗಿರುವುದು ಗಮನಿಸುವ ಅಂಶವಾಗಿದೆ.

ಪ್ರಾಚೀನ ಕನ್ನಡ ಸಂಸ್ಕೃತಿಯ ಬೇರುಗಳಿಂದ ಪೋಷಿತವಾದ ಮಹಾರಾಷ್ಟ್ರ ಆರ್ಯಾವರ್ತವಾದರೂ ದ್ರಾವಿಡ ಸಂಸ್ಕೃತಿಯ ಸಮನ್ವಯವನ್ನು ಕಾಪಾಡಿಕೊಂಡು ಬಂದಿರುವುದು ಗಮನಿಸಬೇಕಾದ ಅಂಶ. ಮಹಾರಾಷ್ಟ್ರದಲ್ಲಿ ಸುಮಾರು 50 ಲಕ್ಷ ಲಿಂಗಾಯತ ಸಮುದಾಯ ಇದೆ. ವಿದರ್ಭ ಮಹಾರಾಷ್ಟ್ರದಲ್ಲಂತೂ ಪೂರ್ಣಪ್ರಮಾಣದ ಲಿಂಗಾಯತರಿದ್ದಾರೆ. ಆದರೆ ಕೊಲ್ಲಾಪುರ ಜಿಲ್ಲೆಯಲ್ಲಿ ಒಂದು ಸಮುದಾಯವಿದೆ. ಅವರನ್ನು "ತಿಳಿ ಆರ್ಯರು" ಎಂದು ಕರೆಯುತ್ತಾರೆ. ಅವರು ಲಿಂಗಾಯತ ಸಂಸ್ಕೃತಿಯನ್ನು ಅನುಕರಣೆ ಮಾಡುತ್ತಾರೆ. ಅವರ ಬಹಳಷ್ಟು ಆಚರಣೆಗಳೂ ಲಿಂಗಾಯತ ಆಚರಣೆಗಳೇ ಆಗಿವೆ.

ಕೊಲ್ಲಾಪೂರ ಸಂಸ್ಥಾನದ ಶಾಹೂ ಮಹಾರಾಜರು ಸುಮಾರು 8 ದಶಕಗಳ ಹಿಂದೆ ಇಡೀ ದೇಶದಲ್ಲಿ ಪ್ರಥಮ ಎನ್ನುವಂತೆ ಬ್ರಾಹ್ಮಣೇತರ ಚಳವಳಿಯ ಮುಂಚೂಣಿ ಯಲ್ಲಿದ್ದವರು. ಬ್ರಾಹ್ಮಣೇತರ ಚಳವಳಿಗೆ ಎಲ್ಲ ರೀತಿಯ ಸ್ಫೂರ್ತಿ–ಚೈತನ್ಯವನ್ನು ನೀಡಿದವರು. ಹೀಗಾಗಿ ಕರ್ನಾಟಕದಲ್ಲಿ ಅಂದು ಸರ್ ಸಿದ್ಧಪ್ಪ ಕಂಬಳಿ ಅವರಂಥ ಬ್ರಾಹ್ಮಣೇತರ ನಾಯಕರಿಗೂ ಅವರಿಗೂ ಹತ್ತಿರದ ಸಂಪರ್ಕ ಉಂಟಾಗಿತ್ತು. ಆಶ್ಚರ್ಯ ವೆಂದರೆ 1924ರಲ್ಲಿ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನ ಕಾಲಕ್ಕೆ ಬೆಳಗಾವಿಯಲ್ಲಿ ವಿವಿಧ ರೀತಿಯ 20 ಅಧಿವೇಶನಗಳು ಜರುಗಿದವು. ಅವುಗಳಲ್ಲಿ ಬ್ರಾಹ್ಮಣೇತರ ಪರಿಷತ್ತಿನ ಅಧಿವೇಶನ ಕೂಡ ಒಂದು. ಅದರ ಅಧ್ಯಕ್ಷತೆಯನ್ನು ವಹಿಸಿದ್ದವರು ಸರ್ ಸಿದ್ಧಪ್ಪ ಕಂಬಳಿ. ಆದ್ದರಿಂದ ಶಾಹೂ ಮಹಾರಾಜರು ಮತ್ತು ಕಂಬಳಿಯವರು ಬ್ರಾಹ್ಮಣೇತರ ಚಳವಳಿಗೆ ಮುಂಬೈ ಪ್ರಾಂತ್ಯದಲ್ಲಿ ಬಹು ದೊಡ್ಡ ನೇತಾರರಾಗಿದ್ದರು.

ಕಂಬಳಿಯವರ ಸ್ನೇಹ–ಸಂಪರ್ಕ ಹಾಗೂ ಕೊಲ್ಲಾಪುರದಲ್ಲಿ ಆಗಲೇ ಚಿತ್ರದುರ್ಗದ ಜಯದೇವ ಜಗದ್ಗುರುಗಳು ಒಂದು ಮಠವನ್ನು ಸ್ಥಾಪಿಸಿದ್ದರು. (ಈಗ ಅದು ಲಿಂಗಾಯತ ಬೋರ್ಡಿಂಗ್ ಎಂದು ಖ್ಯಾತವಾಗಿದೆ. ಅದು ಜಗದ್ಗುರುಗಳ ಖಾಸಾಮಠವೆಂದು ಖ್ಯಾತವಾಗಿತ್ತು) ಅದರ ಪ್ರಭಾವದಿಂದ ಶಾಹೂ ಮಹಾರಾಜರಿಗೆ ಲಿಂಗಾಯತ ಧರ್ಮದ ಬಗ್ಗೆ ಕುತೂಹಲ, ಆಸಕ್ತಿ ಉಂಟಾಯಿತು. ಜಯದೇವ ಜಗದ್ಗುರುಗಳವರ ಪ್ರೇರಣೆಯಿಂದ ಶಾಹೂ ಮಹಾರಾಜರು "ಲಿಂಗ"ಧಾರಣೆ ಮಾಡಿಕೊಳ್ಳಲು ಮನಸ್ಸು ಮಾಡಿದರು. ಲಿಂಗಧಾರಣೆ ದಿನಾಂಕವು ನಿಶ್ಚಿತವಾಗಿತ್ತು. ಇದರಿಂದ ಸಹಜವಾಗಿಯೇ ಅವರ ಸಾವಿರಾರು ಅಭಿಮಾನಿಗಳು ಲಿಂಗ ಕಟ್ಟಿಕೊಳ್ಳಲು ಸಿದ್ಧರಾದರು. ಎಲ್ಲ ಕಡೆಯೂ ವ್ಯಾಪಕ ಪ್ರಚಾರವಾಗಿತ್ತು. ಆದರೆ ಶಾಹೂ ಮಹಾರಾಜರ ಕೆಲವು ಹಿತೈಷಿಗಳು ಅವರಿಗೆ ಲಿಂಗ ಕಟ್ಟಿಕೊಳ್ಳದಂತೆ ಕಿವಿಮಾತು ಹೇಳಿದರು. "ನೀವು ಲಿಂಗ ಕಟ್ಟಿಕೊಂಡು ಲಿಂಗಾಯತರಾದರೆ, ಮಾಂಸ ತಿನ್ನುವಂತಿಲ್ಲ. ಮಾಂಸ ತಿನ್ನುವುದಾದರೆ ಲಿಂಗ ಕಟ್ಟಿಕೊಳ್ಳುವಂತಿಲ್ಲ. ಮಾಂಸಾಹಾರ ಸೇವನೆಯೇ ತಮ್ಮ ಮೂಲ ಆಹಾರ, ಅದನ್ನೇ ತಾವು ಬಿಟ್ಟರೆ ತಮ್ಮ ಕ್ಷಾತ್ರತೇಜ ಕಡಿಮೆಯಾಗಬಹುದು" ಎಂದೆಲ್ಲ ಹೇಳಿದಾಗ, ಶಾಹು ಮಹಾರಾಜರು ಲಿಂಗ ಕಟ್ಟಿಕೊಳ್ಳುವ ನಿರ್ಧಾರದಿಂದ ಹಿಂದೆ ಸರಿದರು.

ಆದರೆ ಅಷ್ಟರಲ್ಲಿ ನೂರಾರು ಗ್ರಾಮಗಳಿಗೆ ಮಹಾರಾಜರು ಲಿಂಗ ಕಟ್ಟಿಕೊಳ್ಳುವ ವಿಷಯ ತಿಳಿದಿತ್ತು ಮತ್ತು ಅವರೂ ಲಿಂಗ ಕಟ್ಟಿಕೊಳ್ಳಲು ತಯಾರಾಗಿದ್ದರು. ಹೀಗಾಗಿ ನಿಶ್ಚಿತವಾದ ದಿನಾಂಕದಂದು ಸಾವಿರಾರು ಮರಾಠಿಗರು ಲಿಂಗ ಕಟ್ಟಿಕೊಂಡರು. ಅಂದಿನಿಂದ ಅವರು ಮರಾಠಿ ಸಂಸ್ಕೃತಿಯಿಂದ ಹೊರಗಾದರು. ಅವರನ್ನು "ತಿಳಿ ಆರ್ಯರು" ಎಂದು ಉಳಿದವರು ಕರೆಯತೊಡಗಿದರು. ಅತ್ತ ಮರಾಠಿಗರು ಆಗದೆ, ಇತ್ತ ಲಿಂಗಾಯತರೂ ಆಗದೆ ಅಯೋಮಯ ಸ್ಥಿತಿಯಲ್ಲಿ ಅವರಿಂದು ಬದುಕುತ್ತಿದ್ದಾರೆ. ಮರಾಠಿಗರು ಅವರನ್ನು ಪೂರ್ಣಪ್ರಮಾಣದಲ್ಲಿ ಮರಾಠಿ ಸಂಸ್ಕೃತಿಯಲ್ಲಿ ಸೇರಿಸಿಕೊಳ್ಳುತ್ತಿಲ್ಲ. ಇತ್ತ ಲಿಂಗಾಯತರೂ ಅವರನ್ನು ತಮ್ಮ ಪ್ರವಾಹದಲ್ಲಿ ಸೇರಿಸಿಕೊಳ್ಳದೆ ದೂರವಿಟ್ಟಿದ್ದಾರೆ. ಇಷ್ಟಾಗಿಯೂ ಒಂದು ವಿಶೇಷ ಸಂಗತಿಯೆಂದರೆ ಅವರು ಮಾಂಸಾಹಾರದಿಂದ ವಿಮುಖರಾಗಿದ್ದಾರೆ.

1986ರಲ್ಲಿ ನಾಗನೂರು ಶ್ರೀ ಶಿವಬಸವ ಸ್ವಾಮಿಗಳ ಕಲ್ಯಾಣ ಕೇಂದ್ರ, ಬೆಂಗಳೂರು ಇವರ ಆಶ್ರಯದಲ್ಲಿ ಒಂದು ವಿಚಾರಸಂಕಿರಣ ಏರ್ಪಟ್ಟಿತ್ತು. ಈ ಸಂದರ್ಭದಲ್ಲಿ ಮಂಡನೆಯಾದ ಪ್ರಬಂಧಗಳನ್ನು ಡಾ. ಸಾ.ಶಿ. ಮರುಳಯ್ಯ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಗದುಗಿನ ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ ಆಶೀರ್ವಚನ ಪ್ರಕಟವಾಗಿದೆ. ಆ ಭಾಷಣದಲ್ಲಿ ಶ್ರೀಗಳು "ಲಿಂಗಾಯತ ಧರ್ಮ ಆಹಾರ ಸಂಸ್ಕೃತಿ ಕಾರಣವಾಗಿ ಇಂದು ಹಿಂದುಳಿದಿದೆ.

ಹಿರಿಯ ಚಿಂತಕ ಡಾ. ದೇ. ಜವರೇಗೌಡ ಅವರು ಒಮ್ಮೆ ನಮ್ಮನ್ನು ಭೇಟಿಯಾಗಿ, ದಕ್ಷಿಣ ಕರ್ನಾಟಕದ ಲಕ್ಷಾಂತರ ಜನ ಲಿಂಗಾಯತ ಧರ್ಮ ಸ್ವೀಕರಿಸಲು ಸಿದ್ಧರಿದ್ದಾರೆ; ಆದರೆ ಅವರ ಆಹಾರ ಸಂಸ್ಕೃತಿಗೆ ತಾವು ಕಡಿವಾಣ ಹಾಕಬಾರದು ಎಂದು ಹೇಳಿದರು. ಮಾಂಸಾಹಾರ ಸೇವನೆಗೆ ತಾವು ಒಪ್ಪಿಗೆ ನೀಡಿದರೆ, ಲಕ್ಷಾಂತರ ಜನ ಲಿಂಗಾಯತಧರ್ಮವನ್ನು ಸ್ವೀಕರಿಸಲು ತುದಿಗಾಲ ಮೇಲೆ ನಿಂತಿದ್ದಾರೆ' ಎಂದು ಹೇಳಿದಾಗ, ನಮ್ಮ ಸಮಾಜದ ಹಿರಿಯರು ಈ ಕುರಿತು ಗಂಭೀರವಾಗಿ ಆಲೋಚಿಸಬೇಕು" ಎಂದು ಮೂವತ್ಮೂರು ವರುಷಗಳ ಹಿಂದೆ ಹೇಳಿದ ಮಾತುಗಳು ಇಂದಿಗೂ ಅಷ್ಟೇ ಪ್ರಸ್ತುತವಾಗಿವೆ ಎಂಬುದನ್ನು ಗಮನಿಸಬೇಕು.

ಇಂಥದೇ ಮತ್ತೊಂದು ಸಮಾಜ ಅಯೋಮಯವಾಗಿ ಕರ್ನಾಟಕದಲ್ಲಿ ಬದುಕುತ್ತಿದೆ. ಅದು ಕಲಬುರ್ಗಿ–ಬೀದರ ಜಿಲ್ಲೆಯ 'ಉರಿಲಿಂಗಪೆದ್ದಿ' ಸಮುದಾಯದ ಅಸ್ಪೃಶ್ಯ ಲಿಂಗಾಯತರು. ಡಾ. ಎಂ.ಎಂ. ಕಲಬುರ್ಗಿ ಅವರ ಮಾರ್ಗದರ್ಶನದಲ್ಲಿ ಡಾ. ಸಾವುಕಾರ ಕಾಂಬಳೆ ಅವರು ಈ ಸಮುದಾಯವನ್ನು ಕುರಿತು ಪಿಎಚ್.ಡಿ. ಸಂಶೋಧನೆ ಮಾಡಿದ್ದಾರೆ. 'ಅಸ್ಪೃಶ್ಯ ಲಿಂಗಾಯತರು : ಒಂದು ಅಧ್ಯಯನ' ಎಂಬ ಮಹಾಪ್ರಬಂಧ ಗದಗ ತೋಂಟದಾರ್ಯ ಮಠದಿಂದ ಪ್ರಕಟವಾಗಿದೆ. (ದ್ವಿತೀಯ ಮುದ್ರಣ ಚಿತ್ರದುರ್ಗ ಮುರುಘಾಮಠದ ಪೂಜ್ಯ ಡಾ. ಶಿವಮೂರ್ತಿ ಮುರುಘಾ ಶರಣರ ಪೀಠಾರೋಹಣ ರಜತ ಮಹೋತ್ಸವ ಸಮಿತಿಯಿಂದ ಪ್ರಕಟಗೊಂಡಿದೆ.) ಬೀದರ ಜಿಲ್ಲೆಯಲ್ಲಿ ಅನೇಕ ಉರಿಲಿಂಗಪೆದ್ದಿ ಸಂಪ್ರದಾಯದ ಮಠಗಳಿವೆ. ಆ ಮಠದ ಅನುಯಾಯಿಗಳು ಇತ್ತ ಪೂರ್ಣಪ್ರಮಾಣದಲ್ಲಿ ಲಿಂಗಾಯತರೂ ಆಗದೆ, ಅತ್ತ ಪೂರ್ಣ ದಲಿತರೂ ಆಗದೇ ಅಯೋಮಯ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ ಎಂಬುದನ್ನು ಈ ಕೃತಿಯ ಸಂಶೋಧನೆಯಿಂದ ತಿಳಿಯಬಹುದಾಗಿದೆ.

ಬಸವಣ್ಣನವರ ತತ್ವಸಿದ್ಧಾಂತಗಳಿಗೆ ಮಾರುಹೋದ ಕಲ್ಲಿನಾಥ ಶಾಸ್ತ್ರಿಗಳು, ವಚನಗಳಲ್ಲಿ ಅಡಗಿರುವ ನೀತಿತತ್ವಗಳನ್ನು ತಮ್ಮ ಬದುಕಿನಲ್ಲಿ ಅಕ್ಷರಶಃ ಅನುಷ್ಠಾನಕ್ಕೆ ತಂದವರಾಗಿದ್ದರು. ಬಸವಪುರಾಣವನ್ನು ದ್ಯಾಂಪುರದಲ್ಲಿ ನಡೆಸಿ ದೊಡ್ಡ ಕ್ರಾಂತಿಯನ್ನೇ ಮಾಡಿದ್ದರು. ಇದರಿಂದ ಪ್ರಭಾವಿತರಾಗಿ ಅವರು ಮಾಡಿದ ಇನ್ನೊಂದು ಕಾರ್ಯವೆಂದರೆ ಅಸ್ಪೃಶ್ಯತೆಯ ನಿವಾರಣೆಗಾಗಿ ಕೆಳವರ್ಗದ ಜನಸಮುದಾಯಕ್ಕೆ ಲಿಂಗದೀಕ್ಷೆಯನ್ನು ನೀಡಿದರು. ಲಿಂಗಾಯತೇತರರಿಗೆ ಲಿಂಗದೀಕ್ಷೆ ಮಾಡಿದ ಪ್ರಕರಣ ದೊಡ್ಡ ಕೋಲಾಹಲವನ್ನೇ ಸೃಷ್ಟಿಸಿತು. ಶಾಸ್ತ್ರಿಗಳಿಗೆ ಆತ್ಮೀಯರಾದವರು ಅವರ ವಿರೋಧಿಗಳಾದರು. ಲಿಂಗಾಯತ ಸಮಾಜದವರು ಈ ಕೆಳವರ್ಗದ ಹೊಸ ಲಿಂಗಾಯತರೊಂದಿಗೆ ಬೆರೆತುಕೊಂಡರು. ಆದರೆ 'ಉಂಬಲ್ಲಿ ಉಡುವಲ್ಲಿ ಕುಲವಳಿಯಿತ್ತೆಂಬ, ಕೊಂಬಲ್ಲಿ ಕೊಡುವಲ್ಲಿ ಕುಲವನರಸುವ' ಪ್ರವೃತ್ತಿ ಹೋಗಲಿಲ್ಲ. ಇದರಿಂದ ಕಲ್ಲಿನಾಥ ಶಾಸ್ತ್ರಿಗಳು ತುಂಬ ಗಂಭೀರವಾಗಿ ಆಲೋಚಿಸಿದರು. ಈ ಹೊಸ ಬಸವ ಭಕ್ತರನ್ನು

ಲಿಂಗಾಯತರು ಒಪ್ಪಿಕೊಳ್ಳದಿದ್ದರೆ ಅವರು ಈ ಧರ್ಮ ಸೇರಿ ಏನು ಪ್ರಯೋಜನ? ಧರ್ಮಸ್ವೀಕಾರ ಸುಲಭ; ಆಚರಣೆ ತುಂಬ ಕಷ್ಟ. ಅನ್ನೋದಕಗಳನ್ನು ಮಾಡುವಂತೆ, ಶರೀರ ಸಂಬಂಧ ಮಾಡುವರೇ? ಎಂದು ಆಲೋಚಿಸಿ ಲಿಂಗದೀಕ್ಷಾ ಕಾರ್ಯವನ್ನು ನಿಲ್ಲಿಸಿಬಿಟ್ಟರು.

ಮುಧೋಳ ಮೃತ್ಯುಂಜಯ ಸ್ವಾಮಿಗಳ ಪಟ್ಟಾಭಿಷೇಕ ಕಾರ್ಯಕ್ರಮಕ್ಕೆ ಶಿ. ಶಿ. ಬಸವನಾಳರು, ಬುದ್ಧಯ್ಯ ಪುರಾಣಿಕರು ಮತ್ತು ಉತ್ತಂಗಿ ಚನ್ನಪ್ಪನವರು ಹೋಗಿದ್ದರು. ಪಟ್ಟಾಭಿಷೇಕ ಸಮಾರಂಭವನ್ನು ತುಂಬಾ ಹತ್ತಿರದಿಂದ ಉತ್ತಂಗಿಯವರು ಗಮನಿಸುತ್ತಾರೆ. 90 ವರುಷದ ಹಿರಿಯ ಸ್ವಾಮಿಗಳು, 25 ವರುಷದ ಯುವಕ ಮೃತ್ಯುಂಜಯ ಸ್ವಾಮಿಗಳವರಿಗೆ ಸಾಷ್ಟಾಂಗ ನಮಸ್ಕಾರ ಹಾಕುತ್ತಾರೆ. ಈ ಘಟನೆಯನ್ನು ಕಂಡ ಉತ್ತಂಗಿಯವರು ಹೀಗೆ ಹೇಳುತ್ತಾರೆ–'ಲಿಂಗಾಯತ ಧರ್ಮದಲ್ಲಿ ಜ್ಯೋತಿ ಮುಟ್ಟಿ ಜ್ಯೋತಿಯಾದಂತೆ, ಗುರು ಮುಟ್ಟಿ ಗುರುವಾದ ಪ್ರಕ್ರಿಯೆಯ ಸಾಮಾಜಿಕ ಸಮಾನತೆಯನ್ನು ಕಂಡೆವು. ಏಸುಕ್ರಿಸ್ತನು ತನ್ನ ಶಿಷ್ಯರ ಪಾದಪೂಜೆ ಮಾಡಿದಂತೆ, ಇಲ್ಲಿ ಗುರುವಾದವನು ಅಹಂಕಾರನಿರಸನಕ್ಕಾಗಿ ಶಿಷ್ಯನಿಗೆ ನಮಸ್ಕರಿಸುವ ಪದ್ಧತಿ ಲಿಂಗಾಯತ ಧರ್ಮದ ವೈಶಿಷ್ಟ್ಯವಾಗಿದೆ.

ಅಂದು ಪಟ್ಟಾಭಿಷೇಕ ಮುಕ್ತಾಯವಾದ ಅನಂತರ ಮಠದಲ್ಲಿಯೇ ಉಳಿದುಕೊಳ್ಳುವ ಪ್ರಸಂಗ ಬರುತ್ತದೆ. ಊಟದ ಸಮಯದಲ್ಲಿ ಬಸವನಾಳ, ಪುರಾಣಿಕರು ಮೊದಲಾದ ಲಿಂಗಾಯತ ಪ್ರತಿಷ್ಠರು ಮಠದ ಪ್ರಸಾದ ಕೋಣೆಯಲ್ಲಿ ಕುಳಿತುಕೊಳ್ಳುತ್ತಾರೆ. ಉತ್ತಂಗಿ ಚನ್ನಪ್ಪನವರನ್ನು ಹೊರಗೆ ಕೂಡ್ರಿಸುತ್ತಾರೆ. ಉತ್ತಂಗಿಯವರು ಊಟ ಮಾಡಿ ಹೊರಗೆ ಬಂದು ನಿಂತಾಗ, ಬುದ್ಧಯ್ಯ ಪುರಾಣಿಕರು ಊಟ ಮುಗಿಸಿ, ಹೊರಗೆ ನಿಂತಿದ್ದ ಉತ್ತಂಗಿಯವರನ್ನು ಕುರಿತು–'ನಾವು ಒಳಗೆ ಪ್ರಸಾದ ಮಾಡುವಾಗ, ಲಿಂಗಾಯತ ಧರ್ಮದ ಪ್ರಕಾರ, ಹರ ಹರ ಮಹಾದೇವ ಎಂದೆವು; ಕ್ರೈಸ್ತರಾದ ನೀವು ಯಾವ ಮಂತ್ರ ಪಠಿಸಿದಿರಿ?' ಎಂದು ಕೇಳುತ್ತಾರೆ. ಅದಕ್ಕೆ ಉತ್ತಂಗಿಯವರು 'ಮರಾ ಮರಾ ಮಹಾದೇವ' ಎಂದೆ ಎನ್ನುತ್ತಾರೆ. ಈ ಮಾತು ಕೇಳಿ, ಬಸವನಾಳರ–ಪುರಾಣಿಕರ ಮುಖ ಕಪ್ಪಾಗುತ್ತವೆ. ಈ ಪಂಕ್ತಿಭೇದದ ಘಟನೆ ಬನಹಟ್ಟಿಯಲ್ಲಿದ್ದ ಲಾತೂರೆ, ಸಾಬೋಜಿ, ಅಬಕಾರ ಮತ್ತು ಎಸ್.ಎಂ. ಅಂಗಡಿ ಅವರಿಗೆ ಗೊತ್ತಾಗುತ್ತದೆ. ಅವರು ಬುದ್ಧಯ್ಯ ಪುರಾಣಿಕರ ಹತ್ತಿರ ಬಂದು, ನಿನ್ನೆ ಉತ್ತಂಗಿಯವರಂಥ ಶ್ರೇಷ್ಠ ವಿದ್ವಾಂಸರನ್ನು ಊಟದ ಸಮಯದಲ್ಲಿ ಅವರು ಲಿಂಗ ಕಟ್ಟಿಲ್ಲ ಎಂಬ ಕಾರಣಕ್ಕೆ ಹೊರಗೆ ಕೂಡ್ರಿಸಿ ಊಟ ನೀಡಿದರಂತೆ, ಇದನ್ನು ನಾವು ಪ್ರತಿಭಟಿಸುತ್ತೇವೆ ಎನ್ನುತ್ತಾರೆ. ಆಗ ಬುದ್ಧಯ್ಯನವರು, ಬಸವನಾಳರು ಉತ್ತಂಗಿಯವರನ್ನು ತಮ್ಮೊಂದಿಗೆ ಮಠದ ಪ್ರಸಾದ ಕೋಣೆಗೆ ಕರೆದುಕೊಂಡು ಹೋಗಿ ಊಟ ಮಾಡುತ್ತಾರೆ. ಆಗ ಉತ್ತಂಗಿಯವರು ಪಂಕ್ತಿಭೇದ ನಿವಾರಣೆಯಾಯಿತು ಎಂದು ಸಂತೋಷಪಡುತ್ತಾರೆ.

ಧಾರವಾಡ ಮುರುಘಾಮಠದ ಮೃತ್ಯುಂಜಯ ಅಪ್ಪಗಳು ಉತ್ತಂಗಿಯವರನ್ನು ಎಷ್ಟು ಗೌರವದಿಂದ ಕಾಣುತ್ತಿದ್ದರು ಎಂದರೆ, ಉತ್ತಂಗಿಯವರು ಮಠಕ್ಕೆ ಬಂದಾಗ, ಸ್ವತಃ ಮೃತ್ಯುಂಜಯಪ್ಪಗಳು ಚಾಪೆ ಹಾಸಿ, ತಮ್ಮ ದಿಂಬನ್ನು ಅವರಿಗೆ ಆಸರೆಗೆ ಕೊಟ್ಟು, ತಾವು ಗೋಡೆಗೆ ಒರಗಿ ಕೂಡ್ರುತ್ತಿದ್ದರು. ಕಪಟರಾಳ ಕೃಷ್ಣರಾಯರಂಥ ವಿದ್ವಾಂಸರು ಅನುಭವ ಮಂಟಪವೇ ಇರಲಿಲ್ಲ; ಅದೊಂದು ಸುಳ್ಳಿನ ಕಂತೆ ಎಂದು ಹೇಳಿದಾಗ, 'ಅನುಭವ ಮಂಟಪ'ದ ಐತಿಹಾಸಿಕತೆ ಎಂಬ ಸಂಶೋಧನಾತ್ಮಕ ಕೃತಿಯನ್ನು ಬರೆದವರು ಉತ್ತಂಗಿಯವರು, ಸಿದ್ಧರಾಮನು ಲಿಂಗಾಯತನಲ್ಲ, ಆತ ಶೈವ ಎಂದು ಡಿ.ಎಲ್.ಎನ್. ಅವರು ಹೇಳಿದಾಗ, ಸಿದ್ಧರಾಮನು ಶಿವಯೋಗಿ ಮೇಲಾಗಿ ಶೂನ್ಯಪೀಠದ ಅಧ್ಯಕ್ಷನೂ ಆಗಿದ್ದನೆಂದು ಸಂಶೋಧಿಸಿ, 'ಸಿದ್ಧರಾಮ ಸಾಹಿತ್ಯ ಸಂಗ್ರಹ' ಪ್ರಕಟಿಸಿದವರು ಉತ್ತಂಗಿಯವರು. ಯಾವ ಲಿಂಗಾಯತ ವಿದ್ವಾಂಸರೂ ಈ ನಿಟ್ಟಿನಲ್ಲಿ ಕೆಲಸ ಮಾಡದ ಸಂದರ್ಭದಲ್ಲಿ ಉತ್ತಂಗಿಯವರು ಮಾಡಿದ ಈ ಸಂಶೋಧನೆ ಮೃತ್ಯುಂಜಯಪ್ಪಗಳ ಮನಸ್ಸಿನ ಆಳದಲ್ಲಿ ಬೇರೂರಿತ್ತು. ಆ ಕಾರಣಕ್ಕಾಗಿ ಅವರನ್ನು ತುಂಬ ಗೌರವದಿಂದ ಕಾಣುತ್ತಿದ್ದರು. ಇಂಥ ಉತ್ತಂಗಿಯವರಿಗೆ ಮುಧೋಳ ವಿರಕ್ತಮಠದಲ್ಲಿ ಲಿಂಗ ಇಲ್ಲ ಎಂಬ ಕಾರಣಕ್ಕಾಗಿ ಅವಮಾನ ಆಗಿದ್ದು ವಿಷಾದ ಪಡುವ ಸಂಗತಿಯಾಗಿದೆ.

ಆರ್ಯ ಸಮಾಜದ ಪ್ರಚಾರಕರಾಗಿದ್ದ ಬನ್ಸೀಲಾಲ ಅವರು ಒಂದು ಸಾರ್ವಜನಿಕ ಭಾಷಣದಲ್ಲಿ 'ಒಂದು ವರುಷದ ಅವಧಿಯೊಳಗೆ ಒಂದು ಸಾವಿರ ಲಿಂಗಗಳನ್ನು ತೆಗೆಸಿ ಅವರಿಗೆ ಯಜ್ಞೋಪವೀತ ತೊಡಿಸುವೆ' ಎಂದು ಪ್ರತಿಜ್ಞೆ ಮಾಡಿದ್ದರು.

ಮಹರ್ಷಿ ದಯಾನಂದ ಸರಸ್ವತಿ ಅವರು ಆರ್ಯ ಸಮಾಜವನ್ನು ಸ್ಥಾಪಿಸಿದ ಉದ್ದೇಶ–ಅನಿವಾರ್ಯ ಕಾರಣಗಳಿಂದ ಪರಧರ್ಮಕ್ಕೆ ಮತಾಂತರವಾದ ಹಿಂದೂಗಳನ್ನು ಮತ್ತೆ ಹಿಂದೂಧರ್ಮಕ್ಕೆ ಬರುವಂತೆ ಮಾಡಲು ದೀಕ್ಷೆ ನೀಡುವುದಾಗಿತ್ತು. ಆರ್ಯ ಸಮಾಜದ ಮೂಲ ಉದ್ದೇಶಕ್ಕೆ ಪೂರಕವಾಗಿ ಹೈದರಾಬಾದ ಸಂಸ್ಥಾನದಲ್ಲಿ ಲಿಂಗಾಯತರು ಕೈಜೋಡಿಸಿದ್ದರು. ಉದಗೀರದ ಸಂಗ್ರಾಮಪ್ಪ, ಶಂಕರರಾವ್, ಪ್ರಭುರಾವ್ ಮೊದಲಾದ ಲಿಂಗಾಯತ ಸಮಾಜದ ಮುಖಂಡರು ಆರ್ಯ ಸಮಾಜದ ತತ್ವಗಳನ್ನು ಸಮಾಜದಲ್ಲಿ ತಿಳಿಸಿಹೇಳುವ ಪ್ರಯತ್ನ ಮಾಡುತ್ತಿದ್ದರು. ಆದರೆ ಬನ್ಸೀಲಾಲರಂಥ ಅಜ್ಞರು ಲಿಂಗಾಯತರನ್ನೇ ಆರ್ಯಸಮಾಜಿಗಳನ್ನಾಗಿ ಮಾಡತೊಡಗಿದರು. ಇದನ್ನು ಉದ್ಗೀರದ ಸಂಗ್ರಾಮಪ್ಪನವರು ಉಗ್ರವಾಗಿ ಖಂಡಿಸಿದರು. ಪರಧರ್ಮಗಳಿಗೆ ಹೋದ ಹಿಂದೂಗಳನ್ನು ಮರಳಿ ತರುವುದಕ್ಕೆ ಇರಬೇಕೆ ಹೊರತು ಆರ್ಯ ಸಮಾಜವೊಂದು ಜಾತಿಯಾಗಿ ಪರಿಣಮಿಸಬಾರದೆಂದು ಅವರು ಹೇಳಿದರು. ಅದಕ್ಕೆ ಪ್ರತಿಯಾಗಿ ಬನ್ಸೀಲಾಲ್ ಒಂದು ಸಾವಿರ ಲಿಂಗ ತೆಗೆಯುವ ಪ್ರತಿಜ್ಞೆ ಮಾಡಿದ. ಈ ವಿಷಯ ತಿಳಿದ ಹರ್ಡೇಕರ ಮಂಜಪ್ಪನವರು ಆಲಮಟ್ಟಿಯಿಂದ ಕಲಬುರ್ಗಿಗೆ ಬಂದು ಪ್ರತಿಭಟನೆ ಮಾಡಿದರು. ಈ ಪ್ರತಿಭಟನೆಯಲ್ಲಿ ಸಿದ್ಧಯ್ಯನವರು ಪಾಲ್ಗೊಂಡರು. ಉಗ್ರ ಪ್ರತಿಭಟನೆಗೆ ಕಲಬುರ್ಗಿ, ಬೀದರ, ರಾಯಚೂರು ಜಿಲ್ಲೆಯ ಜನ ಎಚ್ಚೆತ್ತರು. ಬನ್ಸೀಲಾಲರಿಗೆ

ಒಂದು ಸಾವಿರ ಅಲ್ಲ, ಒಂದು ಲಿಂಗವನ್ನೂ ತೆಗೆಯಲು ಸಾಧ್ಯವಾಗಲಿಲ್ಲ. ಲಿಂಗಾಯತರ ಜಾಗೃತಿಗಾಗಿ ಒಂದು ಸಮ್ಮೇಳನ ಮಾಡಬೇಕೆಂದು ಸಂಗ್ರಾಮಪ್ಪನವರು ಆಲೋಚಿಸಿದರು. ಕಲಬುರ್ಗಿಯಲ್ಲಿ ಸಮ್ಮೇಳನ ಅತ್ಯಂತ ವಿಜೃಂಭಣೆಯಿಂದ ಜರುಗಿತು. ಹರ್ಡೇಕರ ಮಂಜಪ್ಪನವರು ಈ ಸಮ್ಮೇಳನದ ಜೀವನಾಡಿಗಳಾಗಿದ್ದರು. ವೇದಿಕೆ ಮೇಲೆ ಕಲಬುರ್ಗಿ ಭಾಗದ ಮುಖಂಡರೂ ಭಾಷಣ ಮಾಡಿದರು. ಸಮ್ಮೇಳನ ಮುಗಿದ ನಂತರ ಎಲ್ಲರೂ ಉದಗೀರದಿಂದ ಕಲ್ಯಾಣದವರೆಗೆ 'ವಿಜಯಯಾತ್ರೆ' ಮಾಡಿದರು. ಈ ಸಂದರ್ಭದಲ್ಲಿ ಇಷ್ಟಲಿಂಗದ ಸಾಮಾಜಿಕ ಆಯಾಮವನ್ನು ಜನಮನಕ್ಕೆ ಮಂಜಪ್ಪನವರು ಮನದಟ್ಟು ಮಾಡಿಕೊಟ್ಟರು.

ಹರ್ಡೇಕರ ಮಂಜಪ್ಪನವರು ಲಿಂಗದೀಕ್ಷೆ ಪಡೆಯಲು ಎಷ್ಟೆಲ್ಲ ಕಷ್ಟಪಡಬೇಕಾಯಿತು ಎಂಬುದನ್ನು ಕೇಳಿದರೆ ಆಶ್ಚರ್ಯವಾಗುತ್ತದೆ. ಧಾರವಾಡ ಮುರುಘಾಮಠದ ಮೃತ್ಯುಂಜಯಪ್ಪಗಳು ಮಂಜಪ್ಪನವರಿಗೆ ಲಿಂಗದೀಕ್ಷೆ ನೀಡಬೇಕೆಂದು ಪ್ರಯತ್ನಿಸಿದರು. ಆದರೆ ಸಂಪ್ರದಾಯಬದ್ಧ ಲಿಂಗಾಯತ ಸಮಾಜ ಮಂಜಪ್ಪನವರಿಗೆ ಲಿಂಗದೀಕ್ಷೆ ನೀಡಲು ಒಪ್ಪಲಿಲ್ಲ. ಕೊನೆಗೆ ಮೃತ್ಯುಂಜಯಪ್ಪಗಳು ಮಂಜಪ್ಪನವರನ್ನು ಅಥಣಿ ಮುರುಘೇಂದ್ರ ಶಿವಯೋಗಿಗಳ ಹತ್ತಿರ ಕರೆದುಕೊಂಡು ಹೋಗುತ್ತಾರೆ. ಮುರುಘೇಂದ್ರ ಶಿವಯೋಗಿಗಳವರು ಬಸವಣ್ಣನವರ ವಚನಗಳನ್ನು ಅತ್ಯಂತ ಭಕ್ತಿಯಿಂದ ಪ್ರತಿನಿತ್ಯ ಪಠಣ ಮಾಡುತ್ತಿರುತ್ತಾರೆ. ಬಸವಣ್ಣನವರ ತತ್ವಗಳನ್ನು ಮುರುಘೇಂದ್ರ ಶಿವಯೋಗಿಗಳು ಅಕ್ಷರಶಃ ಅನುಷ್ಠಾನಕ್ಕೆ ತಂದವರು. ಪೂಜ್ಯ ಶಿವಯೋಗಿಗಳನ್ನು ಮಂಜಪ್ಪನವರು – 'ಬುದ್ಧಿ ತಿಪ್ಪೆಯಲ್ಲಿ ಬೆಳೆದ ಪತ್ರಿ ಯೋಗ್ಯವೋ ಅಯೋಗ್ಯವೋ?' ಎಂದು ಪ್ರಶ್ನಿಸುತ್ತಾರೆ. ಪತ್ರಿ ಪವಿತ್ರವಾದುದು, ಅದು ತಿಪ್ಪೆಯಲ್ಲಿ ಹುಟ್ಟಲಿ, ಮತ್ತೆಲ್ಲಿಯಾದರೂ ಹುಟ್ಟಲಿ, ಅದರ ಪಾವಿತ್ರ್ಯತೆಗೆ ಭಂಗವಿಲ್ಲ ಎಂದು ಶಿವಯೋಗಿಗಳು ಹೇಳುತ್ತಾರೆ. ಆಗ ಮಂಜಪ್ಪನವರು–'ದಾಸಿ ಪುತ್ರನಾಗಲಿ, ವೇಶ್ಯಾ ಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ಭಾವಿಸಬೇಕು' ಎಂದು ಅಣ್ಣ ಬಸವಣ್ಣನವರು ಹೇಳಿದ್ದಾರೆ. ಅದರಂತೆ, ಲಿಂಗಾಯತನಲ್ಲದ ನನಗೆ ತಾವು ಲಿಂಗದೀಕ್ಷೆ ನೀಡಬೇಕೆಂದು ವಿನಂತಿಸುತ್ತಾರೆ. ಮುರುಘೇಂದ್ರ ಶಿವಯೋಗಿಗಳು ಮಧ್ಯರಾತ್ರಿಯಲ್ಲಿ ಮಂಜಪ್ಪನವರಿಗೆ 'ಇಷ್ಟಲಿಂಗ ದೀಕ್ಷೆ' ನೀಡುತ್ತಾರೆ. ಈ ಘಟನೆ, ಆಧುನಿಕ ಕರ್ನಾಟಕದಲ್ಲಿ ಲಿಂಗಾಯತರು ಎಷ್ಟು ಸಂಪ್ರದಾಯವಾದಿಗಳಾಗಿ, ಸಾಮಾಜಿಕ ಮೌಲ್ಯಗಳನ್ನು ಗಾಳಿಗೆ ತೂರಿದ್ದರು ಎಂಬುದು ತಿಳಿದು ಬರುತ್ತದೆ.

ಸಜ್ಜಲಗುಡ್ಡದ ಶರಣಮ್ಮನವರ ನಮ್ಮ ನಡುವೆ ಬದುಕಿಹೋದ ಪ್ರಾತಃಸ್ಮರಣೀಯ ಅನುಭಾವಿಗಳು. ಅವರು ಹಾಲುಮತ ಮನೆತನದವರು. ಆದರೆ ಶರಣಮ್ಮನವರಿಗೆ ಲಿಂಗದೀಕ್ಷೆ ಪಡೆಯಬೇಕೆಂಬ ಹಂಬಲ. ಆದರೆ ಯಾವ ಸ್ವಾಮಿಗಳು ಲಿಂಗದೀಕ್ಷೆ ಮಾಡಲು ಮುಂದೆ ಬರುವುದಿಲ್ಲ. ಸಮಾಜದ ಹಿರಿಯರು ಆ ಸ್ವಾಮಿಗಳಿಗೆ ನೀವು ಲಿಂಗದೀಕ್ಷೆ ನೀಡಿದರೆ ನಿಮಗೆ ಸಾಮಾಜಿಕ ಬಹಿಷ್ಕಾರ ಹಾಕುತ್ತೇವೆ ಎಂದು

ಬೆದರಿಕೆಯೊಡ್ಡುತ್ತಾರೆ. ಕೊನೆಗೆ ಗುಡದೂರು ಬಸವಾರ್ಯರು ಶರಣಮ್ಮನವರಿಗೆ ಲಿಂಗದೀಕ್ಷೆ ದಯಪಾಲಿಸುತ್ತಾರೆ. ಮೂರು ವರುಷಗಳ ಕಾಲ ಶರಣಮ್ಮನವರು ಲಿಂಗವನ್ನು ಗುಪ್ತವಾಗಿಟ್ಟುಕೊಂಡು ಪೂಜೆ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಲಿಂಗಾಂಗ ಯೋಗದಲ್ಲಿ ತಲ್ಲೀನರಾದ ಶರಣಮ್ಮನವರು ತಮ್ಮ ಲಿಂಗಪೂಜೆ, ಧ್ಯಾನ, ತಪಸ್ಸುಗಳಿಂದ ಶಿವಯೋಗದ ಉತ್ತುಂಗಕ್ಕೇರಿದಾಗ ಇಡೀ ಸಮಾಜವೇ ಅವರಿಗೆ ಶರಣು ಹೋಯಿತು. ಆದರೆ ಪ್ರಾರಂಭದ ಘಟ್ಟದಲ್ಲಿ ಅವರು ಅನುಭವಿಸಿದ ನೋವು, ಸಂಕಟ ವರ್ಣನಾತೀತ.

19ನೇ ಶತಮಾನದ ಪೂರ್ವಾರ್ಧದಲ್ಲಿ ಕಲಬುರ್ಗಿ ಜಿಲ್ಲೆಯ ಕಡಕೋಳ ಗ್ರಾಮದ ಮಡಿವಾಳಪ್ಪನವರು ಮಹಾ ಅನುಭಾವಿಗಳು. ಅವರು ಮಡಿವಾಳಪ್ಪನವರ ತಾಯಿ ಗಂಗಮ್ಮ. ತಂದೆ ಬಿದನೂರಿನ ಹಿರೇಮಠದ ಒಡೆಯ ವಿರೂಪಾಕ್ಷಸ್ವಾಮಿ. ಅನಾಥಳಾದ ವಿಧವೆ ಗಂಗಮ್ಮ, ವಿರೂಪಾಕ್ಷಸ್ವಾಮಿಯ ಸೇವೆಮಾಡಿಕೊಂಡು ಮಠದಲ್ಲಿದ್ದಾಗ ಇವಳಿಗೆ ಮಡಿವಾಳಪ್ಪ ಹುಟ್ಟಿದ್ದು. ಬಿದನೂರ ಮಲ್ಲಿಕಾರ್ಜುನಪ್ಪಗೌಡರೇ ಮಡಿವಾಳಪ್ಪನನ್ನು ಎತ್ತಿ ಆಡಿಸಿ ಬೆಳೆಯಿಸಿದ್ದು; ಆಶ್ರಯನೀಡಿ ಮಗಳ ಮಗನಂತೆ ಮಡಿವಾಳ ಮೊಮ್ಮಗನನ್ನು ಜೋಪಾನ ಮಾಡಿದ್ದು. ಇಲ್ಲಿ ಗಂಗಮ್ಮ ಮತ್ತು ವಿರೂಪಾಕ್ಷಸ್ವಾಮಿ ಇವರ ಸಂಬಂಧ ಅನೀತಿಯಿಂದ ಕೂಡಿದ್ದು ಎಂದು ಜನವದಂತಿ. ಇದಕ್ಕೆ ಆಧಾರವಾಗಿ ಕೆಲವರು ಗಂಗಮ್ಮ ಸ್ವತಃ ಹಾಡು ರಚಿಸಿದ್ದಾಳೆಂದು ತಿಳಿದು, "ಜಾರತನವ ನಾ ಮಾಡಿದೆ ನಮ್ಮ ಜಂಗಮನೊಡಗೂಡಿ । ಹಾದಿ ತಿಳಿಯದೆ ಗಾದಿಯನಾಡುವರು । ವಾದ ಕರ್ತದಿಂದೆ ॥" ಎಂಬ ಹಾಡನ್ನು ಉಲ್ಲೇಖಿಸುತ್ತಾರೆ. ಮಡಿವಾಳಪ್ಪನವರು ಲಿಂಗದೀಕ್ಷೆಯನ್ನು ಪಡೆಯಬೇಕೆಂದು ಹಂಬಲಿಸುತ್ತಾರೆ. ಆದರೆ ಪ್ಯಾಟಿ ಬಸಯ್ಯನಂತಹ ಸಂಪ್ರದಾಯವಾದಿಗಳು ಅದನ್ನು ಪ್ರಬಲವಾಗಿ ವಿರೋಧಿಸುತ್ತಾರೆ. ಆಗ ಮಡಿವಾಳಪ್ಪನವರು ಕಲಬುರ್ಗಿ ಶರಣಬಸವೇಶ್ವರರ ಹತ್ತಿರ ಬರುತ್ತಾರೆ. ಆಗ ಶರಣಬಸವೇಶ್ವರರು ಅರಳಗುಂಡಿಗೆಯಲ್ಲಿ ವಾಸವಾಗಿರುತ್ತಾರೆ. ಆಗ ಪ್ಯಾಟಿ ಬಸಯ್ಯನಂತವರು ಇಂಥವರಿಗೆ ಲಿಂಗದೀಕ್ಷೆ ಕೊಡಿಸಿದರೆ ನಿಮಗೂ ಸಾಮಾಜಿಕ ಬಹಿಷ್ಕಾರ ಹಾಕುತ್ತೇವೆ ಎಂದು ಶರಣಬಸವೇಶ್ವರರನ್ನೇ ಹೆದರಿಸುತ್ತಾನೆ. ಆದರೆ ಶರಣಬಸವೇಶ್ವರರು ಯಾವುದಕ್ಕೂ ಅಂಜದೆ ಅಳುಕದೆ, ಕಲಕೇರಿಯ ಮರುಳಾರಾಧ್ಯರಿಂದ ಮಡಿವಾಳಪ್ಪನವರಿಗೆ ಲಿಂಗದೀಕ್ಷೆಯನ್ನು ಕೊಡಿಸುತ್ತಾರೆ. ಮಡಿವಾಳಪ್ಪನವರು ತತ್ವಪದಗಳನ್ನು ರಚಿಸಿ, ನಮ್ಮ ನಾಡಿನ ಶ್ರೇಷ್ಠ ಅನುಭಾವಿಗಳಲ್ಲಿ ಒಬ್ಬರಾಗಿ ಲೋಕಕ್ಕೆ ಚಿರಪರಿಚಿತರಾದುದು ಈಗ ಇತಿಹಾಸ.

ಜಯದೇವ ಜಗದ್ಗುರುಗಳು 1903ರಲ್ಲಿ ಮುರುಘಾಮಠದ ಅಧಿಪತಿಗಳಾಗುತ್ತಾರೆ. ಪೀಠಕ್ಕೆ ದಯಮಾಡಿಸಿದ ಕೆಲವು ದಿನಗಳಲ್ಲಿ ಜಯದೇವ ಜಗದ್ಗುರುಗಳು ತಮ್ಮನ್ನು ಈ ಪೀಠಕ್ಕೆ ಆಯ್ಕೆ ಮಾಡುವಲ್ಲಿ ಪರಿಶ್ರಮಿಸಿದ ವಾರದ ಮಲ್ಲಪ್ಪನವರಿಗೆ 'ಭಕ್ತರ ಸಹಾಯದಿಂದ ಮಠದ ಕಟ್ಟಡವನ್ನು ಜೀರ್ಣೋದ್ಧಾರ ಮಾಡುತ್ತಿರುವೆ, ಮಠಕ್ಕೆ ಮಹಾದ್ವಾರ ಕಟ್ಟಿಸುತ್ತಿರುವೆ' ಎಂದು ಅಭಿಮಾನದಿಂದ ಪತ್ರ ಬರೆಯುತ್ತಾರೆ. ಆ

ಪತ್ರವನ್ನು ಓದಿದ ವಾರದ ಮಲ್ಲಪ್ಪನವರು ಜಗದ್ಗುರುಗಳಿಗೆ ಮರಳಿ ಪತ್ರವೊಂದನ್ನು ಬರೆಯುತ್ತಾರೆ. ಅದರಲ್ಲಿ 'ಪೂಜ್ಯಶ್ರೀ ಜಯದೇವ ಜಗದ್ಗುರುಗಳ ಸನ್ನಿಧಿಗೆ ಅನಂತ ಪ್ರಣಾಮಗಳು. ನಿಮ್ಮ ಪತ್ರಕ್ಕೆ ಏನು ಉತ್ತರ ಕೊಡಲಿ ಎಂದು ಯೋಚಿಸಿದೆ. ಈಗ ನಮ್ಮ ಮತ ಕೆಳಗೆ ಬಿದ್ದಿದೆ. ಅದನ್ನು ಎತ್ತಿ ಕಟ್ಟುವ ಧರ್ಮಗೋಪುರ ನಿರ್ಮಾಣ ಕಾರ್ಯ ಬಿಟ್ಟು ಮಠಕ್ಕೆ ಗೋಪುರ ಕಟ್ಟಿಸುತ್ತಿರುವಿರೋ? ಮಠವನ್ನು ಯಾರಾದರೂ ಕಟ್ಟಿಸುತ್ತಾರೆ. ನಿಮ್ಮನ್ನು ಪಂಡಿತರನ್ನಾಗಿ ಮಾಡಿದ್ದೇಕೆ? ನೀವು ಮಾಡುವ ಕಾರ್ಯಗಳೇನು? ನಿಮ್ಮನ್ನು ಈ ಸ್ಥಾನಕ್ಕೆ ಕೂಡಿಸಿದ್ದು ಏನು ನನ್ನ ಕರ್ಮವೆನ್ನಲೇ, ಪುಣ್ಯವೆನ್ನಲೇ?' ಸ್ವಲ್ಪ ನಿಷ್ಠುರವಾಗಿ ತಿಳಿಸುತ್ತಾರೆ. ಆ ಪತ್ರವನ್ನು ಓದಿದ ಜಗದ್ಗುರುಗಳು ಕೋಪಿಸಿ ಕೊಳ್ಳುವುದಿಲ್ಲ. ಬದಲಾಗಿ ಅದನ್ನು ತಮ್ಮ ಲಿಂಗಪೂಜಾ ಪೆಟ್ಟಿಗೆಯಲ್ಲಿ ಜತನವಾಗಿ ಇಟ್ಟುಕೊಂಡು "ಇದನ್ನು ಓದುವುದೇ ನನ್ನ ಲಿಂಗಪೂಜೆ! ಇದರಂತೆ ನಡೆವುದೇ ನನ್ನ ಲಿಂಗದಾಚರಣೆ" ಎಂದು ಟಿಪ್ಪಣೆ ಬರೆಯುತ್ತಾರೆ. ಅಂದಿನಿಂದ ಕರ್ನಾಟಕ–ಮಹಾರಾಷ್ಟ್ರಗಳಲ್ಲಿ ಚರಜಂಗಮರಾಗಿ ಸಂಚಾರಗೈಯುತ್ತಾರೆ. ಕೊಲ್ಹಾಪುರದಲ್ಲಿ ಒಂದು ಮಠವನ್ನು ಸ್ಥಾಪಿಸುತ್ತಾರೆ, ಕಾಶಿಯಲ್ಲಿ ಲಿಂಗಾಯತ ಸಾಧಕರ ಅಧ್ಯಯನಕ್ಕೆ ಅನುಕೂಲವಾಗಲು 'ಜಯದೇವವಾಡಿ' ಕಟ್ಟಿಸುತ್ತಾರೆ. ಕರ್ನಾಟಕದ ಅನೇಕ ಕಡೆ ಉಚಿತ ಪ್ರಸಾದನಿಲಯಗಳನ್ನು ಪ್ರಾರಂಭಿಸುತ್ತಾರೆ. ಜಾತಿ–ಧರ್ಮಗಳ ಭೇದವಿಲ್ಲದೆ ಮುಸ್ಲಿಂ ಸಮುದಾಯಕ್ಕೂ ಸಹಾಯ–ಸಹಕಾರ ನೀಡುತ್ತಾರೆ.

ಗದಗ ಸಮೀಪದ ಹುಲಕೋಟಿಯ ಕೆ.ಎಚ್. ಪಾಟೀಲ ಅವರು ರಾಜಕಾರಣಿಯಾಗಿ ಪ್ರಸಿದ್ಧರಾಗಿದ್ದರು. ಆದರೆ ಲಿಂಗಾಯತರನ್ನು ಕಂಡರೆ ಅವರಿಗೆ ಅಷ್ಟಕಷ್ಟೇ. ಒಂದು ಸಂದರ್ಭದಲ್ಲಿ 'ಈ ಲಿಂಗಾಯತರ ಕೊರಳೊಳಗಿನ ಲಿಂಗ ಮೊಣಕಾಲಿಗೆ ಕಟ್ಟಿಸುತ್ತೇನೆ' ಎಂದು ಸಾರ್ವಜನಿಕವಾಗಿ ಮಾತನಾಡಿದರು. ಅದೇ ವರ್ಷ ಚುನಾವಣೆಯಲ್ಲಿ ಅವರು ಹೀನಾಯವಾಗಿ ಸೋತರು. ಬೆಳಗಾವಿ ಜಿಲ್ಲೆಯ ಹಿರಿಯ ರಾಜಕಾರಣಿ ಬಿ.ಶಂಕರಾನಂದ ಅವರ ಮಗ ಓಂ ಪ್ರಕಾಶ ಕಣಗಲಿ ಕೂಡ ಚಿಕ್ಕೋಡಿಯಲ್ಲಿ ಒಂದು ಸಾರ್ವಜನಿಕ ಭಾಷಣದಲ್ಲಿ 'ದಲಿತರನ್ನು ಶೋಷಣೆ ಮಾಡುತ್ತ ಬಂದ ಲಿಂಗಾಯತರ ಕೊರಳೊಳಗಿನ ಲಿಂಗ ಗೂಟಕ್ಕೆ ಹಾಕಿಸುವೆ' ಎಂದು ಹೇಳಿ ಚುನಾವಣೆಯಲ್ಲಿ ಹೀನಾಯವಾಗಿ ಸೋತರಷ್ಟೇ ಅಲ್ಲ; ಸಾರ್ವಜನಿಕ ಬದುಕಿನಿಂದಲೇ ದೂರಾಗುವ ಪರಿಸ್ಥಿತಿ ನಿರ್ಮಾಣವಾಯಿತು.

ಇಷ್ಟಲಿಂಗದ ಸಾಮಾಜಿಕ ಆಯಾಮಗಳ ಕುರಿತು ವಿಶ್ವವಿದ್ಯಾಲಯ ಮಟ್ಟದಲ್ಲಿ ಪಿಎಚ್.ಡಿ. ಸಂಶೋಧನೆಯನ್ನೇ ಮಾಡಬಹುದು. ಅಷ್ಟು ವ್ಯಾಪಕವಾದ ಈ ವಿಷಯವನ್ನು ಸಂಕ್ಷಿಪ್ತವಾಗಿ ಇಲ್ಲಿ ಪ್ರಸ್ತಾಪಿಸಿರುವೆ.

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ವೈದ್ಯಕೀಯ ಕ್ಷೇತ್ರದಲ್ಲಿ ಕ್ಷಿಪ್ರಗತಿಯ ಬೆಳವಣಿಗೆಗಳಾಗುತ್ತಿರುವುದು ಸಂತಸದ ಸಂಗತಿ**

ವೈದ್ಯಕೀಯ ಕ್ಷೇತ್ರದಲ್ಲಿ ಕ್ಷಿಪ್ರಗತಿಯ ಬೆಳವಣಿಗೆಗಳಾಗುತ್ತಿರುವುದು ಸಂತಸದ ಸಂಗತಿ ಎಂದು ಪರಮಪೂಜ್ಯ ಜಗದ್ಗುರುಗಳು ಅಕ್ಟೋಬರ್ 30ರಂದು ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ ವತಿಯಿಂದ ಆಯೋಜಿಸಿದ್ದ ಡಾ. ಸಿ.ಎನ್. ಮೃತ್ಯುಂಜಯಪ್ಪ ಆದರ್ಶ ವೈದ್ಯ ಸೇವಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವದಿಸುತ್ತ ತಿಳಿಸಿದರು.

ವೈದ್ಯಕೀಯ ಕ್ಷೇತ್ರವಿಂದು ಬಹಳ ದೊಡ್ಡಮಟ್ಟದಲ್ಲಿ ಬೆಳೆಯುತ್ತಿದೆ. ಪ್ರವಾಸದ ಜೊತೆ ಜೊತೆಗೆ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುವಂತಹ ಹೆಲ್ತ್ ಟೂರಿಸಂ ಕಾಲಘಟ್ಟವನ್ನು ತಲುಪಲಾಗಿದೆ. ಆರೋಗ್ಯದ ಜೊತೆಗೆ ಆಹಾರ ಕ್ರಮಗಳ ಬಗ್ಗೆಯೂ ಜಾಗೃತಿ ವಹಿಸಬೇಕು. ಡಾ. ಮೃತ್ಯುಂಜಯಪ್ಪನವರು ಜನಸೇವೆಯಿಂದಲೇ ಜನಪ್ರಿಯತೆ ಪಡೆದವರು. ಅವರಂತೆಯೇ ಡಾ. ಹೆಚ್.ಆರ್. ಮಣಿಕರ್ಣಿಕ ಹಾಗೂ ಡಾ. ಬಿ.ಎನ್. ಶೇಷಾದ್ರಿ ಅವರು ಕೂಡ ಸೇವೆ ಸಲ್ಲಿಸುತ್ತಿದ್ದಾರೆ. ರೋಗಿಗಳನ್ನು ವೈದ್ಯರು ಪ್ರೀತಿಯಿಂದ ಮಾತನಾಡಿಸಿದರೆ ಸಾಕು ಅರ್ಧ ರೋಗ ವಾಸಿಯಾದಂತೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ವೈದ್ಯಕೀಯ ಕ್ಷೇತ್ರದಲ್ಲಿ ಮಾಡಿರುವ ಸುದೀರ್ಘ ಸಾರ್ಥಕ ಸೇವೆಯನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವುದು ಪ್ರಶಂಸನೀಯ. ಸಂಕಷ್ಟದ ಕಾಲದಲ್ಲಿ ಮಾಡಿದ ವೈದ್ಯರ ಸೇವೆಯನ್ನು ಯಾರೂ ಕಡೆಗಣಿಸಲು ಸಾಧ್ಯವಿಲ್ಲ. ಕರೋನಾ ಸಮಯದಲ್ಲಿ ವೈದ್ಯರು, ದಾದಿಯರು ಸೇರಿದಂತೆ ವೈದ್ಯಕ್ಷೇತ್ರದ ಎಲ್ಲರೂ ಸೇನಾನಿಗಳಂತೆ ಕೆಲಸ ಮಾಡಿದರು ಎಂದು ಹೇಳಿದರು.

ಅಭಿನಂದನಾ ನುಡಿಗಳನ್ನಾಡಿದ ಪ್ರೊ. ಎಂ. ಕೃಷ್ಣೇಗೌಡರವರು ಸೃಷ್ಟಿಯಲ್ಲಿ ತಿಳಿಯದ ರಹಸ್ಯಗಳನ್ನು ಭೇದಿಸುವವರು ವೈದ್ಯರು. ಆರೋಗ್ಯವೆಂದರೆ ಕೇವಲ

ದೈಹಿಕ ಆರೋಗ್ಯವಲ್ಲ, ಮಾನಸಿಕ ಹಾಗೂ ಆಧ್ಯಾತ್ಮಿಕ ಆರೋಗ್ಯವೂ ಸೇರಿದೆ. ರೋಗಿಗಳನ್ನು ನಿರೋಗಿಗಳನ್ನಾಗಿ ಮಾಡುವ ವೈದ್ಯವೃತ್ತಿಗೆ ಬದ್ಧರಾಗಿ ಕೆಲಸ ಮಾಡುವವರು ಮಾತ್ರ ದೊಡ್ಡವರಾಗಲು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ನೇತ್ರತಜ್ಞರಾದ ಡಾ. ಹೆಚ್.ಆರ್. ಮಣಿಕರ್ಣಿಕ ಹಾಗೂ ಪಾಂಡವಪುರದ ಖ್ಯಾತ ವೈದ್ಯರಾದ ಡಾ. ಬಿ.ಎನ್. ಶೇಷಾದ್ರಿಯವರುಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದಕ್ಕೂ ಮುನ್ನ ಚಲನಚಿತ್ರ ಕಲಾವಿದರಾದ ಶ್ರೀ ಪುನೀತ್ ರಾಜ್‌ಕುಮಾರ್‌ರವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ಶ್ರೀ ಎಂ. ಶಿವಣ್ಣ, ಮಾಜಿ ಸಂಸದರಾದ ಶ್ರೀ ಸಿ.ಹೆಚ್. ವಿಜಯಶಂಕರ್, ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪ ಮಾತನಾಡಿದರು. ಶ್ರೀಮತಿ ಸುಧಾ ಮೃತ್ಯುಂಜಯಪ್ಪ ಮತ್ತು ಮಕ್ಕಳು, ಶ್ರೀ ಮ.ಗು. ಸದಾನಂದಯ್ಯ, ಶ್ರೀ ಹೆಳವರಹುಂಡಿ ಸಿದ್ದಪ್ಪ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮತಿ ಉಮಾ ಮಹದೇವಸ್ವಾಮಿ ಪ್ರಾರ್ಥಿಸಿದರು. ಶ್ರೀಮತಿ ಧನ್ಯಾ ಸತ್ಯೇಂದ್ರಮೂರ್ತಿ ಸ್ವಾಗತಿಸಿದರು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ ಪ್ರಾಸ್ತವಿಕವಾಗಿ ಮಾತನಾಡಿದರು. ಶ್ರೀಮತಿ ಜಯಾಗೌಡ ಸ್ವಸ್ತಿ ವಾಚನ ಮಾಡಿದರು. ಶ್ರೀಮತಿ ವಾಗ್ದೇವಿ ವಂದಿಸಿದರು. ಶ್ರೀಮತಿ ವಿಮಲಾ ಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

**ಕಾನೂನು ಪದವೀಧರರು ಸಮಾಜಕ್ಕೆ ಮಾದರಿಯಾಗಿರಬೇಕು**

ಕಾನೂನು ಪದವೀಧರರು ಸಮಾಜಕ್ಕೆ ಮಾದರಿಯಾಗಿರಬೇಕು. ಕಾನೂನು ಮತ್ತು ಕಾನೂನು ನೆರವಿನ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕೆಂದು ಸರ್ವೋಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ಸಿ.ಟಿ. ರವಿಕುಮಾರ್‌ರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಅಕ್ಟೋಬರ್ 30ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ 13ನೇ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತಾ ಕಾನೂನು ಪದವೀಧರರು ಕಾನೂನು ಮತ್ತು ಹಕ್ಕುಗಳ ಬಗ್ಗೆ ಜನರನ್ನು ಜಾಗೃತಗೊಳಿಸಬೇಕು. ಇಂದಿಗೂ ಜನರು ಬಾಲ್ಯವಿವಾಹ ಮತ್ತು ಇತರ ಅನಿಷ್ಟ ಪದ್ಧತಿಗಳಿಗೆ ದಾಸರಾಗಿರುತ್ತಾರೆ. ಗ್ರಾಮೀಣ ಭಾಗದಲ್ಲಿ ಕಾನೂನಿನ ಬಗ್ಗೆ ಹೆಚ್ಚು ಅರಿವು ಮೂಡಿಸುವ ಕಾರ್ಯವಾಗಬೇಕಿದೆ. ವಕೀಲರಾದವರಲ್ಲಿ ಹೆಚ್ಚು ಆತ್ಮವಿಶ್ವಾಸವಿರಬೇಕು. ಆಗ ಮಾತ್ರ ನಂಬಿ ಬಂದ ಕಕ್ಷಿದಾರರಿಗೆ ನ್ಯಾಯ ಒದಗಿಸಲು ಸಾಧ್ಯ ಎಂದು ತಿಳಿಸಿದರು.

ಪರಮಪೂಜ್ಯ ಜಗದ್ಗುರುಗಳವರು ಪದವೀಧರರೆಲ್ಲರೂ ಸಮಾಜ ಸೇವೆ ಮಾಡಿ ಅನಿಷ್ಟ ಪದ್ಧತಿಗಳನ್ನು ತೊಡೆದುಹಾಕಬೇಕು. ಪ್ರತಿಯೊಬ್ಬ ನೂತನ ಪದವೀಧರರಿಗೂ ಇದು ಹೆಮ್ಮೆಯ ಕ್ಷಣವಾಗಿದೆ. ಕಳೆದ ಕೆಲವು ವರ್ಷಗಳ ಕಠಿಣ ಪರಿಶ್ರಮ ಈಗ ಫಲ ನೀಡಿದೆ. ಅದನ್ನು ಸಮರ್ಥವಾಗಿ ಬಳಸಿಕೊಳ್ಳಿ ಎಂದು ಹಾರೈಸಿದರು.

ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಾಧೀಶರಾದ ಶ್ರೀಮತಿ ಎಸ್. ಸುಜಾತಾರವರು ಪದವೀಧರರು ಸಮಾಜದ ಎಲ್ಲಾ ವರ್ಗದವರಿಗೂ ಸಾಮಾಜಿಕ ನ್ಯಾಯ ದೊರಕಿಸಿಕೊಡಲು ಇಂದಿನ ಅಗತ್ಯವಾಗಿರುವ ಸಾಮಾಜಿಕ ಶಿಸ್ತು ಮತ್ತು ಜವಾಬ್ದಾರಿಯನ್ನು ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ನೂತನ ಪದವೀಧರರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. 2019–20 ಮತ್ತು 2020–21ನೇ ಸಾಲಿನಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಒಟ್ಟು 107 ವಿದ್ಯಾರ್ಥಿಗಳು ಕಾನೂನು ಪದವಿ ಪಡೆದರು.

ಕಾರ್ಯಕ್ರಮದಲ್ಲಿ ಮೈಸೂರು ನ್ಯಾಯಾಲಯದ ನ್ಯಾಯಾಧೀಶರು, ವಕೀಲರು, ವಿದ್ಯಾರ್ಥಿಗಳು, ಪೋಷಕರು ಮತ್ತು ಅಧ್ಯಾಪಕರು ಉಪಸ್ಥಿತರಿದ್ದರು. ಪ್ರೊ. ಕೆ.ಎಸ್. ಸುರೇಶ್ ಸ್ವಾಗತಿಸಿದರು. ಕು. ಪ್ರಜ್ಞಾ ಪ್ರಾರ್ಥಿಸಿದರು. ಪ್ರೊ. ಪಿ. ಶಿವಾನಂದ ಭಾರತಿ ರ್‍ಯಾಂಕ್ ಪಡೆದವರ ಪಟ್ಟಿಯನ್ನು ಪ್ರಕಟಿಸಿದರು. ಡಾ. ಎಸ್. ನಟರಾಜು ವಂದಿಸಿದರು. ಶ್ರೀಮತಿ ಶೀಲಾ ಗಣೇಶ್ ಕಾರ್ಯಕ್ರಮ ನಿರೂಪಿಸಿದರು.

**ಜಾನಪದ ಸಂಸ್ಕೃತಿ ಮತ್ತು ಪರಂಪರೆಯನ್ನು ಸಂರಕ್ಷಿಸಬೇಕಿದೆ**

ಜಾನಪದ ಸಂಸ್ಕೃತಿ ಮತ್ತು ಪರಂಪರೆಯನ್ನು ಸಂರಕ್ಷಿಸಬೇಕಿದೆ ಎಂದು ಪರಮಪೂಜ್ಯ ಜಗದ್ಗುರುಗಳು ನವೆಂಬರ್ 11ರಂದು ಚಾಮರಾಜನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಮಂಟೇಸ್ವಾಮಿ ಅಧ್ಯಯನ ಪೀಠದ ಉದ್ಘಾಟನೆಯ ದಿವ್ಯ ಸಾನ್ನಿಧ್ಯವನ್ನು ವಹಿಸಿ ಮಾತನಾಡುತ್ತಾ ಹೇಳಿದರು.

ಜಾನಪದ ದಾರ್ಶನಿಕರಾದ ಮಹದೇಶ್ವರರು ಹಾಗೂ ಮಂಟೇಸ್ವಾಮಿ ಅವರು ನೀಲಗಾರರಾಗಿ ದೀಕ್ಷೆ ತೆಗೆದುಕೊಂಡ ನಂತರ ಸ್ವಚ್ಛಂದವಾಗಿ ಬದುಕಿದ ರೀತಿ ಅವಿಸ್ಮರಣೀಯ. ಇಂತಹ ನೀಲಗಾರರ ಜೀವನ ಚರಿತ್ರೆಯನ್ನು ಪ್ರಚುರಪಡಿಸುವ ಹಾಗೂ ಇಲ್ಲಿನ ಸಂಸ್ಕೃತಿಯನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವ ಕೆಲಸವಾಗಬೇಕಿದೆ. ಮಂಟೇಸ್ವಾಮಿ, ರಾಚಪ್ಪಾಜಿ, ಸಿದ್ದಪ್ಪಾಜಿ ಸಾರಿದ ಸಂದೇಶಗಳನ್ನು ಈ ಸಮಾಜಕ್ಕೆ ತಲುಪಿಸುವ ಕೆಲಸ ಬಹಳ ಮಹತ್ತರವಾದುದು. ಇಂತಹ ಅನೇಕ ಮಹತ್ಕಾರ್ಯಗಳನ್ನು ನೂತನ ಅಧ್ಯಯನ ಪೀಠ ಕೈಗೊಳ್ಳಲಿ ಎಂದು ಹಾರೈಸಿದರು.

ವರ್ಚಸ್ವಿ ಶ್ರೀ ಶ್ರೀಕಂಠ ಸಿದ್ಧಲಿಂಗ ರಾಜೇ ಅರಸ್‌ರವರು ಮೈಸೂರು ವಿಶ್ವವಿದ್ಯಾನಿಲಯ ಮಂಟೇಸ್ವಾಮಿ, ರಾಚಪ್ಪಾಜಿ ಮತ್ತು ಸಿದ್ಧಪ್ಪಾಜಿಗಳ ಕುರಿತು ಸಂಶೋಧನೆ ಕೈಗೊಳ್ಳಲು ಒಂದು ಉತ್ತಮ ಯೋಜನೆ ರೂಪಿಸಿ ಅಧ್ಯಯನ ಪೀಠವನ್ನು ಸ್ಥಾಪಿಸಿರುವುದು ಅತ್ಯಂತ ಸಂತಸದ ಸಂಗತಿ. ಈ ಯೋಜನೆಗೆ ಬೇಕಾದ ಎಲ್ಲ ಸಹಾಯ–ಸಹಕಾರಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ಜಾನಪದ ವಿದ್ವಾಂಸರಾದ ಪ್ರೊ. ಕೃಷ್ಣಮೂರ್ತಿ ಹನೂರರವರು ಚಾಮರಾಜನಗರ, ಮೈಸೂರು ಮತ್ತು ಮಂಡ್ಯ ಭಾಗದ ಎಲ್ಲ ವರ್ಗದ ಜನರೂ ಮತಭೇದವಿಲ್ಲದೆ ಮಂಟೇಸ್ವಾಮಿ ಸಂಸ್ಕೃತಿಯನ್ನು ಅನುಸರಿಸುತ್ತಾ ಬಂದಿದ್ದಾರೆ. ನಾವು ಕನಿಷ್ಟ ಎಂದು ಎಲ್ಲಿ ಎಂದು ತಿಳಿದುಕೊಂಡಿದ್ದೇವೆಯೊ ಅಲ್ಲಿಯೆ ಮಹತ್ವವಿದೆ, ಅದೇ ಮಾತಿನ ಮಹಾಕಾವ್ಯವಾಗಿದೆ ಎಂದರು.

ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್‌ರವರು ಚಾಮರಾಜನಗರ ಜಿಲ್ಲೆಯ ಶ್ರೀಮಂತ ಪರಂಪರೆಯ ಪವಾಡ ಪುರುಷರಾದ ಮಂಟೇಸ್ವಾಮಿ, ರಾಚಪ್ಪಾಜಿ, ಸಿದ್ದಪ್ಪಾಜಿ ಅವರು ನೀಡಿರುವ ಜನಪದ ಸಾಹಿತ್ಯ, ತತ್ತ್ವಾದರ್ಶಗಳು, ಕಾವ್ಯಗಳು ಇಂದಿಗೂ ಜನಮಾನಸದಲ್ಲಿ ನೆಲೆಯೂರಿವೆ ಎಂದು ತಿಳಿಸಿದರು.

ಕುಲಸಚಿವರಾದ ಶ್ರೀ ಆರ್. ಶಿವಪ್ಪನವರು ನಾಗರಿಕತೆಯನ್ನು ಕಟ್ಟುವಲ್ಲಿ ಮಂಟೇಸ್ವಾಮಿ ಕಾವ್ಯ ಒಂದು ದೊಡ್ಡ ಕೊಡುಗೆಯನ್ನು ನೀಡಿದೆ. ಈ ಕಾವ್ಯ ರಚನೆಯು ಸರಳವಾಗಿರುವುದರಿಂದ ಎಲ್ಲರಿಗೂ ಮುಟ್ಟಿದೆ. ಜಾನಪದರು ಬಹಳ ದೊಡ್ಡ ಜ್ಞಾನ ಪರಂಪರೆಯನ್ನು ನೀಡಿ ಹೋಗಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದಿಂದ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್, ಶ್ರೀ ಆರ್. ಮಹೇಶ್ ಮಾತನಾಡಿದರು. ಶ್ರೀ ನೀಲಗಾರ ಬಸಪ್ಪ ಪ್ರಾರ್ಥಿಸಿದರು. ಪ್ರೊ. ಹನೂರು ಕೃಷ್ಣಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಬಸವಣ್ಣ ಸ್ವಾಗತಿಸಿದರು. ಶ್ರೀ ಸಿ.ಎಂ. ನರಸಿಂಹಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

**ಆಸ್ಪತ್ರೆಗಳನ್ನು ನಡೆಸುವುದು ಸವಾಲಿನ ಕೆಲಸ**

ಆಸ್ಪತ್ರೆಗಳನ್ನು ನಡೆಸುವುದು ಸವಾಲಿನ ಕೆಲಸ. ಆದರೆ ಸ್ಪರ್ಶ ಆಸ್ಪತ್ರೆ ಅದನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗುತ್ತಿದೆ ಎಂದು ಪರಮಪೂಜ್ಯ ಜಗದ್ಗುರುಗಳು ನವೆಂಬರ್ 14ರಂದು ಬೆಂಗಳೂರಿನ ಇನ್‌ಫ್ಯಾಂಟ್ರಿ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಸ್ಪರ್ಶ ಸ್ತ್ರೀಯರ ಮತ್ತು ಮಕ್ಕಳ ಆಸ್ಪತ್ರೆಯ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವದಿಸುತ್ತಾ ತಿಳಿಸಿದರು.

ಕೆಲವರು ವರ್ಷಕ್ಕೆ ಐದಾರು ಆಸ್ಪತ್ರೆಗಳನ್ನು ನಿರ್ಮಿಸುತ್ತಾರೆ. ಆದರೆ ಮರುವರ್ಷವೇ ಅವುಗಳು ಮುಚ್ಚಿಹೋಗಿರುತ್ತವೆ. ಕಾರಣ ಅವುಗಳನ್ನು ನಡೆಸುವುದು ಅತ್ಯಂತ ಜವಾಬ್ದಾರಿಯ ಕೆಲಸ. ಸ್ಪರ್ಶ ಆಸ್ಪತ್ರೆ ಈ ನಿಟ್ಟಿನಲ್ಲಿ ಅತ್ಯಂತ ನಿಧಾನವಾಗಿ ಎಚ್ಚರಿಕೆಯ ಹೆಜ್ಜೆಗಳನ್ನು ಇಟ್ಟು ಇದುವರೆಗೂ ಏಳು ಆಸ್ಪತ್ರೆಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ಮಿಸಿ ನಿರ್ವಹಿಸುತ್ತಿದೆ. ಈ ನಿಟ್ಟಿನಲ್ಲಿ ಡಾ. ಶರಣ್ ಪಾಟೀಲ್‌ರವರ ಶ್ರಮ ಅತ್ಯಂತ ಮಹತ್ವದ್ದು ಎಂದು ಹೇಳಿದರು.

ಮಾಜಿ ಸಚಿವರು ಮತ್ತು ಶಾಸಕರಾದ ಶ್ರೀ ಶಾಮನೂರು ಶಿವಶಂಕರಪ್ಪನವರು ಸ್ಪರ್ಶ ಆಸ್ಪತ್ರೆ ತನ್ನ ಸೇವೆಯಿಂದಲೇ ಉತ್ತಮ ಹೆಸರನ್ನು ಗಳಿಸಿದೆ. ಆಸ್ಪತ್ರೆಗಳನ್ನು ಆರಂಭಿಸುವುದು ಸುಲಭವಾದ ಮಾತಲ್ಲ. ಬೆಂಗಳೂರಿನಂತಹ ಮಹಾನಗರಕ್ಕೆ ಹೆಚ್ಚುತ್ತಿರುವ ಜನಸಂಖ್ಯೆ ದೃಷ್ಟಿಯಿಂದ ಈಗಿರುವ ಆಸ್ಪತ್ರೆಗಳು ಕಡಿಮೆಯೇ. ಹೀಗಾಗಿ ಜನರು ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಕೊಡಬೇಕು ಎಂದರು.

ನಿವೃತ್ತ ಗೌ. ನ್ಯಾಯಮೂರ್ತಿಗಳಾದ ಡಾ. ಶಿವರಾಜ್ ವಿ. ಪಾಟೀಲ್‌ರವರು ಜನರು ಆಸ್ಪತ್ರೆ ಮತ್ತು ನ್ಯಾಯಾಲಯಗಳಿಗೆ ಮಾತ್ರ ತಮ್ಮ ನೋವು ಮತ್ತು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಬರುತ್ತಾರೆ. ಹೀಗಾಗಿ ಅಲ್ಲಿನ ಸಿಬ್ಬಂದಿಯವರು ಮಾನವೀಯತೆ ಮತ್ತು ಅನುಕಂಪವನ್ನು ಹೊಂದಿರಬೇಕು. ನರಳುತ್ತಾ ಬಂದವರು ನಗುನಗುತ್ತಾ ಇಲ್ಲಿಂದ ಹೊರಹೋಗಬೇಕು. ಅದು ನಿಜವಾದ ಯಶಸ್ಸು ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್‌ರವರು ಕೋವಿಡ್ ಸಂದರ್ಭದಲ್ಲಿ ಆರೋಗ್ಯ ಸೇವೆ ಎಷ್ಟು ಮುಖ್ಯ ಎಂಬುದನ್ನು ನಾವೆಲ್ಲ ಅರಿತುಕೊಂಡಿದ್ದೇವೆ. ಹಗಲು ರಾತ್ರಿಯೆನ್ನದೆ ವೈದ್ಯರು ಮತ್ತು ಸಿಬ್ಬಂದಿಗಳು ಸೇವೆ ಸಲ್ಲಿಸಿದ್ದಾರೆ. ಇಂದು ಸ್ಪರ್ಶ ಆಸ್ಪತ್ರೆ ಮಹಿಳೆಯರು ಮತ್ತು ಮಕ್ಕಳ ಆರೋಗ್ಯಕ್ಕೆ ಒತ್ತು ನೀಡಿ ಈ ಅಸ್ಪತ್ರೆಯನ್ನು ಆರಂಭಿಸಿದೆ. ಇಲ್ಲಿಗೆ ಬಂದವರು ಬೇಗ ಗುಣಮುಖರಾಗಿ ಹಿಂದಿರುಗಲಿ ಎಂದರು.

ಕಾರ್ಯಕ್ರಮದಲ್ಲಿ ಶಾಸಕರುಗಳಾದ ಎನ್.ಎ. ಹ್ಯಾರಿಸ್, ಶ್ರೀ ಎಸ್.ಎಸ್. ಮಲ್ಲಿಕಾರ್ಜುನರವರು ಮಾತನಾಡಿದರು. ಕು. ಅಪ್ರಮೇಯ, ಕು. ಜೋಶಿತ, ಕು. ಅಭಿಷ್ಯ ಪ್ರಾರ್ಥಿಸಿದರು. ಡಾ. ಶರಣ್ ಎಸ್. ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಶಿವಕುಮಾರ್ ವಂದಿಸಿದರು. ಶ್ರೀಮತಿ ಅಪರ್ಣ ಕಾರ್ಯಕ್ರಮ ನಿರೂಪಿಸಿದರು.

**ದ್ವೇಷ ಅಳಿದು ಪ್ರೀತಿ ಮೂಡಲಿ**

ಮಠದ ಸೇವಾಕಾರ್ಯದ ಜೊತೆಗೆ ಸಮಾಜವನ್ನು ಸಂಘಟಿಸಿ ಮುನ್ನಡೆಸುವ ಕಾರ್ಯವನ್ನು ಮಠಾಧೀಶರು ಮಾಡುತ್ತಿದ್ದಾರೆ. ಸಂತರು, ಸೂಫಿಗಳು ಸಮಾಜದಲ್ಲಿ

ಸಾಮರಸ್ಯವನ್ನು ಮೂಡಿಸಿ, ದ್ವೇಷವನ್ನು ಹೋಗಲಾಡಿಸಿ, ಮನಸ್ಸುಗಳಲ್ಲಿ ಪ್ರೀತಿಯನ್ನು ಬಿತ್ತುವ ಸಂದೇಶಗಳನ್ನು ನೀಡಿದ್ದಾರೆ ಎಂದು ಪರಮಪೂಜ್ಯ ಜಗದ್ಗುರುಗಳು ನವೆಂಬರ್ 15ರಂದು ಕಲಬುರಗಿಯ ಎನ್.ಜೆ. ಕಲಬುರಗಿ ಕಲ್ಯಾಣ ಮಂಟಪ ಉದ್ಘಾಟನೆ ಹಾಗೂ ಶ್ರೀ ಸುಲಫಲಮಠದ ಜಗದ್ಗುರು ಡಾ. ಶ್ರೀ ಸಾರಂಗಧರ ದೇಶಿಕೇಂದ್ರ ಮಹಾಸ್ವಾಮಿಗಳ 40ನೇ ವರ್ಷದ ಪಟ್ಟಾಧಿಕಾರ ಪೀಠಾರೋಹಣ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು.

ಕಲಬುರಗಿ ಸೂಫಿ ಸಂತರ ಸಮಾಗಮದ ನೆಲೆಯಾಗಿದೆ. ಪರಮಪ್ರೇಮವೆ ಬದುಕಿನ ಅವಿಭಾಜ್ಯ ಅಂಗ. ಸೂಫಿ ಸಂತರು ಮತ್ತು ಶರಣರು ಅದನ್ನೆ ಪ್ರತಿಪಾದಿಸಿದರು. ಸತ್ಯದ ಪರ ಕೆಲಸಗಳನ್ನು ಮಾಡಲು ಯಾವುದೇ ಭೀತಿ ಬೇಡ. ಸ್ವಾಮಿತ್ವವನ್ನು ಸ್ವಇಚ್ಛೆಯಿಂದ ಪಡೆದು ಸೇವಾಕಾರ್ಯದಲ್ಲಿ ತೊಡಗಿರುವ ಸುಲಫಲಮಠದ ಶ್ರೀಗಳು ಉತ್ತಮ ಕಾರ್ಯಗಳನ್ನು ಮಾಡುತ್ತಿದ್ದಾರೆ. ನ್ಯಾಯ ನಿಷ್ಠುರ ಸ್ವಭಾವದವರು. ಅವರು ಮಠವನ್ನು ಬೆಳೆಸಿದ ರೀತಿ ಅನುಕರಣೀಯ ಎಂದು ಹೇಳಿದರು.

ಚಿತ್ರದುರ್ಗ ಶ್ರೀ ಮುರುಘಾಮಠದ ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ಜೀವನದಲ್ಲಿ ಸ್ವಾರಸ್ಯ ಬಹಳ ಮುಖ್ಯ. ಜೀವನ ಸ್ವಾರಸ್ಯಮಯವಾಗಬೇಕಾದರೆ ಸಾಮರಸ್ಯ ಅತಿ ಅವಶ್ಯ. ಇಂತಹ ಸಾಮರಸ್ಯವನ್ನು ದೇಶದ ಉದ್ದಗಲಕ್ಕೂ ಬೆಳೆಸುವುದು ಇಂದಿನ ಅಗತ್ಯ. ಕಲಬುರಗಿ ಸಾಮರಸ್ಯಕ್ಕೆ ಉತ್ತಮ ಉದಾಹರಣೆ. ಇಲ್ಲಿನ ಸೂಫಿಗಳು ಹಾಗೂ ಮಠಗಳು ಅದಕ್ಕೆ ಭದ್ರ ಬುನಾದಿ ಹಾಕಿವೆ ಎಂದರು.

ಶ್ರೀ ನಿಡುಮಾಮಿಡಿ ಮಠದ ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸ್ವಾಮಿಗಳು ಶರಣತತ್ತ್ವಗಳಂತೆ ಸೂಫಿ ತತ್ತ್ವಗಳು ಜನಪರವಾದವು. ಜನರ ಉದ್ಧಾರಕ್ಕಾಗಿಯೇ ಇಂಥ ತತ್ತ್ವಗಳು ಬೆಳೆದವು. ಈ ಎಲ್ಲ ತತ್ತ್ವಗಳನ್ನು ಮೈಗೂಡಿಸಿಕೊಂಡು ಮುನ್ನಡೆಯುತ್ತಿರುವವರು ಸುಲಫಲ ಮಠದ ಶ್ರೀಗಳು. ಎಲ್ಲ ಕಾರ್ಯಗಳನ್ನು ಕ್ರಿಯಾಶೀಲವಾಗಿ ಮಾಡುತ್ತಾರೆ. ನ್ಯಾಯ ಮತ್ತು ಧರ್ಮದ ಪರ ಸದಾ ಹೋರಾಡುವವರು ಎಂದು ತಿಳಿಸಿದರು.

ಸುಲಫಲ ಮಠದ ಶ್ರೀಗಳು ಬಡವರು ಮತ್ತು ಭಕ್ತರ ಪರವಾಗಿ ಕೆಲಸ ಮಾಡಿರುವ ಬಹುದೊಡ್ಡ ಸಮಾಧಾನವಿದೆ. ಅನ್ಯಾಯಕ್ಕೆ ಒಳಗಾದವರಿಗೆ ಆಶ್ರಯ ನೀಡುವುದೇ ನಮ್ಮ ಧ್ಯೇಯ. ಜನರ ಸಮಸ್ಯೆಗಳಿಗೆ, ಸಮಾಜದ ಬೇಕುಗಳಿಗೆ ಸದಾ ಹೋರಾಟವನ್ನು ಮಾಡುತ್ತೇವೆ ಎಂದು ತಿಳಿಸಿದರು.

ರೋಜಾ ಖುರ್ದ ದರ್ಗಾದ ಶ್ರೀ ಸೈಯದ್ ಯಾದುಲ್ಲಾ ಹುಸೇನಿಯವರು ಸುಲಫಲ ಮಠದ ಶ್ರೀಗಳು ಮಾಡುವ ಕಾರ್ಯಗಳು ಅಭಿನಂದನೀಯವಾಗಿವೆ.

ಅವರ ಪೀಠಾರೋಹಣದ 40ನೇ ವರ್ಷದ ಸಮಾರಂಭ ಇಂದು ನೂತನವಾಗಿ ಉದ್ಘಾಟನೆಯಾಗಿರುವ ಕಲ್ಯಾಣ ಮಂಟಪದಲ್ಲಿ ನಡೆದಿರುವುದರಿಂದ ಇದು ಉತ್ತಮ ಕಾರ್ಯಗಳಿಗೆ ಬಳಕೆಯಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀ ಸುಲಫಲ ಮಠದ ಪರಿಚಯ ಪತ್ರವನ್ನು ಬಿಡುಗಡೆಗೊಳಿಸಲಾಯಿತು. ಶ್ರೀ ಮಹಮ್ಮದ್ ಅಲಾವುದ್ದೀನ್ ಜುನೇದಿಯವರನ್ನು ಸನ್ಮಾನಿಸಲಾಯಿತು. ವಿಧಾನಸಭೆಯ ವಿರೋಧಪಕ್ಷದ ಮುಖ್ಯಸಚೇತಕರಾದ ಡಾ. ಅಜಯ್ ಸಿಂಗ್, ಶಾಸಕರುಗಳಾದ ಶ್ರೀ ದತ್ತಾತ್ರೇಯ ಸಿ. ಪಾಟೀಲ ರೇವೂರ, ಶ್ರೀ ಬಿ.ಜಿ. ಪಾಟೀಲರವರುಗಳು ಮಾತನಾಡಿದರು. ಶ್ರೀ ಸೈಯದ್ ಇಸ್ಲಾಮುದ್ದಿನ್ ಅಹ್ಮದ್ ಖಾದ್ರಿ, ಶ್ರೀ ಸೈಯದ್ ಶಹಾ ನಖೀಯುದ್ದಿನ್ ಅಹ್ಮದ್ ಖಾದ್ರಿ, ಶ್ರೀ ಚಂದು ಪಾಟೀಲ, ಶ್ರೀ ನೀಲಕಂಠ ಮೂಲಗೆ, ಶ್ರೀ ರಾಜು ಲೇಂಗಟಿ ಮೊದಲಾದವರು ಉಪಸ್ಥಿತರಿದ್ದರು. ಸೊನ್ನ ಶ್ರೀ ವಿರಕ್ತಮಠದ ಡಾ. ಶ್ರೀ ಶಿವಾನಂದ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಶಿವರುದ್ರಯ್ಯ ಗವಾಯಿಗಳು ವಚನ ಗಾಯನ ಮಾಡಿದರು.

**ಶರೀರಕ್ಕೆ ಸ್ವಾಸ್ಥ್ಯ ತಂದುಕೊಡುವ ಭರತನಾಟ್ಯ**

ಯೋಗದ ಪ್ರತಿಯೊಂದು ಅಂಶಗಳನ್ನು ಭರತನಾಟ್ಯ ಒಳಗೊಂಡಿದ್ದು ಇದು ಶರೀರಕ್ಕೆ ಸ್ವಾಸ್ಥ್ಯ ತಂದುಕೊಡುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳು ನವೆಂಬರ್ 23ರಂದು ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ವಸುಂಧರ ಪರ್‌ಫಾರ್ಮಿಂಗ್ ಆರ್ಟ್ಸ್ ಸೆಂಟರ್ ಆಯೋಜಿಸಿದ್ದ ವಸುಂಧರೋತ್ಸವ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು.

ಭಾರತೀಯ ಸಂಸ್ಕೃತಿಯ ಪ್ರತೀಕವಾದ ಭರತ ನಾಟ್ಯವು ಕಲಾವಿದರಿಗೆ ಮತ್ತು ಪ್ರೇಕ್ಷಕರಿಗೆ ಸಂತೋಷವನ್ನುಂಟು ಮಾಡುತ್ತದೆ. ಭರತನಾಟ್ಯಕ್ಕೆ ಪಾಶ್ಚಿಮಾತ್ಯ ದೇಶಗಳಲ್ಲೂ ಹೆಚ್ಚಿನ ಬೆಂಬಲ ಇದೆ. ಆದ್ದರಿಂದ ಕಲಾವಿದರು ಹೆಚ್ಚಿನ ಅಭ್ಯಾಸದಲ್ಲಿ ತೊಡಗಿಕೊಳ್ಳುವ ಮೂಲಕ ನಿರರ್ಗಳವಾಗಿ ಪ್ರದರ್ಶಿಸಬಹುದು. ಕಲಾವಿದರಿಗೆ ನಿರಂತರವಾಗಿ ಸಾಧನೆ ಮಾಡುವ ಹಂಬಲವಿರಬೇಕು. ಈ ನಿಟ್ಟಿನಲ್ಲಿ ವಸುಂಧರ ದೊರೆಸ್ವಾಮಿಯವರು ನಾಟ್ಯದ ಜೊತೆಗೆ ಯೋಗಾಭ್ಯಾಸದಲ್ಲೂ ತೊಡಗಿಸಿಕೊಂಡಿದ್ದಾರೆ ಎಂದು ಹೇಳಿದರು.

ಉದ್ಯಮಿಗಳಾದ ಡಾ. ಜಗನ್ನಾಥ ಶೆಣೈರವರು ಕಲೆ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ. ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕು. ಕಲೆಯನ್ನು ಪೋಷಿಸುವಲ್ಲಿ ಮಹಿಳೆಯರ ಪಾತ್ರ ಅಪಾರವಾದುದು ಎಂದರು.

ಕಾರ್ಯಕ್ರಮದಲ್ಲಿ ಡಾ. ವಸುಂಧರಾ ದೊರೆಸ್ವಾಮಿಯವರು ಕಿತ್ತೂರು ರಾಣಿ ಚೆನ್ನಮ್ಮ ಕುರಿತು ನೃತ್ಯರೂಪಕ ಪ್ರದರ್ಶಿಸಿದರು. ಮೈಸೂರು ಉತ್ತರ ರೋಟರಿ ಅಧ್ಯಕ್ಷರಾದ

ಶ್ರೀ ಎಲ್. ಚನ್ನಬಸವರಾಜು, ಶ್ರೀಮತಿ ಸವಿತಾ ರಮೇಶ್, ಡಾ. ಜ್ಯೋತಿ ಶಂಕರ್, ಶ್ರೀ ಟಿ.ಆರ್. ಹರೀಶ್, ವಿದ್ವಾನ್ ಶ್ರೀವತ್ಸ ಮೊದಲಾದವರು ಉಪಸ್ಥಿತರಿದ್ದರು.

**ಪೂರ್ವಿಕರ ಸಂಸ್ಕೃತಿಯನ್ನು ಯುವಪೀಳಿಗೆ ಮುಂದುವರೆಸಿಕೊಂಡು ಹೋಗಬೇಕು**

ಪೂರ್ವಿಕರ ಸಂಸ್ಕೃತಿಯನ್ನು ಯುವಪೀಳಿಗೆ ಮುಂದುವರೆಸಿಕೊಂಡು ಹೋಗಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ನವೆಂಬರ್ 23ರಂದು ನಂಜನಗೂಡು ತಾಲ್ಲೂಕು ವಳಗೆರೆಯ ಶ್ರೀ ತೆನ್ನೂರು ಮಲ್ಲೇಶ್ವರಸ್ವಾಮಿ ನೂತನ ದೇವಸ್ಥಾನ ಹಾಗೂ ವಿಗ್ರಹ ಪ್ರತಿಷ್ಠಾಪನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ತಿಳಿಸಿದರು.

ಹಿಂದೆ ಪೂರ್ವಿಕರು ಗ್ರಾಮಗಳಲ್ಲಿ ಶ್ರದ್ಧಾಭಕ್ತಿಗಳಿಂದ ದೇವಸ್ಥಾನಗಳನ್ನು ನಿರ್ಮಿಸಿ ಪೂಜೆ ಮಾಡುತ್ತಾ ಬಂದಿದ್ದಾರೆ. ಅದೇ ಸಂಸ್ಕೃತಿ ಮತ್ತು ಪರಂಪರೆಯನ್ನು ಇದುವರೆಗೂ ಜತನದಿಂದ ಕಾಪಾಡಿಕೊಂಡು ಬರಲಾಗಿದೆ. ಭಾರತೀಯರು ಸಂಸ್ಕೃತಿಯ ಆರಾಧಕರು. ಸಂಸ್ಕೃತಿ ಎನ್ನುವುದು ಈ ನೆಲದ ಮಣ್ಣಿನಲ್ಲೇ ಇದೆ. ಅದನ್ನು ಇಂದಿನ ಯುವಕರು ಮರೆಯದೆ ಮುಂದುವರೆಸಿಕೊಂಡು ಹೋಗಬೇಕು ಎಂದು ಹೇಳಿದರು.

ಚುಂಚನಹಳ್ಳಿ, ಬರಡನಪುರ, ದೇವಿರಮ್ಮನಹಳ್ಳಿ, ಹಲ್ಲರೆ, ಕಾರ್ಯಸಂಗಮ, ಪುರದ ಮಠಗಳ ಶ್ರೀಗಳು, ಮಾಜಿ ಶಾಸಕರಾದ ಶ್ರೀ ಕಳಲೆ ಕೇಶವಮೂರ್ತಿ, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಎಸ್. ಮಹದೇವಯ್ಯ, ಖಾದಿ ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರಾದ ಶ್ರೀ ಕೃಷ್ಣಪ್ಪಗೌಡ, ಶ್ರೀ ಎಸ್.ಎಂ. ಕೆಂಪಣ್ಣ, ಶ್ರೀ ಕುಂಬರಹಳ್ಳಿ ಸುಬ್ಬಣ್ಣ, ಶ್ರೀ ಶಿವಮೂರ್ತಿ ನಂಜನಗೂಡು ಮೊದಲಾದವರು ಉಪಸ್ಥಿತರಿದ್ದರು. ಹುಸ್ಕೂರು ಶ್ರೀ ಮಲ್ಲಿಕಾರ್ಜುನರವರು ಉಪನ್ಯಾಸ ನೀಡಿದರು. ಶ್ರೀ ವಿ.ಎಂ. ಶಿವಮಲ್ಲಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

**ಸಾವಯವ ಕೃಷಿಯಿಂದ ಆರೋಗ್ಯ ವೃದ್ಧಿ**

ಸಾವಯವ ಕೃಷಿಯಿಂದ ಆರೋಗ್ಯ ವೃದ್ಧಿಯಾಗುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳು ನವೆಂಬರ್ 22ರಂದು ನಂಜನಗೂಡು ತಾಲ್ಲೂಕು ಹುಳಿಮಾವು ಗ್ರಾಮದಲ್ಲಿ ಶ್ರೀ ಎಚ್.ಪಿ. ಮಹಾದೇವಸ್ವಾಮಿಯವರ ಶ್ರೀ ಶಿವರಾತ್ರೀಶ್ವರ ಸಾವಯವ ಕೃಷಿ ಫಾರಂ ಉದ್ಘಾಟಿಸಿ ತಿಳಿಸಿದರು.

ಸಾವಯವ ಪದ್ಧತಿಯಲ್ಲಿ ವಿವಿಧ ಬೆಳೆಗಳನ್ನು ಮಹಾದೇವಸ್ವಾಮಿಯವರು ಬೆಳೆಯುತ್ತಿದ್ದು, ರಾಸಾಯನಿಕ ಮುಕ್ತ ಆಹಾರವನ್ನು ನೀಡಲು ಈ ಫಾರಂನ್ನು ಪ್ರಾರಂಭಿಸಿದ್ದಾರೆ. ಅವರಿಗೆ ಎಲ್ಲರೂ ಸಹಕಾರ ನೀಡಿ, ಅವರ ರೀತಿ ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡರೆ ಮಣ್ಣು ಹಾಗೂ ಮಾನವನ ಆರೋಗ್ಯ

ಉತ್ತಮವಾಗಿರುತ್ತದೆ ಎಂದು ಹೇಳಿದರು.

ಮೈಸೂರು ಶುಗರ್ಸ್ ಕಾರ್ಖಾನೆಯ ಮಾಜಿ ಅಧ್ಯಕ್ಷರಾದ ಶ್ರೀ ನಾಗರಾಜುರವರು ಎಲ್ಲರೂ ಕಡಿಮೆ ಖರ್ಚಿನಲ್ಲಿ ಸಾವಯವ ಕೃಷಿಯನ್ನು ಅಳವಡಿಸಿಕೊಂಡು ಹೆಚ್ಚು ಆದಾಯ ಗಳಿಸಬಹುದು ಎಂದರು.

ಶ್ರೀ ಹೆಚ್.ಪಿ. ಮಹಾದೇವಸ್ವಾಮಿಯವರು ಜಮೀನಿನಲ್ಲಿ ಬಾಳೆ ಸೇರಿದಂತೆ 40 ವಿವಿಧ ಹಣ್ಣಿನ ಬೆಳೆಗಳನ್ನು ಸಾವಯವ ಪದ್ಧತಿಯಲ್ಲಿ ಬೆಳೆಯಲಾಗುತ್ತಿದ್ದು, ಉತ್ತಮ ರುಚಿಯನ್ನು ಹೊಂದಿರುತ್ತವೆ, ಆರೋಗ್ಯಕ್ಕೂ ಉತ್ತಮವಾಗಿವೆ ಎಂದು ಹೇಳಿದರು.

ಕಟ್ಟೆಮನುವಿನಹಳ್ಳಿ, ಚುಂಚನಹಳ್ಳಿ ಮಠಗಳ ಶ್ರೀಗಳು, ಎಪಿಎಂಸಿ ಸದಸ್ಯರಾದ ಶ್ರೀ ಆಲತ್ತೂರು ನಂಜುಂಡಸ್ವಾಮಿ, ಶ್ರೀ ಹೊಸಕೋಟೆ ದೇವಣ್ಣ ಮೊದಲಾದವರು ಉಪಸ್ಥಿತರಿದ್ದರು.

**ದೇವಾಲಯಗಳ ಜೀರ್ಣೋದ್ಧಾರ ಪುಣ್ಯದ ಕಾರ್ಯ**

ಶತಮಾನಗಳ ಇತಿಹಾಸವಿರುವ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡುವುದು ಪುಣ್ಯದ ಕಾರ್ಯ ಎಂದು ಪರಮಪೂಜ್ಯ ಜಗದ್ಗುರುಗಳು ನವೆಂಬರ್ 29ರಂದು ತುಮಕೂರಿನ ಅರಳೇಪೇಟೆ ಶ್ರೀ ಬಸವೇಶ್ವರಸ್ವಾಮಿ ದೇವಾಲಯದ ಜೀರ್ಣೋದ್ಧಾರ ಹಾಗೂ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು.

ಪೂಜ್ಯ ಭಾವನೆಯಿಂದ ಭಕ್ತಿ ತರ್ಪಣ ಮಾಡಲು ಇರುವ ಪವಿತ್ರ ಕೇಂದ್ರವೇ ದೇವಾಲಯ. ಅಲ್ಲಿಗೆ ಹೋದಾಗ ಮನಸ್ಸು ಪವಿತ್ರಗೊಳ್ಳುತ್ತದೆ. ಮನಸ್ಸಿನ ಪ್ರಫುಲ್ಲತೆಗಾಗಿ ದೇವಾಲಯಕ್ಕೆ ಹೋಗಬೇಕು. ತುಮಕೂರಿನಲ್ಲಿ ಅನೇಕ ಪವಿತ್ರವಾದ ದೇವಾಲಯಗಳಿವೆ. ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರು ಸೇರಿದಂತೆ ಶ್ರೀ ಶಿವಕುಮಾರ ಮಹಾಸ್ವಾಮಿಗಳಂತಹ ಮಹಾಮಹಿಮರು ಈ ನೆಲದಲ್ಲಿ ನೆಲೆಸಿದ್ದರು. ಅವರ ತಪಸ್ಸಿನ ಫಲದಿಂದ ಇಲ್ಲಿನ ಜನ ನೆಮ್ಮದಿಯಿಂದ ಬದುಕುತ್ತಿದ್ದಾರೆ ಎಂದು ಹೇಳಿದರು.

ಕನಕಪುರದ ಶ್ರೀ ದೇಗುಲಮಠದ ಶ್ರೀ ಚನ್ನಬಸವ ಸ್ವಾಮಿಗಳು ಜೀವನದಲ್ಲಿ ನಂಬಿಕೆ, ಶ್ರದ್ಧೆ, ನಿಷ್ಠೆ ಹಾಗೂ ಸಾಧನೆಯತ್ತ ಚಿತ್ತ ಬಹಳ ಮುಖ್ಯ. ಯಾವುದೇ ಕೆಲಸಗಳ ಹಿಂದಿನ ಮುಖ್ಯ ಕಾರಣೀಭೂತರು ನಾವೇ ಆಗಿರುತ್ತೇವೆ. ನಮ್ಮ ಮನಸ್ಸಿನ ಆಲೋಚನೆಗಳ ಮೇಲೆ ನಮ್ಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂದರು.

ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್‌ರವರು ಐದು ಶತಮಾನಗಳ ಹಿಂದಿನ ದೇವಾಲಯವನ್ನು

ಜೀರ್ಣೋದ್ಧಾರಗೊಳಿಸಿರುವುದು ಸಂತಸದ ಸಂಗತಿ. ಸಾರ್ವಜನಿಕ ಜೀವನದಲ್ಲಿ ಮಾಡುವ ಸೇವೆ ಇತಿಹಾಸದ ಒಂದು ಭಾಗವಾಗುತ್ತದೆ. ಇಂದು ಬಸವೇಶ್ವರ ದೇವಾಲಯದ ನಿರ್ಮಾಣ ಇತಿಹಾಸದ ಭಾಗವಾಗಲಿದೆ. ದೇವಾಲಯಗಳು ಭಗವಂತನೊಂದಿಗೆ ಅನುಸಂಧಾನ ಮಾಡಲು ಇರುವ ಪವಿತ್ರ ತಾಣಗಳು ಎಂದರು.

ರಾಮೇನಹಳ್ಳಿ, ಹುಲಿಯೂರುದುರ್ಗ ಮಠದ ಶ್ರೀಗಳು, ಸಚಿವರಾದ ಶ್ರೀ ಬಿ.ಸಿ. ನಾಗೇಶ್, ಶ್ರೀ ಸಿ.ವಿ. ಮಹದೇವಯ್ಯ, ಶ್ರೀ ಕೋರಿ ಮಂಜುನಾಥ್ ಮೊದಲಾದವರು ಉಪಸ್ಥಿತರಿದ್ದರು. ವೀರಶೈವ ಸಮಾಜ ಸೇವಾ ಸಮಿತಿ ಅಧ್ಯಕ್ಷರಾದ ಶ್ರೀ ಟಿ.ಬಿ. ಶೇಖರ್ ಮಾತನಾಡಿದರು. ಉಪಾಧ್ಯಕ್ಷರಾದ ಶ್ರೀ ಎಸ್.ಜಿ. ಚಂದ್ರಮೌಳಿ ಸ್ವಾಗತಿಸಿದರು. ಶ್ರೀಮತಿ ವಿಮಲ ಶಿವಸ್ವಾಮಿ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಶ್ರೀ ಎಂ.ವಿ. ನಾಗಣ್ಣ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಶಿವಲಿಂಗಮ್ಮ ವಂದಿಸಿದರು.

**ಡಾ. ಗುಬ್ಬಿಗೂಡು ರಮೇಶ್‌ರವರ 'ದಡ ಸೇರದ ಧಾವಂತಗಳು' ಕೃತಿ ಲೋಕಾರ್ಪಣೆ**

ಅಂಕಣ ಬರವಣಿಗೆ ತೀರಾ ಗಂಭೀರವಾದದ್ದು, ಏನನ್ನು ಬರೆದರೂ ಸೂಕ್ಷ್ಮವಾಗಿ ಗಮನಿಸಿ ಬರೆಯಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ನವೆಂಬರ್ 25ರಂದು ಮೈಸೂರಿನ ರಮಾಗೋವಿಂದ ರಂಗಮಂದಿರದಲ್ಲಿ ವಿಸ್ಮಯ ಬುಕ್ ಹೌಸ್ ಮತ್ತು ಸಾಹಿತ್ಯ ಲೋಕದ ವತಿಯಿಂದ ಅಂಕಣಕಾರರಾದ ಡಾ. ಗುಬ್ಬಿಗೂಡು ರಮೇಶ್‌ರವರ 'ದಡ ಸೇರದ ಧಾವಂತಗಳು' ಕೃತಿಯ ಲೋಕಾರ್ಪಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಹೇಳಿದರು. ಇಂತಹ ಲೇಖನಗಳು ಸಮಾಜಕ್ಕೆ ಅವಶ್ಯವಾಗಿವೆ. ಪಕ್ಷಿಗಳು ಎಲ್ಲಿಂದಲೋ ವಸ್ತುಗಳನ್ನು ತಂದು ಗೂಡುಕಟ್ಟಿ ಹೊಸ ಆಕಾರ ಸೃಷ್ಟಿಸುವಂತೆ ಅಂಕಣಕಾರರಾದವರು ಮಾಹಿತಿಗಳನ್ನು ಸಂಗ್ರಹಿಸಿ ಸಾಹಿತ್ಯಲೋಕಕ್ಕೆ ಹೊಸರೂಪ ಕೊಡುವ ಕೆಲಸ ಮಾಡುತ್ತಾರೆ ಎಂದು ತಿಳಿಸಿದರು.

ಸಾಹಿತಿಗಳಾದ ಡಾ. ನಾಗತಿಹಳ್ಳಿ ಚಂದ್ರಶೇಖರ್‌ರವರು ಇಂದಿನ ಜನರಲ್ಲಿ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬೆಳೆಸಬೇಕಾಗಿದೆ. ಮುಗ್ಧತೆ ನಾಶವಾಗಿರುವ ಜಗತ್ತಿನಲ್ಲಿ ಇಂದು ನಾವು ಬದುಕುತ್ತಿದ್ದೇವೆ. ಯಾವುದೂ ಹೊಸದೆನಿಸದ, ಕೌತುಕತೆಯೇ ಹಾರಿಹೋಗಿರುವ ಕಾಲದಲ್ಲಿ ಅಂಕಣಗಳನ್ನು ಬರೆಯುವುದು ಸವಾಲಾಗಿದೆ. ಸಾಮಾಜಿಕ ಜಾಲತಾಣಗಳ ಹಾವಳಿಯ ನಡುವೆಯೂ ಪುಸ್ತಕ ಹಣತೆಯಾಗಿ ಕೆಲಸ ಮಾಡುತ್ತದೆ. ಅದೇ ಪುಸ್ತಕಗಳಿಗಿರುವ ಸೊಬಗು ಮತ್ತು ಸೌಂದರ್ಯ ಎಂದು ತಿಳಿಸಿದರು.

ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರರವರು ಎಲ್ಲರೂ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಭಾಷೆ, ವಿಷಯಗಳ ಬಗ್ಗೆ ಬರೆಯುವುದು ಸುಲಭದ ಕೆಲಸವಲ್ಲ, ಆದ್ದರಿಂದ ಸಾಹಿತ್ಯ ಲೋಕವನ್ನು ಬೆಳೆಸುವ ಕೆಲಸವಾಗಬೇಕು ಎಂದರು.

ಮಾಜಿ ಶಾಸಕರಾದ ಶ್ರೀ ವಾಸುರವರು ಅಧ್ಯಕ್ಷತೆ ವಹಿಸಿದ್ದರು. ಡಾ. ವೈ.ಡಿ. ರಾಜಣ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಪ್ರಕಾಶ್ ಚಿಕ್ಕಪಾಳ್ಯ, ಶ್ರೀ ಎ.ಜಿ. ದೇವರಾಜು, ಶ್ರೀ ಶೇಖರ್ ಎಲ್ಐಸಿ ಮೊದಲಾದವರು ಉಪಸ್ಥಿತರಿದ್ದರು.

**ಕಲೆ, ಸಂಸ್ಕೃತಿ, ಸಾಹಿತ್ಯದ ಬೆಳವಣಿಗೆಯಲ್ಲಿ ಜೆಎಸ್ಎಸ್ ಸಂಸ್ಥೆಯ ಕೊಡುಗೆ ಅಪಾರ**

ಕಲೆ, ಸಂಸ್ಕೃತಿ, ಸಾಹಿತ್ಯದ ಬೆಳವಣಿಗೆಯಲ್ಲಿ ಜೆಎಸ್ಎಸ್ ಸಂಸ್ಥೆಯ ಕೊಡುಗೆ ಅಪಾರ ಎಂದು ಸಂಗೀತ ವಿದ್ಯಾನಿಧಿ ಡಾ. ಆರ್.ಕೆ. ಪದ್ಮನಾಭರವರು ಹೇಳಿದರು.

ಡಿಸೆಂಬರ್ 2ರಂದು ಮೈಸೂರಿನ ಜೆಎಸ್ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಜೆಎಸ್ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ ಸಂಗಿತೋತ್ಸವದಲ್ಲಿ ಮಾತನಾಡುತ್ತಾ ಕರ್ನಾಟಕ ಶಾಸ್ತ್ರೀಯ ಸಂಗೀತ ಹಿಂದಿನಿಂದಲೂ ತನ್ನ ಮೂಲತತ್ತ್ವಗಳನ್ನು ಬಿಡದೆ ಒಂದೇ ರೀತಿಯಲ್ಲಿ ನಡೆದುಕೊಂಡು ಬಂದಿದೆ. ಇದಕ್ಕೆ ಸುತ್ತೂರು ಮಠವು ಸಾಕಷ್ಟು ಪ್ರೋತ್ಸಾಹ ನೀಡಿದೆ. ಸಾಮಾಜಿಕ ಸಾಮರಸ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಶ್ರೀಮಠ ಈ ರೀತಿಯ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸಿಕೊಂಡು ಬರುತ್ತಿದೆ ಎಂದರು.

ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರರವರು ಸಂಗೀತ ಪ್ರತಿಯೊಬ್ಬರ ಜೀವನದಲ್ಲೂ ಒಂದು ವಿಭಿನ್ನ ರೀತಿಯ ಪ್ರಭಾವವನ್ನು ಬೀರುತ್ತದೆ. ಸಂಗೀತ ಮನಸ್ಸನ್ನು ಸುಸ್ಥಿತಿಯಲ್ಲಿಡುವುದರ ಜೊತೆಗೆ ಮಾನಸಿಕ ಖಿನ್ನತೆಯನ್ನು ದೂರ ಮಾಡುತ್ತದೆ. ಮಾನಸಿಕ ಒತ್ತಡ ನಿವಾರಣೆಗೆ ಸಂಗೀತವೇ ಚಿಕಿತ್ಸೆ. ಸಮಾಜದಲ್ಲಿ ಸ್ವಾಸ್ಥ್ಯ ನೆಲೆಸಲು ಸಂಗೀತದ ಪಾತ್ರ ಬಹಳ ಮಹತ್ತರವಾದುದು ಎಂದು ತಿಳಿಸಿದರು.

ಕಾರ್ಯಕ್ರಮದ ನಂತರ ಡಾ. ಆರ್.ಕೆ. ಪದ್ಮನಾಭರವರು ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಪ್ರಸ್ತುತ ಪಡಿಸಿದರು. ವಿದ್ವಾನ್ ಮೈಸೂರು ಎಂ. ನಾಗರಾಜ್‌ರವರು ಅಧ್ಯಕ್ಷತೆ ವಹಿಸಿದ್ದರು. ವಿದ್ವಾನ್ ಮೈಸೂರು ಎಂ. ಮಂಜುನಾಥ್ ಸ್ವಾಗತಿಸಿದರು. ಕು. ಲಲಿತ ಹಾಗೂ ಕು. ಅಶ್ವಿನಿ ಪ್ರಾರ್ಥಿಸಿದರು. ಪ್ರೊ. ಕೆ. ರಾಮಮೂರ್ತಿರಾವ್ ವಂದಿಸಿದರು. ಡಾ. ಪೂರ್ಣಿಮ ಕೃಷ್ಣಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

**ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ**
**ಪ್ರೊ. ಮಲೆಯೂರು ಗುರುಸ್ವಾಮಿ ಆಯ್ಕೆ**

ಬೆಂಗಳೂರಿನಲ್ಲಿ ಡಿಸೆಂಬರ್ 3ರಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರುಗಳಾದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಹಾಗೂ ಗದಗ ಶ್ರೀ ತೋಂಟದಾರ್ಯ ಮಠದ ಜಗದ್ಗುರು ಡಾ. ಶ್ರೀ ತೋಂಟದ

ಸಿದ್ಧರಾಮ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕಳೆದ 25 ವರ್ಷಗಳಿಂದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಡಾ. ಗೊ.ರು. ಚನ್ನಬಸಪ್ಪನವರು ವಯೋಮಾನ ಕಾರಣದಿಂದಾಗಿ ಸ್ವಯಂ ನಿವೃತ್ತಿ ಹೊಂದುವ ಇಚ್ಛೆ ವ್ಯಕ್ತಪಡಿಸಿದ ಕಾರಣ ಅವರ ಸ್ಥಾನಕ್ಕೆ ಹಿರಿಯ ಸಾಹಿತಿಗಳಾದ ಪ್ರೊ. ಮಲೆಯೂರು ಗುರುಸ್ವಾಮಿಯವರನ್ನು ಸರ್ವಾನುಮತದಿಂದ ಪರಿಷತ್ತಿನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

**ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 36ನೇ ಪುಣ್ಯಾರಾಧನೆ**

ಸುತ್ತೂರು ಶ್ರೀಕ್ಷೇತ್ರದಲ್ಲಿ ಡಿಸೆಂಬರ್ 8ರಂದು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 36ನೆಯ ಪುಣ್ಯ ಸಂಸ್ಮರಣೆಯ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಗದ್ದುಗೆಯಲ್ಲಿ ರುದ್ರಾಭಿಷೇಕ ಹಾಗೂ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಿದವು.

ಇದೇ ಸಂದರ್ಭದಲ್ಲಿ 2022 ಜನವರಿ–ಫೆಬ್ರವರಿಯಲ್ಲಿ ಜರುಗಲಿರುವ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆ ನಡೆಯಿತು. ಕರೋನಾ ವೈರಾಣು ರೂಪಾಂತರಗೊಂಡು ಓಮಿಕ್ರಾನ್ ವೈರಾಣುಗಳಾಗಿ ಮತ್ತೆ ಕಂಡುಬರುತ್ತಿರುವುದರಿಂದ ಸರ್ಕಾರವು ಆಗಿಂದಾಗ್ಗೆ ಎಚ್ಚರಿಕೆಯ ಸೂಚನೆಗಳನ್ನು ನೀಡುತ್ತಿರುವುದರಿಂದ ಕಳೆದ ವರ್ಷದಂತೆಯೇ ಜಾತ್ರಾ ಮಹೋತ್ಸವವನ್ನು ಸರಳ ರೀತಿಯಲ್ಲಿ ಆಚರಿಸಲು ತೀರ್ಮಾನಿಸಲಾಯಿತು. ಶ್ರೀಮಠ ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ 2022ನೇ ವರ್ಷದ ಗೋಡೆ ಹಾಗೂ ಪ್ಯಾಕೆಟ್ ಕ್ಯಾಲೆಂಡರ್‌ಗಳನ್ನು ಬಿಡುಗಡೆ ಮಾಡಲಾಯಿತು.

ವಾಟಾಳು, ಹೊಸಮಠ, ಪಡುಗೂರು, ಬೆಟ್ಟದಪುರ, ನೀಲಕಂಠಸ್ವಾಮಿಮಠ, ಕುಂದೂರು ಮಠ, ಮಾದಹಳ್ಳಿ, ಬರಡನಪುರ, ಚಿಕ್ಕತುಪ್ಪೂರು, ಹುಲಿಯೂರುದುರ್ಗ, ದಂಡಿಕೆರೆ, ಚುಂಚನಹಳ್ಳಿ, ಕುದೇರು, ರಾಗಿಬೊಮ್ಮನಹಳ್ಳಿ, ರಾಮಾಪುರ, ಶಿರಮಹಳ್ಳಿ, ಮೊದಲಾದ ಮಠಗಳ ಮಠಾಧೀಶರು, ಗಣ್ಯರು ಹಾಗೂ ಭಕ್ತಾದಿಗಳು ಪಾಲ್ಗೊಂಡಿದ್ದರು.

**ದೇವರು ನೀಡಿರುವ ಬುದ್ಧಿಯನ್ನು ಸದ್ಬಳಕೆ ಮಾಡಿಕೊಳ್ಳಬೇಕು**

ದೇವರು ನೀಡಿರುವ ಬುದ್ಧಿಯನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಡಿಸೆಂಬರ್ 11ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ ವತಿಯಿಂದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ನಡೆದ ವಿಶೇಷ ಪ್ರತಿಭಾವಂತ ಬಾಲಕ ಕು. ರಿಷಿ ಶಿವ ಪ್ರಸನ್ನರವರ ಕೃತಿ ಬಿಡುಗಡೆ, ಸಂವಾದ ಹಾಗೂ ಸನ್ಮಾನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವದಿಸುತ್ತಾ ತಿಳಿಸಿದರು. ದೇವರು

ಕೊಟ್ಟಿರುವ ಬುದ್ಧಿಯನ್ನು ಉಪಯೋಗಿಸಿಕೊಂಡು ರಿಷಿಯಂತೆ ಅದ್ಭುತ ಸಾಧನೆ ಮಾಡಬಹುದು. ವಿದ್ಯಾರ್ಥಿಗಳು ಒಬ್ಬರನ್ನು ಇನ್ನೊಬ್ಬರಿಗೆ ಹೋಲಿಸಿಕೊಂಡು ಕೀಳರಿಮೆ ಪಡಬಾರದು. ತಮ್ಮಲ್ಲಿರುವ ಪ್ರತಿಭೆಯನ್ನು ಬಳಸಿಕೊಂಡು ಮುಟಿದೇಳಬೇಕು. ಏಳು ವರ್ಷದ ಬಾಲಕ ರಿಷಿ ರಚಿಸಿರುವ ಎಲಿಮೆಂಟ್ಸ್ ಆಫ್ ಅರ್ಥ್ ಕೃತಿ ಸಂವಾದ ರೂಪದಲ್ಲಿದೆ. ಇದರಲ್ಲಿನ ವಿವರಣಾತ್ಮಕ ಅಂಶಗಳು ವಿದ್ಯಾರ್ಥಿಗಳಿಗೆ ಅರ್ಥವಾಗುವಂತಿವೆ. ಪುಸ್ತಕ ಪರಿಸರಕ್ಕೂ ಪೂರಕವಾಗಿದೆ ಎಂದು ತಿಳಿಸಿದರು.

ಸಚಿವರಾದ ಶ್ರೀ ಬಿ.ಸಿ. ನಾಗೇಶ್‌ರವರು 21ನೇ ಶತಮಾನ ಭಾರತೀಯರ ಶತಮಾನ ಎಂಬುದು ಮುಂದಿನ ದಿನಗಳಲ್ಲಿ ಸಾಕಾರಗೊಳ್ಳಲಿದೆ. ರಾಜ್ಯದ ಏಳು ವರ್ಷದ ಜೀನಿಯಸ್ ಬಾಲಕ ರಿಷಿ ಶಿವ ಪ್ರಸನ್ನ ತನ್ನ ಬುದ್ಧಿಶಕ್ತಿಯಿಂದ ವಿಶ್ವದಾಖಲೆ ಮಾಡಿದ್ದಾನೆ. ಇದು ಅತ್ಯಂತ ಹೆಮ್ಮೆಯ ವಿಷಯ. ಹೊಸ ಶಿಕ್ಷಣ ನೀತಿ ಬೌದ್ಧಿಕ ಸಾಮರ್ಥ್ಯದ ಜೊತೆ ಕೌಶಲಗಳನ್ನು ಹೆಚ್ಚಿಸುವ ಉದ್ದೇಶ ಹೊಂದಿದೆ ಎಂದರು.

ಸಾಹಿತಿಗಳಾದ ಡಾ. ಗೊ.ರು. ಚನ್ನಬಸಪ್ಪನವರು ರಿಷಿ ಶಿವ ಪ್ರಸನ್ನನಂತಹ ಅಸಾಧಾರಣ ಬಾಲಕನನ್ನು ಕಂಡಾಗ ಅಚ್ಚರಿಯಾಗುತ್ತದೆ. ಸರ್ಕಾರ ಇಂತಹ ಬಾಲಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹ ನೀಡಿದರೆ ದೇಶದ ಅಭಿವೃದ್ಧಿಗೆ ಪೂರಕವಾಗಲಿದೆ ಎಂದು ತಿಳಿಸಿದರು.

ಬಾಲ ಪ್ರತಿಭೆ ರಿಷಿ ಶಿವ ಪ್ರಸನ್ನರವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಪರಿಷತ್ತಿನ ವತಿಯಿಂದ ಅವರನ್ನು ಸನ್ಮಾನಿಸಲಾಯಿತು.

ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ ಕೃತಿ ಬಿಡುಗಡೆಗೊಳಿಸಿದರು. ಪ್ರೊ. ಮಲೆಯೂರು ಗುರುಸ್ವಾಮಿಯವರು ಕೃತಿ ಪರಿಚಯಿಸಿದರು. ಜೆಎಸ್‌ಎಸ್ ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ ಸ್ವಾಗತಿಸಿದರು. ಶ್ರೀ ಮ.ಗು. ಸದಾನಂದಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಎಂ.ಪಿ. ನೀಲಾಂಬಿಕಾ ನಾಗರಾಜ್ ವಂದಿಸಿದರು. ಡಾ. ಹೆಚ್.ಟಿ. ಶೈಲಜ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಎಸ್.ಪಿ. ಉದಯಶಂಕರ್, ಶ್ರೀ ಹೆಳವರಹುಂಡಿ ಸಿದ್ಧಪ್ಪ, ಶ್ರೀ ಜಿ.ಎಲ್. ತ್ರಿಪುರಾಂತಕ ಮೊದಲಾದವರು ಉಪಸ್ಥಿತರಿದ್ದರು.

**ನಾಡಿಗೆ ಉಡುಪಿ ಅಷ್ಟಮಠಗಳ ಕೊಡುಗೆ ಆಪಾರವಾದುದು**

ಧರ್ಮಪ್ರಜ್ಞೆಯನ್ನು ಬೆಳೆಸುವುದರೊಂದಿಗೆ ಸಾಮಾಜಿಕ ಸಾಮರಸ್ಯದ ರಕ್ಷಣೆ ಹಾಗೂ ದೇಶಪ್ರೇಮದ ಆದರ್ಶ ಶಿಕ್ಷಣವನ್ನು ನೀಡುವ ಸಂಸ್ಥೆಗಳನ್ನು ಸ್ಥಾಪಿಸಿ ಉಡುಪಿ ಅಷ್ಟಮಠಗಳು ನಾಡಿಗೆ ಅಪಾರವಾದ ಕೊಡುಗೆಯನ್ನು ನೀಡಿವೆ ಎಂದು ಪರಮಪೂಜ್ಯ ಜಗದ್ಗುರುಗಳು ಡಿಸೆಂಬರ್ 13ರಂದು ಉಡುಪಿ ಶ್ರೀಕೃಷ್ಣ ಮಠದಲ್ಲಿ

ಶ್ರೀ ಅದಮಾರು ಮಠದ ಪರ್ಯಾಯ ಮಂಗಲೋತ್ಸವದ 'ವಿಶ್ವಾರ್ಪಣಂ' ಸಮಾರಂಭದ 9ನೇ ದಿನದ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು.

ಉಡುಪಿಯ ಶ್ರೀಕೃಷ್ಣ ಮಠ ಆಧ್ಯಾತ್ಮ ಜಿಜ್ಞಾಸುಗಳ ಪವಿತ್ರ ಸ್ಥಳವಾಗಿದೆ. ಮಧ್ವಾಚಾರ್ಯರಿಂದ ಸ್ಥಾಪಿತವಾದ ಶ್ರೀಕೃಷ್ಣ ಮಠವು ಅಷ್ಟ ಮಠಗಳ ಯತಿವರ್ಯರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದೆ. ವಿಭುದೇಶ ತೀರ್ಥ ಶ್ರೀಪಾದರು ಹಾಗು ವಿಶ್ವೇಶ ತೀರ್ಥ ಶ್ರೀಪಾದರು ಅಷ್ಟಮಠಗಳನ್ನು ಹೆಚ್ಚು ಸಮಾಜಮುಖಿಯಾಗಿಸಿದರು. ಸಮಾಜದಲ್ಲಿ ಸಾಮರಸ್ಯ ಮತ್ತು ಜಾಗೃತಿ ಮೂಡಿಸಲು, ಅಜ್ಞಾನವನ್ನು ಹೋಗಲಾಡಿಸಲು ಶಿಕ್ಷಣ ಹಾಗೂ ಧಾರ್ಮಿಕ ಸಂಸ್ಥೆಗಳನ್ನು ಕಟ್ಟಿದರು. ಹೊರ ಜಗತ್ತಿನಲ್ಲಿ ಸಿಗುವ ಭೌತಿಕ ಸಂತೋಷದಿಂದ ಶಾಶ್ವತ ಸುಖ, ಶಾಂತಿ ಸಿಗುವುದಿಲ್ಲ. ಮನುಷ್ಯನಿಗೆ ಧರ್ಮ ಮುಖ್ಯವಾಗಿದ್ದು, ಕೊನೆಯ ಉಸಿರು ಇರುವವರೆಗೂ ನಮ್ಮೊಳಗಿನ ಧಾರ್ಮಿಕ ಪ್ರಜ್ಞೆ ಹಾಗೂ ಆಧ್ಯಾತ್ಮಿಕ ಸಾಧನೆ ಕಾಪಾಡುತ್ತದೆ. ಉಡುಪು, ಚಿನ್ನಾಭರಣ, ರುಚಿಯಾದ ಊಟದಿಂದ ಕ್ಷಣಿಕ ಸುಖ ಸಿಗಲಿದ್ದು, ಧಾರ್ಮಿಕ ಪ್ರಜ್ಞೆ, ಶಿಕ್ಷಣ, ಸತ್ಯ ಮಾತ್ರ ಶಾಶ್ವತ ಸುಖ ನೀಡಬಲ್ಲದು. ಪ್ರತಿ ವ್ಯಕ್ತಿಗೂ ಸ್ವಧರ್ಮ ಪಾಲನೆ ಅತ್ಯಂತ ಶ್ರೇಷ್ಠವಾಗಿದ್ದು, ಕೊನೆಯವರೆಗೂ ಸ್ವಧರ್ಮವನ್ನು ಪಾಲಿಸಬೇಕು. ಇತಿಹಾಸದ ಪುಟಗಳನ್ನು ತಿರುವಿದರೆ ಹಿಂದೂಗಳು ಅನ್ಯರ ಮೇಲೆ ಆಕ್ರಮಣ ಮಾಡಿದ ಉದಾಹರಣೆಗಳು ಸಿಗುವುದಿಲ್ಲ. ಎಲ್ಲ ಧರ್ಮಗಳಲ್ಲಿರುವ ಒಳ್ಳೆಯ ಅಂಶವನ್ನು ಸ್ವೀಕರಿಸಿರುವ ಹಿಂದೂ ಧರ್ಮವನ್ನು ನಾಶಮಾಡಲು ಎಷ್ಟೆ ಪ್ರಯತ್ನಗಳು ನಡೆದರೂ, ಸಫಲವಾಗುವುದಿಲ್ಲ ಎಂದು ಹೇಳಿದರು.

ಶ್ರೀಕೃಷ್ಣಮಠ ಪರ್ಯಾಯ ಶ್ರೀ ಅದಮಾರು ಮಠದ ಶ್ರೀ ಈಶಪ್ರಿಯತೀರ್ಥ ಶ್ರೀಪಾದಂಗಳು ಎಲ್ಲವನ್ನೂ ನಿಯಂತ್ರಿಸುವ ಶಕ್ತಿ ನಮ್ಮ ಹಿಂದೆ ಇದೆ. ಪ್ರತಿಯೊಂದನ್ನು ವಿಮರ್ಶೆ ಮಾಡಿದಾಗ ಸತ್ಯಗಳು ಗೊತ್ತಾಗುತ್ತವೆ. ಒಳ್ಳೆಯದನ್ನು ಮಾಡುವವನೇ ದೇವರು. ಭಗವಂತನನ್ನು ಒಲಿಸಿಕೊಳ್ಳಲು ನಿರಂತರವಾದ ಯತ್ನ ಮಾಡಬೇಕು. ಶ್ರೀಮಠದ ಮೇಲೆ ಸುತ್ತೂರು ಶ್ರೀಗಳು ವಿಶೇಷವಾದ ಅಭಿಮಾನವನ್ನು ಹೊಂದಿದ್ದಾರೆ. ಹಲವಾರು ಶೈಕ್ಷಣಿಕ ಮತ್ತು ಆರೋಗ್ಯ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಸೇವೆಯನ್ನು ಮಾಡುತ್ತಿದ್ದಾರೆ. ಉತ್ತಮ ಸಂಸ್ಕಾರಗಳನ್ನು ನೀಡುವ ಕಾರ್ಯವನ್ನು ಮಾಡುತ್ತಿದ್ದಾರೆ. ವಿಭುದೇಶ ತೀರ್ಥರ ಕಾಲದಿಂದಲೂ ಶ್ರೀಮಠದೊಂದಿಗೆ ವಿಚಾರ–ವಿನಿಮಯಗಳನ್ನು ಮಾಡಿಕೊಂಡು ಬಂದಿದ್ದಾರೆ. ಅವರ ವ್ಯಕ್ತಿತ್ವ ಸಮಾಜಕ್ಕೆ ಆದರ್ಶಪ್ರಾಯವಾದುದು ಎಂದು ಹೇಳಿದರು.

ಕಿನ್ನಿಗೋಳಿಯ ಸಾಮಾಜಿಕ ಕಾರ್ಯಕರ್ತರಾದ ಶ್ರೀ ರಾಬರ್ಟ್ ರೊಸಾರಿಯೋ

'ಪ್ರಸಕ್ತ ರಾಜಕೀಯ ಬೆಳವಣಿಗೆಗಳು ಮತ್ತು ಭಾರತೀಯತೆ' ಕುರಿತು ವಿಶೇಷ ಉಪನ್ಯಾಸ ನೀಡಿದರು. ಕೇರಳದ ಖ್ಯಾತ ಜ್ಯೋತಿಷ್ಯ ಶಾಸ್ತ್ರಜ್ಞರಾದ ಶ್ರೀ ಬೇಳ ಪದ್ಮನಾಭ ಶರ್ಮರವರನ್ನು ಸನ್ಮಾನಿಸಲಾಯಿತು. ಶ್ರೀಮಠದಲ್ಲಿ ಸೇವೆ ಸಲ್ಲಿಸಿದ ಶ್ರೀ ಪ್ರಕಾಶ್ ಶೇರಿಗಾರ್, ಶ್ರೀ ಸತೀಶ ಶೇರಿಗಾರ್, ಶ್ರೀ ಬಿ. ಶ್ರೀನಿವಾಸ ರಾವ್, ಶ್ರೀಮತಿ ಗೌರಿ ಶೇಟ್ ಅವರನ್ನು ಸನ್ಮಾನಿಸಲಾಯಿತು. ಶ್ರೀ ಜ್ಞಾನೇಶ್ವರ ಹೆಬ್ಬಾರ್ ಹಾಗೂ ತಂಡದರವರು ವೇದಘೋಷ ಮಾಡಿದರು. ಶ್ರೀಮತಿ ವಾಣಿ ವಾದಿರಾಜರವರು ಪ್ರಾರ್ಥನೆ ಸಲ್ಲಿಸಿದರು. ಶ್ರೀ ಗೋವಿಂದರಾಜ್ ಸ್ವಾಗತಿಸಿದರು. ಶ್ರೀ ರಮೇಶ್ ಕಾರ್ಯಕ್ರಮ ನಿರೂಪಿಸಿದರು.

**ಬಹುತೇಕ ಪ್ರತಿಭಾವಂತರೆಲ್ಲಾ ಗ್ರಾಮೀಣ ಪ್ರದೇಶದ ಹಿನ್ನೆಲೆಯವರು**

ಬಹುತೇಕ ಪ್ರತಿಭಾವಂತರು ಗ್ರಾಮೀಣ ಪ್ರದೇಶಗಳಿಂದಲೇ ಬಂದವರಾಗಿರುತ್ತಾರೆ ಎಂದು ಪರಮಪೂಜ್ಯ ಜಗದ್ಗುರುಗಳು ಡಿಸೆಂಬರ್ 18ರಂದು ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ ಫೋರ್ ಸಿ ಸಂಸ್ಥೆಯ ವತಿಯಿಂದ ಏರ್ಪಡಿಸಿದ್ದ ಪ್ರೊ. ನಿರಂಜನ ವಾನಳ್ಳಿಯವರ 'ತಶಾಕೂರ್ ತಜಕಿಸ್ತಾನ' ಕೃತಿ ಲೋಕಾರ್ಪಣೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಪ್ರತಿಭಾವಂತರಿದ್ದಾರೆ. ಅವರನ್ನು ಪ್ರೋತ್ಸಾಹಿಸುವ ಕೆಲಸವಾಗಬೇಕು. ಇಂದು ಉನ್ನತ ಹುದ್ದೆಗೇರಿದವರೆಲ್ಲಾ ಗ್ರಾಮಾಂತರ ಪ್ರದೇಶದಲ್ಲಿ ಓದಿ ಬೆಳೆದವರು. ಅಂತಹವರಲ್ಲಿ ಪ್ರೊ. ವಾನಳ್ಳಿಯವರು ಒಬ್ಬರು. ಉಪನ್ಯಾಸಕ ವೃತ್ತಿಯಿಂದ ಇಂದು ಅವರು ಕುಲಪತಿಯ ಹುದ್ದೆಯವರೆಗೆ ಸುದೀರ್ಘ ಹಾದಿಯನ್ನು ಕ್ರಮಿಸಿದ್ದಾರೆ. ಅವರು ಈ ಕೃತಿಯಲ್ಲಿ ತಜಕಿಸ್ತಾನದ ಎಲ್ಲ ಮಗ್ಗಲುಗಳನ್ನು ಅತ್ಯಂತ ಅಚ್ಚುಕಟ್ಟಾಗಿ ಚಿತ್ರಿಸಿದ್ದಾರೆ. ಕೃತಿಯನ್ನು ಓದಿದರೆ ತಜಕಿಸ್ತಾನದ ಎಲ್ಲ ದೃಶ್ಯಗಳು ಕಣ್ಣಿಗೆ ಕಾಣುವಂತೆ ಭಾಸವಾಗುತ್ತವೆ ಎಂದು ಹೇಳಿದರು.

ಕೃತಿ ಪರಿಚಯಿಸಿದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎಚ್.ಎಸ್. ಹರಿಶಂಕರ್‌ರವರು ತಜಕಿಸ್ತಾನದಲ್ಲಿ ಮುಸ್ಲಿಂ ಸಮುದಾಯದವರೇ ಹೆಚ್ಚಾಗಿದ್ದು, ಅತ್ಯಂತ ಸಮೃದ್ಧ ದೇಶಗಳಲ್ಲಿ ಒಂದಾಗಿದೆ. ತಜಕಿಸ್ತಾನದ ಬಗ್ಗೆ ತಿಳಿಯಬೇಕಾದರೆ ಈ ಕೃತಿಯನ್ನು ಓದಿದರೆ ಸಾಕು ಸಮಗ್ರ ಮಾಹಿತಿ ದೊರೆಯುತ್ತದೆ ಎಂದರು.

ಕುಲಪತಿಗಳಾದ ಪ್ರೊ. ನಿರಂಜನ ವಾನಳ್ಳಿಯವರು ತಜಕಿಸ್ತಾನದ ಕುರಿತು ಅಂತರ್ಜಾಲದಲ್ಲಿ ಸಿಗುವ ಮಾಹಿತಿ ಸಂಪೂರ್ಣ ನಕಾರಾತ್ಮಕವಾಗಿದೆ. ಆದರೆ ತಜಕಿಸ್ತಾನಕ್ಕೆ ಭೇಟಿ ನೀಡಿದ ನಂತರ ಅಲ್ಲಿನ ಪ್ರಜೆಗಳು ಭಾರತೀಯರನ್ನು ಹಾಗೂ ಭಾರತೀಯ ಸಂಸ್ಕೃತಿಯನ್ನು ಅತಿಯಾಗಿ ಪ್ರೀತಿಸುತ್ತಾರೆ ಎಂಬುದು ಮನದಟ್ಟಾಯಿತು ಎಂದು ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ತಜಕಿಸ್ತಾನದ ವಿದ್ಯಾರ್ಥಿಗಳಾದ ಕು. ರುಬಿಯಾ ಭಾರತದ ಸಂಸ್ಕೃತಿ, ಉಡುಗೆ–ತೊಡುಗೆ, ಆಹಾರ ಪದ್ಧತಿಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರೊ. ಪ್ರಧಾನ ಗುರುದತ್ತ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಡಾ. ಕೆ.ಎ. ಪ್ರಹ್ಲಾದ್ ವಂದಿಸಿದರು. ಕು. ಸಿರಿ ವಾನಳ್ಳಿ ನಿರೂಪಿಸಿದರು.

**ಡಾ. ಗಿರಿಜಾಪತಿಯವರ 'ಶ್ರೀರಾಮ ಭಾರತಂ' ಮತ್ತು 'ಯುಗದ ಜಂಗಮ' ಕೃತಿ ಬಿಡುಗಡೆ**

ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ ಡಿಸೆಂಬರ್ 19ರಂದು ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ನೈಮಿಷ ಪ್ರಕಾಶನಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಡಾ. ಎನ್.ಎಂ. ಗಿರಿಜಾಪತಿಯವರ 'ಶ್ರೀರಾಮ ಭಾರತಂ' ಕಾವ್ಯ ಹಾಗೂ 'ಯುಗದ ಜಂಗಮ' ಕೃತಿಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಳಿಸಲಾಯಿತು.

ಕಾವ್ಯ ಕುರಿತು ಮಾತನಾಡಿದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್‌ರವರು ವಾಲ್ಮೀಕಿಯಿಂದ ಆರಂಭವಾದ ರಾಮಾಯಣ ಇನ್ನೂ ಹೊಸ ರೂಪ ಪಡೆಯುತ್ತಲೇ ಇದೆ. ಇದರ ಆಧಾರದ ಮೇಲೆ ಸಾವಿರಾರು ಕೃತಿಗಳು ರಚಿತವಾಗಿವೆ. ಗಿರಿಜಾಪತಿಯವರ 'ಶ್ರೀರಾಮ ಭಾರತಂ' ಕಾವ್ಯ ಕಣ್ಣಿಗೆ ಕಟ್ಟುವಂತಿದೆ. ತಮ್ಮ ಆಲೋಚನಾ ಶೈಲಿಯಿಂದ ಓದುಗರನ್ನು ಸೆಳೆದಿದ್ದಾರೆ ಎಂದು ಹೇಳಿದರು.

ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕರಾದ ಡಾ. ವಿಜಯಕುಮಾರಿ ಎಸ್. ಕರಿಕಲ್‌ರವರು 'ಯುಗದ ಜಂಗಮ' ಕೃತಿ ಕುರಿತು ಮಾತನಾಡಿದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಸಿ. ನಾಗಣ್ಣ ಅಧ್ಯಕ್ಷತೆ ವಹಿಸಿದ್ದರು. ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಡಾ. ಹೆಳವರಹುಂಡಿ ಸಿದ್ಧಪ್ಪ, ನೈಮಿಷ ಪ್ರಕಾಶನದ ಶ್ರೀ ಎಂ.ಸಿ. ವೀರಯ್ಯ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮತಿ ಎಂ.ವಿ. ಶುಭಾ ರಾಘವೇಂದ್ರ ಮತ್ತು ಶ್ರೀ ಕೃ.ಪಾ. ಮಂಜುನಾಥ್‌ರವರು ಶ್ರೀರಾಮ ಭಾರತಂ ಕಾವ್ಯದ ಆಯ್ದ ಭಾಗಗಳ ವಾಚನ ಮಾಡಿದರು. ಕು. ಎನ್.ಎಂ. ಇಂದುಶೇಖರ ಪ್ರಾರ್ಥಿಸಿದರು. ಶ್ರೀ ಎಂ. ಚಂದ್ರಶೇಖರ್ ಸ್ವಾಗತಿಸಿದರು. ಶ್ರೀಮತಿ ಪುಷ್ಪ ಮೋಹನಕುಮಾರ್ ಕಾರ್ಯಕ್ರಮ ನಿರೂಪಿಸಿದರು.

**ಪ್ರತಿ ಜಿಲ್ಲೆಯಲ್ಲೂ ವೈದ್ಯಕೀಯ ಕಾಲೇಜುಗಳ ಸ್ಥಾಪನೆಯಾಗಬೇಕು**

ರಾಜ್ಯದ ಪ್ರತಿ ಜಿಲ್ಲೆಯಲ್ಲೂ ವೈದ್ಯಕೀಯ ಕಾಲೇಜುಗಳ ಸ್ಥಾಪನೆಯಾಗಬೇಕು ಎಂದು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಡಿಸೆಂಬರ್ 17ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಕುಲಾಧಿಪತಿಗಳಾದ

ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ 12ನೇ ಘಟಿಕೋತ್ಸವದಲ್ಲಿ ಹೇಳಿದರು.

ಕರೋನಾ ಸಮಯದಲ್ಲಿ ಕೆಲವು ಆಸ್ಪತ್ರೆಗಳಲ್ಲಿ ಹೆಚ್ಚಿನ ಬಿಲ್ ಪಡೆದ ಪರಿಣಾಮ ಸಾಮಾನ್ಯರು ಆಸ್ಪತ್ರೆಗಳಿಗೆ ಹೋಗಲು ಭಯಪಟ್ಟರು. ಆದರೆ ಜೆಎಸ್‌ಎಸ್ ಮತ್ತು ಎಸ್‌ಡಿಎಂನಂತಹ ಕೆಲವು ಆಸ್ಪತ್ರೆಗಳಲ್ಲಿ ಮಾನವೀಯತೆ ಮತ್ತು ಸಾಮಾಜಿಕ ಕಾಳಜಿಯನ್ನು ಮರೆಯದೆ ಕನಿಷ್ಠ ಶುಲ್ಕ ಪಡೆದು ಸೋಂಕಿತರಲ್ಲಿ ಆತ್ಮವಿಶ್ವಾಸ ತುಂಬುವ ಕಾರ್ಯ ಮಾಡಲಾಯಿತು. ಐಷಾರಾಮೀ ಜೀವನದ ಕನಸು ಹೊತ್ತು ವೈದ್ಯ ವೃತ್ತಿಗೆ ಬರಬಾರದು. ಸೇವೆ ಮಾಡುವ ಬಯಕೆಯಿಂದ ಈ ವೃತ್ತಿಗೆ ಬರಬೇಕು. ದೈವೀಕ ಹೃದಯದ ಸೇವೆ ಸಲ್ಲಿಸಬೇಕು. ವೈದ್ಯರಾದವರು ಮಾನವೀಯತೆಯನ್ನು ಎಂದಿಗೂ ಮರೆಯಬಾರದು ಎಂದು ತಿಳಿಸಿದರು.

ಘಟಿಕೋತ್ಸವದಲ್ಲಿ ಒಟ್ಟು 2138 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 61 ವಿದ್ಯಾರ್ಥಿಗಳಿಗೆ ಅತ್ಯುತ್ತಮ ಶೈಕ್ಷಣಿಕ ಸಾಧನೆಗಾಗಿ 83 ಚಿನ್ನದ ಪದಕಗಳು ಮತ್ತು ಪ್ರಶಸ್ತಿಗಳನ್ನು ವಿತರಿಸಲಾಯಿತು. 47 ಅಭ್ಯರ್ಥಿಗಳು ಪಿಎಚ್‌ಡಿ ಸಂಶೋಧನಾ ಪದವಿ ಮತ್ತು 7 ಅಭ್ಯರ್ಥಿಗಳು ವೈದ್ಯಕೀಯ ಸೂಪರ್ ಸ್ಪೆಷಾಲಿಟಿ ಪದವಿಯನ್ನು ಪಡೆದರು.

ಕುಲಪತಿಗಳಾದ ಡಾ. ಸುರೀಂದರ್ ಸಿಂಗ್ ವರದಿ ಮಂಡಿಸಿ, ಸ್ವಾಗತಿಸಿದರು. ಕುಲಸಚಿವರಾದ ಡಾ. ಬಿ. ಮಂಜುನಾಥ ವಂದಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಸಮಕುಲಪತಿಗಳಾದ ಡಾ. ಬಿ. ಸುರೇಶ್, ಪರೀಕ್ಷಾ ನಿಯಂತ್ರಕರಾದ ಡಾ. ಆರ್. ಸುಧೀಂದ್ರ ಭಟ್, ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪ, ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಎಸ್. ಸತ್ಯಂ. ಡಾ. ಎಸ್. ಸಚ್ಚಿದಾನಂದ, ಡೀನ್‌ರವರು ಹಾಗೂ ಗಣ್ಯರು ಉಪಸ್ಥಿತರಿದ್ದರು.

**ದೇಸಿ ತಳಿಯ ಗೋವುಗಳ ಸಂತತಿಯನ್ನು ಸಂರಕ್ಷಿಸಬೇಕಿದೆ**

ಭಾರತದ ದೇಸಿ ತಳಿಯ ಗೋವುಗಳ ಸಂತತಿಯನ್ನು ಸಂರಕ್ಷಿಸಿಕೊಂಡು ಹೋಗಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಡಿಸೆಂಬರ್ 13ರಂದು ಉಡುಪಿ ಜಿಲ್ಲೆ ಕಿನ್ನಿಗೋಳಿಯ ಶ್ರೀ ಶಕ್ತಿದರ್ಶನ ಯೋಗಾಶ್ರಮದ ಗೋಚರ ಭೂಮಿ ಕಪಿಲ ಸಂಗಮದ ಉದ್ಘಾಟನೆ ಹಾಗೂ ಬೆಳ್ಳಿಹಬ್ಬದ ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು.

ದೇಸಿ ತಳಿಯ ಸಂರಕ್ಷಣೆಯಿಂದ ನಮ್ಮ ಸಂಸ್ಕೃತಿಯ ಸಂರಕ್ಷಣೆಯು ಸಾಧ್ಯವಾಗುತ್ತದೆ ಮತ್ತು ಆರೋಗ್ಯದ ದೃಷ್ಟಿಯಿಂದಲೂ ದೇಸಿ ಗೋವುಗಳ ಉತ್ಪನ್ನಗಳು ಉತ್ತಮವಾದವು. ಕಿನ್ನಿಗೋಳಿ ಆಶ್ರಮದ ಶ್ರೀ ದೇವಬಾಬಾರವರು ಅತೀವವಾದ ಗೋ ಪ್ರೇಮವನ್ನು ಹೊಂದಿದ್ದಾರೆ. ಅವರು ಮಾಡುತ್ತಿರುವ ಕಾರ್ಯ ಸಮಾಜಕ್ಕೆ ಮಾದರಿಯಾದುದು ಎಂದು ಹೇಳಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಎಂ. ಮೋಹನ್ ಆಳ್ವರವರು ಯೋಗ ಮತ್ತು ಧ್ಯಾನಗಳನ್ನು ಪ್ರಸಾರ ಮಾಡುವ ಮೂಲಕ ಸಮಾಜ ಸೇವೆಯನ್ನು ಮಾಡುತ್ತಿರುವ ಶ್ರೀ ದೇವಬಾಬಾರವರ ಕಾರ್ಯ ಶ್ಲಾಘನೀಯವಾದುದು ಎಂದರು.

ಶ್ರೀ ದೇವಬಾಬಾ ಗುರೂಜಿರವರು ಕಪಿಲ ಸಂಗಮದಲ್ಲಿರುವ ಗೋವುಗಳ ವೈವಿಧ್ಯತೆ ಬಗ್ಗೆ ಹಾಗೂ ವೇದದಲ್ಲಿರುವ ಹತ್ತು ಕಪಿಲ ವೈವಿಧ್ಯತೆಯ ತಳಿಗಳ ಮಾಹಿತಿ ಹಂಚಿಕೊಂಡರು. ಶ್ರೀ ದೇವದಾಸ ರಾವ್, ಶ್ರೀ ರಘುನಾಥ್, ಶ್ರೀ ವೆಂಕಟೇಶ್ ಪ್ರಭು ಪರಿಚಯಿಸಿದರು. ಶ್ರೀ ಪ್ರಸನ್ನಲಕ್ಷ್ಮಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

**ಆರೋಗ್ಯ ಕ್ಷೇತ್ರಕ್ಕೆ ಸುತ್ತೂರು ಶ್ರೀಮಠದ ಕೊಡುಗೆ ಅಪಾರ**

ತ್ರಿವಿಧ ದಾಸೋಹದೊಂದಿಗೆ ಆರೋಗ್ಯ ದಾಸೋಹವನ್ನು ಕೂಡ ಸುತ್ತೂರು ಶ್ರೀಮಠ ನಿರಂತರವಾಗಿ ಮಾಡಿಕೊಂಡು ಬರುತ್ತಿದೆ ಎಂದು ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಎಸ್. ಬೊಮ್ಮಾಯಿರವರು ಡಿಸೆಂಬರ್ 26ರಂದು ಮೈಸೂರಿನ ಜೆಎಸ್ಎಸ್ ಆಸ್ಪತ್ರೆಯಲ್ಲಿ ನೂತನವಾಗಿ ಸ್ಥಾಪಿಸಿದ ಆಕ್ಸಿಜನ್ ಜನರೇಟರ್ ಮತ್ತು ಲಿಕ್ವಿಡ್ ಮೆಡಿಕಲ್ ಆಕ್ಸಿಜನ್ ಪ್ಲಾಂಟ್‌ಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಕೋವಿಡ್ ಸೋಂಕನ್ನು ಸರ್ಕಾರ ಯಶಸ್ವಿಯಾಗಿ ನಿಭಾಯಿಸುತ್ತಿದೆ. ಹೊಸದಾಗಿ ಐಸಿಯು ಮತ್ತು ಆಕ್ಸಿಜನ್ ಫ್ಲಾಂಟ್‌ಗಳನ್ನು ನಿರ್ಮಿಸಲಾಗುತ್ತಿದೆ. ಔಷಧಿಗಳನ್ನು ಸಹ ಸಂಗ್ರಹಿಸಲಾಗಿದೆ. ಈಗಾಗಲೇ ಶೇ 97ರಷ್ಟು ಜನರಿಗೆ ಮೊದಲ ಡೋಸ್ ಲಸಿಕೆಯನ್ನು ಮತ್ತು ಶೇ 79ರಷ್ಟು ಜನರಿಗೆ ಎರಡನೇ ಡೋಸ್ ಲಸಿಕೆಯನ್ನು ನೀಡಲಾಗಿದೆ. ಎಂತಹ ಸಂಕಷ್ಟಗಳು ಬಂದರೂ ಸರ್ಕಾರ ಎದುರಿಸಲು ಸಿದ್ಧವಾಗಿದೆ ಎಂದು ತಿಳಿಸಿದರು.

ಜೆಎಸ್ಎಸ್ ಶ್ರವಣ ಮಿತ್ರ ಆ್ಯಪ್ ಬಿಡುಗಡೆಗೊಳಿಸಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಕೆ. ಸುಧಾಕರ್‌ರವರು ಜೆಎಸ್ಎಸ್ ಸಂಸ್ಥೆ ಸಂಕಷ್ಟದ ಸಂದರ್ಭದಲ್ಲಿ ಸದಾಕಾಲ ಬೆನ್ನೆಲುಬಾಗಿ ನಿಂತಿದೆ. ಜನರಿಗೆ ಬೇಕಾದ ಆರೈಕೆ ಮತ್ತು ಚಿಕಿತ್ಸೆಯನ್ನು ಅತ್ಯಂತ ಕೈಗೆಟುಕುವ ಹಾಗೆ ನೀಡುತ್ತಿದೆ. ಅದರಲ್ಲಿ ಇಂದು ಬಿಡುಗಡೆಗೊಳಿಸಿರುವ ಆ್ಯಪ್ ಸಹ ಒಂದು. ಇದರಿಂದ ಶ್ರವಣ ದೋಷವನ್ನು ಪತ್ತೆಹಚ್ಚಿ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಳ್ಳಲು ಅನುವು ಮಾಡಿಕೊಟ್ಟಿದೆ.

ಸರ್ಕಾರ ಇಂತಹ ಎಲ್ಲ ಕಾರ್ಯಗಳಿಗೆ ಪ್ರೋತ್ಸಾಹ ನೀಡಲಿದೆ. ಪೂಜ್ಯರ ನೇತೃತ್ವದಲ್ಲಿ ನಡೆಯುತ್ತಿರುವ ಇಂತಹ ಕಾರ್ಯವನ್ನು ಸರ್ಕಾದ ಪರವಾಗಿ ಅಭಿನಂದಿಸುತ್ತೇನೆ. ಕೋವಿಡ್ ನಮಗೆಲ್ಲ ಹೊಸಪಾಠವನ್ನು ಕಲಿಸಿದೆ. ಮೂರನೇ ಅಲೆ ಓಮಿಕ್ರಾನ್‌ರೂಪದಲ್ಲಿ ವೇಗವಾಗಿ ಹರಡುತ್ತಿದೆ. ಆದರೆ ಅದರ ತೀವ್ರತೆಯನ್ನು ಇನ್ನೂ ಗುರುತಿಸಲಾಗಿಲ್ಲ. ಹೀಗಾಗಿ ಮುಂಜಾಗ್ರತೆ ಮತ್ತು ಮುನ್ನೆಚ್ಚರಿಕೆಗಳನ್ನು ಎಲ್ಲರೂ ತೆಗೆದುಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಎಸ್.ಎ. ರಾಮದಾಸ್‌ರವರು ಅಧ್ಯಕ್ಷತೆ ವಹಿಸಿದ್ದರು. ಸಂಸದರಾದ ಶ್ರೀ ಪ್ರತಾಪ ಸಿಂಹ, ಶಾಸಕರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ತನ್ವೀರ್ ಸೇಠ್, ಶ್ರೀ ಎಲ್. ನಾಗೇಂದ್ರ, ಮೇಯರ್ ಶ್ರೀಮತಿ ಸುನಂದಾ ಪಾಲನೇತ್ರ, ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರಸ್ವಾಮಿ, ಕುಲಪತಿಗಳಾದ ಡಾ. ಸುರಿಂದರ್ ಸಿಂಗ್, ಕುಲಸಚಿವ ರಾದ ಡಾ. ಬಿ. ಮಂಜುನಾಥ್, ಪ್ರಾಂಶುಪಾಲರಾದ ಡಾ. ಹೆಚ್. ಬಸವನಗೌಡಪ್ಪ ಉಪಸ್ಥಿತರಿದ್ದರು. ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಕರ್ನಲ್ ಡಾ. ಬಿ. ದಯಾನಂದ್‌ರವರು ಸ್ವಾಗತಿಸಿದರು. ಡಾ. ಸೌಮ್ಯ ಪ್ರಾರ್ಥಿಸಿದರು. ಡಾ. ಪಿ. ಶಾಸ್ತ್ರಿ ಕಾರ್ಯಕ್ರಮ ನಿರೂಪಿಸಿದರು.

□

ನಯನದಾಹಾರವ ಜಂಗಮವ ನೋಡಿಸುವೆನು
ಶ್ರೋತ್ರದಾಹಾರವ ಜಂಗಮವ ಕೇಳಿಸುವೆನು
ಘ್ರಾಣದಾಹಾರವ ಜಂಗಮವ ವಾಸಿಸುವೆನು
ಜಿಹ್ವೆಯಾಹಾರವ ಜಂಗಮವನೂಡಿಸುವೆನು
ಕವಚದಾಹಾರವ ಜಂಗಮಕ್ಕೆ ಹೊದ್ದಿಸುವೆನು
ಅಧಿಕ ಪ್ರೇಮ ಪ್ರಣಾಮವ ಮಾಡುವೆನು
ಸಕಲ ಪದಾರ್ಥಂಗಳ ನೀಡುವೆನು
ಕೂಡಲಸಂಗಾ ನಿಮ್ಮ ಶರಣರಿಗೆ.

**– ಬಸವಣ್ಣ**

# ಪ್ರಸಾದ



## ಕೃತಿ-ಸ್ವೀಕೃತಿ

**ಬಸವ ಮಾರ್ಗ**
ಲೇ: ಬಸವರಾಜ ಸಬರದ
ಪ್ರ.: ಡಾ. ಎಂ.ಎಂ. ಕಲಬುರ್ಗಿ
ಅಧ್ಯಯನ ಸಂಸ್ಥೆ
ಜಗದ್ಗುರು ಶ್ರೀ ತೋಂಟದಾರ್ಯ
ಸಂಸ್ಥಾನ ಮಠ, ಗದಗ
ಪು. 188, ಬೆಲೆ: 180/-

**ವಚನಕ್ಕೊಂದು ಕಥೆ**
ಲೇ.: ರಾಜೇಂದ್ರಶಿಶು
(ಎಂ.ಎ. ನೀಲಾಂಬಿಕಾ)
ಪ್ರ.: ಕದಳಿ ಮಹಿಳಾ ವೇದಿಕೆ, ಮೈಸೂರು
ಪು.260, ಬೆಲೆ: 150/-

**ಸಾದ್ಯಂತ ನಡೆ–ನುಡಿಗಳು**
ಲೇ: ಸ.ರಾ. ಸುಳಕೂಡೆ
ಪ್ರ.: ನಿವೇದಿತ ಪ್ರಕಾಶನ
ಬನಶಂಕರಿ 2ನೇ ಹಂತ
ಬೆಂಗಳೂರು
ಪು. 288, ಬೆಲೆ: 300/-

**ವಿಶ್ವವಂದ್ಯ ಬಸವಣ್ಣನವರು**
ಲೇ: ಎಲ್.ಎಸ್. ಶಾಸ್ತ್ರಿ
ಪ್ರ.: ಡಾ. ಎಂ.ಎಂ. ಕಲಬುರ್ಗಿ
ಅಧ್ಯಯನ ಸಂಸ್ಥೆ
ಜಗದ್ಗುರು ಶ್ರೀ ತೋಂಟದಾರ್ಯ
ಸಂಸ್ಥಾನ ಮಠ, ಗದಗ
ಪು. 226, ಬೆಲೆ: 200/-

**ಸಿದ್ಧರಾಮ ಶಿವಯೋಗಿಗಳ ವಚನಾನುಭವ**
ಲೇ: ಬಸವರಾಜಸ್ವಾಮಿ
ಪ್ರ.: ಶ್ರೀ ಬಸವ ಸೇವಾ ಪ್ರತಿಷ್ಠಾನ
ಬಸವನಗರ, ಬಸವನಬಾವಿ
ರಾಯಚೂರು
ಪು. 244. ಬೆಲೆ: 200/-

**ಕಲ್ಯಾಣ ಬಂಧು ತೋಂಟದ ಸಿಂಧು**
ಡಾ. ಸೋಮನಾಥ ಯಾಳವಾರ
ಪ್ರ.: ಡಾ. ಚನ್ನಬಸವ ಪಟ್ಟದ್ದೇವರು
ಪ್ರತಿಷ್ಠಾನ, ಹಿರೇಮಠ ಸಂಸ್ಥಾನ
ಭಾಲ್ಕಿ, ಬೀದರ್ ಜಿಲ್ಲೆ
ಪು. 244. ಬೆಲೆ: 200/-

**ಮಹಾಜ್ಞಾನಿ ಚೆನ್ನಬಸವಣ್ಣನವರು**
ಡಾ. ಸಂಗಮೇಶ ಸವದತ್ತಿಮಠ
ಪ್ರ.: ಶ್ರೀ ಉಳವಿ ಬಸವೇಶ್ವರ
ಧರ್ಮಪಂಡ ಸಂಸ್ಥೆ(ರಿ), ಧಾರವಾಡ
ಪು. 64. ಬೆಲೆ: 25/-

**ಕರಣಕಾರಣ 7**
ಡಾ. ರಾಜಶೇಖರ ಜಮದಂಡಿ
ಪ್ರ.: ಅಲ್ಲಮಪ್ರಭು ಪೀಠ, ಕಾಂತಾವರ
ಕಾರ್ಕಳ, ಉಡುಪಿ
ಪು. 192. ಬೆಲೆ: 200/-

**ಮೋದಿ ಎಂಬ ವಿಸ್ಮಯ**
ಜಿ.ಎಸ್. ಭಟ್
ಪ್ರ.: ಸೌಮ್ಯ ಪ್ರಕಾಶನ
ಮೈಸೂರು
ಪು. 252. ಬೆಲೆ: 250/-

**ಜುಲೈ 22, 1947**
ಡಾ. ಸರಜೂ ಕಾಟ್ಕರ್
ಪ್ರ.: ಯಾಜಿ ಪ್ರಕಾಶನ
ಪ್ರಕಾಶನಗರ, ಹೊಸಪೇಟೆ
ಬಳ್ಳಾರಿ ಜಿಲ್ಲೆ
ಪು. 122. ಬೆಲೆ: 100/-

**ಚಿತ್ತಲೋಕದ ಚಿಟ್ಟೆಳಗು**
**(ಕಲಬುರ್ಗಿ ಶ್ರೀ ಶರಣ ಬಸವೇಶ್ವರ ಜೀವನಾಧಾರಿತ ಕಾದಂಬರಿ)**
ಡಾ. ಎಚ್. ತಿಪ್ಪೇರುದ್ರಸ್ವಾಮಿ
ಪ್ರ.: ಡಾ. ಎಂ.ಎಂ. ಕಲಬುರ್ಗಿ
ಅಧ್ಯಯನ ಸಂಸ್ಥೆ
ಜಗದ್ಗುರು ಶ್ರೀ ತೋಂಟದಾರ್ಯ
ಸಂಸ್ಥಾನ ಮಠ, ಗದಗ
ಪು. 392, ಬೆಲೆ: 400/-

**ಜಡದಲ್ಲಿ ಜಂಗಮ**
**(ಅಖಂಡ ಜ್ಞಾನಿ ಶ್ರೀ ಷಣ್ಮುಖ ಶಿವಯೋಗಿಗಳ ದಿವ್ಯ ಜೀವನ ಕುರಿತು ಕಾದಂಬರಿ)**
ಡಾ. ಎಚ್. ತಿಪ್ಪೇರುದ್ರಸ್ವಾಮಿ
ಪ್ರ.: ಡಾ. ಎಂ.ಎಂ. ಕಲಬುರ್ಗಿ
ಅಧ್ಯಯನ ಸಂಸ್ಥೆ
ಜಗದ್ಗುರು ಶ್ರೀ ತೋಂಟದಾರ್ಯ
ಸಂಸ್ಥಾನ ಮಠ, ಗದಗ
ಪು. 400, ಬೆಲೆ: 400/-

**ತೋಂಟದ ಶ್ರೀಗಳ ದರ್ಶನ–ಸಂದರ್ಶನ**
ಶಿವನಗೌಡ ಗೌಡರ ಗದಗ
ಪ್ರ.: ಡಾ. ಎಂ.ಎಂ. ಕಲಬುರ್ಗಿ
ಅಧ್ಯಯನ ಸಂಸ್ಥೆ
ಜಗದ್ಗುರು ಶ್ರೀ ತೋಂಟದಾರ್ಯ
ಸಂಸ್ಥಾನ ಮಠ, ಗದಗ
ಪು. 216, ಬೆಲೆ: 240/-

**ಸುಪ್ರಸಿದ್ಧ ಭಾಷಣಗಳು**
ಡಾ. ಸರಜೂ ಕಾಟ್ಕರ್
ಪ್ರ.: ಯಾಜಿ ಪ್ರಕಾಶನ
ಪ್ರಕಾಶನಗರ, ಹೊಸಪೇಟೆ
ಪು. 150, ಬೆಲೆ: 150/-

**ಪವಾಡವಲ್ಲದ ಪುರುಷ**
**ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳು**
ಪ್ರೊ. ಬಾಲಚಂದ್ರ ಜಯಶೆಟ್ಟಿ
ಪ್ರ.: ಡಾ. ಎಂ.ಎಂ. ಕಲಬುರ್ಗಿ
ಅಧ್ಯಯನ ಸಂಸ್ಥೆ
ಜಗದ್ಗುರು ಶ್ರೀ ತೋಂಟದಾರ್ಯ
ಸಂಸ್ಥಾನ ಮಠ, ಗದಗ
ಪು. 96, ಬೆಲೆ: 100/-

---

## ಲೇಖಕರ ವಿಳಾಸ

**ಡಾ. ಕೆ.ಎಸ್. ಮಲ್ಲೇಶ್**
ವಿಶ್ರಾಂತ ಭೌತಶಾಸ್ತ್ರ ಪ್ರಾಧ್ಯಾಪಕರು
ನಂ. 100, 24ನೇ ಮುಖ್ಯರಸ್ತೆ
ಬಿ. ಬಡಾವಣೆ
ವಿಜಯನಗರ
3ನೇ ಹಂತ
ಮೈಸೂರು 570 030
ಮೊ: 9900598270

**ಬಾಲಚಂದ್ರ ಜಯಶೆಟ್ಟಿ**
'ನಮ್ಮ ಮನೆ', ಜಯನಗರ
ಸೇಡಂ ರಸ್ತೆ, ಕಲಬುರಗಿ 585105
ಮೊ: 9945215054

**ಪ್ರಕಾಶ ಗಿರಿಮಲ್ಲನವರ**
ಐ.ಟಿ.ಐ. ಕಾಲೇಜು
ಶಿವಬಸವನಗರ, ಬೆಳಗಾವಿ 590010
ಮೊ: 9902130041



ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 13ನೇ ಪದವೀಧರರ ದಿನಾಚರಣೆ. ಶ್ರೀ ಪಿ. ಶಿವಾನಂದ ಭಾರತಿ, ಪ್ರೊ. ಕೆ.ಎಸ್. ಸುರೇಶ್, ಸರ್ವೋಚ್ಚ ನ್ಯಾಯಾಲಯದ ಗೌ.ನ್ಯಾ. ಶ್ರೀ ಸಿ.ಟಿ. ರವಿಕುಮಾರ್, ಕರ್ನಾಟಕ ಉಚ್ಚ ನ್ಯಾಯಾಲಯದ ಗೌ.ನ್ಯಾ. ಶ್ರೀಮತಿ ಎಸ್. ಸುಜಾತಾ, ಡಾ. ಸಿ.ಜಿ. ಬೆಟಸೂರಮಠ, ಡಾ. ಎಸ್ ನಟರಾಜು ಹಾಗೂ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿದ್ದಾರೆ (30 ಅಕ್ಟೋಬರ್ 2021)



ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಡಾ. ಹೆಚ್.ಆರ್. ಮಣಿಕರ್ಣಿಕ ಹಾಗೂ ಡಾ. ಬಿ.ಎನ್. ಶೇಷಾದ್ರಿಯವರಿಗೆ ಡಾ. ಸಿ.ಎನ್. ಮೃತ್ಯುಂಜಯಪ್ಪ ಆದರ್ಶ ವೈದ್ಯ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರೀ ಶೈಲೇಂದ್ರ ಮೃತ್ಯುಂಜಯಪ್ಪ, ಶ್ರೀ ರಾಜೇಂದ್ರ ಮೃತ್ಯುಂಜಯಪ್ಪ, ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಶ್ರೀ ಶರತ್‌ಚಂದ್ರ ಮೃತ್ಯುಂಜಯಪ್ಪ, ಶ್ರೀಮತಿ ಸುಧಾ ಮೃತ್ಯುಂಜಯಪ್ಪ, ಶ್ರೀ ಎಂ. ಶಿವಣ್ಣ, ಪ್ರೊ. ಎಂ. ಕೃಷ್ಣೇಗೌಡ, ಶ್ರೀ ಸಿ.ಹೆಚ್. ವಿಜಯಶಂಕರ್, ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಮ.ಗು. ಸದಾನಂದಯ್ಯ, ಡಾ. ಹೆಚ್. ಬಸವನಗೌಡಪ್ಪ ಹಾಗೂ ಶ್ರೀ ಹೆಳವರಹುಂಡಿ ಸಿದ್ಧಪ್ಪನವರುಗಳಿದ್ದಾರೆ (31 ಅಕ್ಟೋಬರ್ 2021)



ಮೈಸೂರು ಶ್ರೀ ಸತ್ಯಸಾಯಿಬಾಬಾ ಶಾಲೆಯಲ್ಲಿ ಪ್ರೊ. ಕೆ.ಬಿ. ಪ್ರಭುಪ್ರಸಾದ್‌ರವರಿಗೆ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಅಭಿನಂದನಾ ಗ್ರಂಥ ಬಿಡುಗಡೆ ಹಾಗೂ ಸನ್ಮಾನ ಸಮಾರಂಭದಲ್ಲಿ ಪ್ರೊ. ಕೆ.ಬಿ. ಪ್ರಭುಪ್ರಸಾದ್ ದಂಪತಿಗಳನ್ನು ಗೌರವಿಸಲಾಯಿತು. ಶ್ರೀ ಡಿ.ಎನ್. ಲೋಕಪ್ಪ, ಶ್ರೀ ಎನ್.ಆರ್. ರಾವ್, ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ, ಸ್ವಾಮಿ ಶ್ರೀ ಸರ್ವದಯಾನಂದಜಿ ಮಹಾರಾಜ್, ಡಾ. ಡಿ.ಬಿ. ನಟೇಶ್, ಪ್ರೊ. ಶಿವಾಜಿ ಜೋಯಿಸ್, ಶ್ರೀ ತ್ರಿಮೂರ್ತಿ, ಶ್ರೀ ಕೆ. ಸತೀಶ್ ಹಾಗೂ ಪ್ರೊ. ಹೆಚ್.ಜಿ. ಕೃಷ್ಣಪ್ಪರವರುಗಳಿದ್ದಾರೆ (31 ಅಕ್ಟೋಬರ್ 2021)



ಚಾಮರಾಜನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಮಂಟೇಸ್ವಾಮಿ ಅಧ್ಯಯನ ಪೀಠವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜ್ಯೋತಿ ಬೆಳಗಿಸಿ ಉದ್ಘಾಟಿಸಲಾಯಿತು. ಶ್ರೀ ದೊಡ್ಡಾಚಾರಿ, ಡಾ. ದಾಮೋದರ್, ಪ್ರೊ. ಜಿ. ಹೇಮಂತಕುಮಾರ್, ವರ್ಚಸ್ವಿ ಶ್ರೀ ಶ್ರೀಕಂಠ ಸಿದ್ಧಲಿಂಗ ರಾಜೇ ಅರಸ್, ಶ್ರೀ ಪ್ರದೀಪ್‌ಕುಮಾರ್ ದೀಕ್ಷಿತ್, ಶ್ರೀ ಆರ್. ಮಹೇಶ್, ಪ್ರೊ. ಕೃಷ್ಣಮೂರ್ತಿ ಹನೂರು ಹಾಗೂ ಶ್ರೀ ಆರ್. ಶಿವಪ್ಪರವರುಗಳಿದ್ದಾರೆ (11 ನವೆಂಬರ್ 2021)



ಬೆಂಗಳೂರಿನ ಇನ್‌ಫ್ಯಾಂಟ್ರಿ ರಸ್ತೆಯಲ್ಲಿ ನೂತನವಾಗಿ ಪ್ರಾರಂಭಿಸಿದ ಸ್ಪರ್ಶ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಸೃಷ್ಟಿ ಪಾಟೀಲ್, ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಶ್ರೀಮತಿ ಅನ್ನಪೂರ್ಣ ಪಾಟೀಲ್, ಗೌ.ನ್ಯಾ ಡಾ. ಶಿವರಾಜ್ ವಿ. ಪಾಟೀಲ್, ಶಾಸಕರುಗಳಾದ ಶ್ರೀ ಎನ್.ಎ. ಹ್ಯಾರಿಸ್ ಮತ್ತು ಡಾ. ಶಾಮನೂರು ಶಿವಶಂಕರಪ್ಪ, ಡಾ. ಶರಣ್ ಎಸ್. ಪಾಟೀಲ್, ಶ್ರೀಮತಿ ಮೀನಾ ಶರಣ್ ಪಾಟೀಲ್ ಹಾಗೂ ಡಾ. ಸಂಸ್ಕೃತಿ ಪಾಟೀಲ್‌ರವರುಗಳಿದ್ದಾರೆ (14 ನವೆಂಬರ್ 2021)




ಬೆಂಗಳೂರಿನ ಹೆಚ್‌ಎಸ್‌ಆರ್ ಲೇಔಟ್‌ನಲ್ಲಿ ಆಸ್ಪೈರ್ ಫರ್ಟಿಲಿಟಿ ಸೆಂಟರನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಮಹೇಶ್ವರಪ್ಪ, ಶಾಸಕರಾದ ಶ್ರೀ ಎಂ. ಸತೀಶ್ ರೆಡ್ಡಿ, ಡಾ. ಜಿ.ಬಿ. ರೇಣುಕ, ಡಾ. ಜಿ.ಎಂ. ಅರವಿಂದ ಮೊದಲಾದವರುಗಳಿದ್ದಾರೆ (14 ನವೆಂಬರ್ 2021)



ಕಲಬುರಗಿಯ ಶ್ರೀ ಸುಲಫಲಮಠದ ಜಗದ್ಗುರು ಡಾ. ಶ್ರೀ ಸಾರಂಗಧರ ದೇಶಿಕೇಂದ್ರ ಮಹಾಸ್ವಾಮಿಗಳ 40ನೇ ವರ್ಷದ ಪಟ್ಟಾಧಿಕಾರ ಪೀಠಾರೋಹಣ ಸಮಾರಂಭ ಹಾಗೂ ಎನ್.ಜೆ. ಕಲಬುರಗಿ ಕಲ್ಯಾಣ ಮಂಟಪ ಉದ್ಘಾಟನಾ ಸಮಾರಂಭದಲ್ಲಿ ಸುಲಫಲಮಠದ ಶ್ರೀಗಳನ್ನು ಸನ್ಮಾನಿಸಲಾಯಿತು. ಡಾ. ಅಜಯ್‌ಸಿಂಗ್, ಶ್ರೀ ಬಿ.ಜಿ. ಪಾಟೀಲ್, ಪರಮಪೂಜ್ಯ ಜಗದ್ಗುರುಗಳು, ನಿಡುಮಾಮಿಡಿ ಶ್ರೀಗಳು, ಶ್ರೀ ಮುರುಘಾ ಶರಣರು, ಶ್ರೀ ದತ್ತಾತ್ರೇಯ ಸಿ. ಪಾಟೀಲ ರೇವೂರ, ಶ್ರೀ ಮಹಮ್ಮದ್ ಅಲಾವುದ್ದೀನ್ ಜುನೇದಿ, ಮೊದಲಾದವರುಗಳಿದ್ದಾರೆ (15 ನವೆಂಬರ್ 2021)



ನಂಜನಗೂಡು ತಾಲ್ಲೂಕು ಹುಳಿಮಾವು ಗ್ರಾಮದಲ್ಲಿ ಶ್ರೀ ಎಚ್.ಪಿ. ಮಹಾದೇವಸ್ವಾಮಿಯವರ ಶ್ರೀ ಶಿವರಾತ್ರೀಶ್ವರ ಸಾವಯವ ಕೃಷಿ ಫಾರಂನ್ನು ಸಸಿ ನೆಡುವ ಮೂಲಕ ಪರಮಪೂಜ್ಯ ಜಗದ್ಗುರುಗಳು ಉದ್ಘಾಟಿಸಿದರು. ಶ್ರೀ ಹೆಚ್.ಬಿ. ದೇವಣ್ಣ, ಶ್ರೀ ನಾಗರಾಜಪ್ಪ, ಶ್ರೀ ಎಚ್.ಪಿ. ಮಹಾದೇವಸ್ವಾಮಿ, ಕುಟುಂಬ ಸದಸ್ಯರು ಮತ್ತು ಇತರರಿದ್ದಾರೆ (22 ನವೆಂಬರ್ 2021)




ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ವಸುಂಧರಾ ಪರ್‌ಫಾರ್ಮಿಂಗ್ ಆರ್ಟ್ಸ್ ಸೆಂಟರ್ ಆಯೋಜಿಸಿದ್ದ ವಸುಂಧರೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಡಾ. ಜಗನ್ನಾಥ ಶೆಣೈ ಉದ್ಘಾಟಿಸಿದರು. ಶ್ರೀಮತಿ ಸವಿತಾ ರಮೇಶ್, ಡಾ. ವಸುಂಧರ ದೊರೆಸ್ವಾಮಿ, ಶ್ರೀ ಎಲ್. ಚನ್ನಬಸವರಾಜುರವರುಗಳಿದ್ದಾರೆ (23 ನವೆಂಬರ್ 2021)



ನಂಜನಗೂಡು ತಾಲ್ಲೂಕು ವಳಗೆರೆಯ ಶ್ರೀ ತೆನ್ನೂರು ಮಲ್ಲೇಶ್ವರಸ್ವಾಮಿ ನೂತನ ದೇವಸ್ಥಾನ ಹಾಗೂ ವಿಗ್ರಹ ಪ್ರತಿಷ್ಠಾಪನೆ ಸಂದರ್ಭದಲ್ಲಿ ಏರ್ಪಡಿಸಿದ್ದ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಜ್ಯೋತಿ ಬೆಳಗಿಸಿ ಉದ್ಘಾಟಿಸಲಾಯಿತು. ಮಾದಾಪಟ್ಟಣ, ಬರಡನಪುರ, ದೇವಿರಮ್ಮನಹಳ್ಳಿ ಮಠಗಳ ಶ್ರೀಗಳು, ನಿಗಮ ಮಂಡಳಿಗಳ ಅಧ್ಯಕ್ಷರುಗಳಾದ ಶ್ರೀ ಎಸ್. ಮಹಾದೇವಯ್ಯ, ಶ್ರೀ ಕೃಷ್ಣಪ್ಪಗೌಡ ಮೊದಲಾದವರುಗಳಿದ್ದಾರೆ (23 ನವೆಂಬರ್ 2021)



ತುಮಕೂರಿನ ಅರಳೇಪೇಟೆ ಶ್ರೀ ಬಸವೇಶ್ವರಸ್ವಾಮಿ ದೇವಾಲಯದ ಜೀರ್ಣೋದ್ಧಾರ ಹಾಗೂ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮದ ಉದ್ಘಾಟನೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿಸಲಾಯಿತು. ಕನಕಪುರ ಶ್ರೀ ದೇಗುಲಮಠದ ಶ್ರೀ ಚನ್ನಬಸವ ಸ್ವಾಮಿಗಳು, ಸಚಿವರಾದ ಶ್ರೀ ಬಿ.ಸಿ. ನಾಗೇಶ್, ಡಾ. ಸಿ. ಸೋಮಶೇಖರ್ ಮೊದಲಾದವರುಗಳಿದ್ದಾರೆ (29 ನವೆಂಬರ್ 2021)



ಮೈಸೂರಿನ ವಿಶ್ವೇಶ್ವರನಗರದಲ್ಲಿ ಅಥರ್ವ ಮಲ್ಟಿ ಸ್ಪೆಷಾಲಿಟಿ ಆಯುರ್ವೇದಿಕ್ ಮತ್ತು ಹೀಲಿಂಗ್ ಸೆಂಟರ್‌ನ ಎರಡನೇ ಶಾಖೆ ಅಮಯ್ ಇಂಡಿಯಾವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಬಿ.ಎಸ್. ಪ್ರಶಾಂತ್, ಶ್ರೀ ಎಂ.ಎಲ್. ನಾಗೇಶ್, ಅವರ ಕುಟುಂಬ ಸದಸ್ಯರು ಹಾಗೂ ಇತರರಿದ್ದಾರೆ (1 ಡಿಸೆಂಬರ್ 2021)



ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 36ನೆಯ ಪುಣ್ಯ ಸಂಸ್ಮರಣೆಯ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕರ್ತೃಗದ್ದುಗೆಯಲ್ಲಿ ರುದ್ರಾಭಿಷೇಕ, ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಿದವು. ನಂಜನಗೂಡು, ಮಾದಹಳ್ಳಿ, ಪಡುಗೂರು, ನೀಲಕಂಠಸ್ವಾಮಿಮಠ, ಹೊಸಮಠ, ಬೆಟ್ಟದಪುರ, ಚಿಕ್ಕತುಪ್ಪೂರು, ಹುಲಿಯೂರುದುರ್ಗ, ಕುಂದೂರು ಮಠ, ರಾಮಾಪುರ, ರಾಗಿಬೊಮ್ಮನಹಳ್ಳಿ, ದಂಡಿಕೆರೆ, ಕುದೇರುಮಠ, ಚುಂಚನಹಳ್ಳಿ, ಶಿರಮಹಳ್ಳಿ ಮಠಗಳ ಶ್ರೀಗಳು ಹಾಗೂ ಗುರುಕುಲ ಸಾಧಕರುಗಳಿದ್ದಾರೆ (8 ಡಿಸೆಂಬರ್ 2021)



ಉಡುಪಿ ಜಿಲ್ಲೆ ಕಿನ್ನಿಗೋಳಿಯಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಶಕ್ತಿದರ್ಶನ ಯೋಗಾಶ್ರಮದ ಗೋಚರ ಭೂಮಿ ಕಪಿಲ ಸಂಗಮದ ಉದ್ಘಾಟನಾ ಕಾರ್ಯಕ್ರಮದಲ್ಲಿ ಬೆಳ್ಳಿಹಬ್ಬದ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಲಾಯಿತು. ಡಾ. ಮೋಹನ್ ಆಳ್ವ, ಶ್ರೀ ದೇವಬಾಬಾ ಗುರೂಜಿ ಮೊದಲಾದವರಿದ್ದಾರೆ (13 ಡಿಸೆಂಬರ್ 2021)



ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ ಪ್ರೊ. ನಿರಂಜನ ವಾನಳ್ಳಿಯವರ 'ತಶಾಕೂರ್ ತಜಕಿಸ್ತಾನ' ಕೃತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಕು. ಸಿರಿ ವಾನಳ್ಳಿ, ಶ್ರೀಮತಿ ಸವಿತಾ ವಾನಳ್ಳಿ, ಪ್ರೊ. ಎಚ್.ಎಸ್. ಹರಿಶಂಕರ್, ಪ್ರೊ. ಪ್ರಧಾನ ಗುರುದತ್ತರವರುಗಳಿದ್ದಾರೆ (18 ಡಿಸೆಂಬರ್ 2021)



ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ ಡಾ. ಎನ್.ಎಂ. ಗಿರಿಜಾಪತಿಯವರ 'ಯುಗದ ಜಂಗಮ' ಹಾಗೂ 'ಶ್ರೀ ರಾಮ ಭಾರತಂ' ಕೃತಿಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಶ್ರೀ ಚಂದ್ರಶೇಖರ್, ಡಾ. ಸಿ. ನಾಗಣ್ಣ, ಡಾ. ಎನ್.ಎಂ. ಗಿರಿಜಾಪತಿ, ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಡಾ. ವಿಜಯಕುಮಾರಿ ಎಸ್. ಕರಿಕಲ್, ಶ್ರೀಮತಿ ಶಾರದಾ ವೀರಯ್ಯ ಮತ್ತು ಡಾ. ಹೆಳವರಹುಂಡಿ ಸಿದ್ಧಪ್ಪರವರುಗಳಿದ್ದಾರೆ (19 ಡಿಸೆಂಬರ್ 2021)



ಸುತ್ತೂರು ಶ್ರೀಕ್ಷೇತ್ರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ ವತಿಯಿಂದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಬಾಲ ಪ್ರತಿಭೆ ಕು. ರಿಷಿ ಶಿವ ಪ್ರಸನ್ನರವರ 'ಎಲಿಮೆಂಟ್ಸ್ ಆಫ್ ಅರ್ಥ್' ಕೃತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು. ಶ್ರೀ ಹೆಳವರಹುಂಡಿ ಸಿದ್ಧಪ್ಪ ಪ್ರೊ. ಮಲೆಯೂರು ಗುರುಸ್ವಾಮಿ, ಡಾ. ಗೊರುಚ, ಕು. ರಿಷಿ ಶಿವ ಪ್ರಸನ್ನ, ಸಚಿವರಾದ ಶ್ರೀ ಬಿ.ಸಿ. ನಾಗೇಶ್, ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ ಹಾಗೂ ಶ್ರೀ ಮ.ಗು. ಸದಾನಂದಯ್ಯನವರುಗಳಿದ್ದಾರೆ (11 ಡಿಸೆಂಬರ್ 2021).



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರಾದ ಪ್ರೊ. ಮಲೆಯೂರು ಗುರುಸ್ವಾಮಿಯವರಿಗೆ ಡಾ. ಗೊ.ರು. ಚನ್ನಬಸಪ್ಪನವರು ಅಧಿಕಾರ ಹಸ್ತಾಂತರಿಸಿದರು (6 ಡಿಸೆಂಬರ್ 2021).

**Registered with the Registrar of Newspapers in India Under No. 50622/86**
**'Prasada' Bi-Monthly, Vol. 36 Issue No. 6, November-December 2021**



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನೂತನವಾಗಿ ಸ್ಥಾಪಿಸಿದ ಆಕ್ಸಿಜನ್ ಜನರೇಟರ್ ಮತ್ತು ಲಿಕ್ವಿಡ್ ಮೆಡಿಕಲ್ ಆಕ್ಸಿಜನ್ ಪ್ಲಾಂಟ್‌ಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿರವರು ಉದ್ಘಾಟಿಸಿದರು. ಡಾ. ಸಿ.ಜಿ. ಬೆಟಸೂರಮಠ, ಶಾಸಕರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ಎಸ್.ಎ. ರಾಮದಾಸ್, ಶ್ರೀ ತನ್ವೀರ್ ಸೇಠ್ ಶ್ರೀ ಎಲ್. ನಾಗೇಂದ್ರ, ಮೇಯರ್ ಶ್ರೀಮತಿ ಸುನಂದಾ ಪಾಲನೇತ್ರ, ಸಚಿವರಾದ ಡಾ. ಕೆ. ಸುಧಾಕರ್ ಹಾಗೂ ಸಂಸದರಾದ ಶ್ರೀ ಪ್ರತಾಪ ಸಿಂಹರವರುಗಳಿದ್ದಾರೆ (26 ಡಿಸೆಂಬರ್ 2021)

**ಬಿಡಿ ಪ್ರತಿ: ರೂ. 10**

e-mail: prasadamagazine@gmail.com * www.jssonline.org